ಸಂಪುಟ: 13 Volume ಸಂಚಿಕೆ: 262 Issue ಪುಟಗಳು 08 Pages | ಗುರುವಾರ 04 ಡಿಸೆಂಬರ್ 2025 | ₹6 | RNINO:KARKAN/2011/48371 | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಮನುಷ್ಯನ ಆಸೆಗಳು ಸದಾ ಹಕ್ಕಿಗಳ ಹಾಗೆ ಹಾರುತ್ತವೆ. ಅವುಗಳಿಗೆ ಕಡಿವಾಣ ಹಾಕದಿದ್ದರೆ ಬದುಕು ದುರ್ಭರವಾಗುತ್ತದೆ. ಅದೇ ಆಸೆಯನ್ನು ತಡೆದರೆ ಜೀವನ ಸುಖಮಯವಾಗುತ್ತದೆ. ಪ್ರಯತ್ನ ಸದಾ ಇರಲಿ.

–ಜಗದ್ಗುರು ಗುರು ನಾನಕ್

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಮಹಿಳೆಯರ ಸಾಧನೆ ಅವಿಸ್ಮರಣೀಯ 6 | ದತ್ತ ಜಯಂತಿ ಉತ್ಸವ ಇಂದು 7 | ಆಧುನಿಕತೆಯಿಂದ ರಂಗಭೂಮಿ ಮರೆ 8

## ನಟ ದರ್ಶನ್‌ಗೆ ಮತ್ತೊಂದು ಶಾಕ್



**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ವೇಳೆ ಪೊಲೀಸರು ನಟ ದರ್ಶನ್ ಹಾಗೂ ಆಪ್ತರ ಮನೆಯಲ್ಲಿ ವಶಪಡಿಸಿಕೊಂಡಿದ್ದ ಹಣವನ್ನು ಆದಾಯ ತೆರಿಗೆ ಇಲಾಖೆಗೆ ನೀಡುವಂತೆ ಬೆಂಗಳೂರು 64ನೇ ಸಿಸಿಎಚ್ ನ್ಯಾಯಾಲಯ ಆದೇಶಿಸಿದೆ. 2024 ರ ಜೂನ್‌ನಲ್ಲಿ ರೇಣುಕಾಸ್ವಾಮಿ ಕೊಲೆಯಾದಾಗ ನಟ ದರ್ಶನ್‌ನಿಂದ ಪೊಲೀಸರು 82 ಲಕ್ಷ ರೂಪಾಯಿ ಹಣವನ್ನು ವಶಪಡಿಸಿಕೊಂಡಿದ್ದರು. ಈ ಹಣವನ್ನು ತಮ್ಮ ವಶಕ್ಕೆ ನೀಡಬೇಕೆಂದು ಆದಾಯ ತೆರಿಗೆ ಇಲಾಖೆ ಮನವಿ ಮಾಡಿತ್ತು. ಈ ಮೂಲಕ 82 ಲಕ್ಷ ರೂಪಾಯಿ ಹಣ ಆದಾಯ ತೆರಿಗೆ ಇಲಾಖೆಯ ವಶಕ್ಕೆ ನೀಡಲಾಗಿದೆ.



ಕೇರಳದ ಮಂಜೇಶ್ವರದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಯು ಡಿ ಎಫ್ ಅಭ್ಯರ್ಥಿಗಳ ಪರ ಸಚಿವ ಜಮೀರ್ ಅಹಮದ್ ಖಾನ್ ಪ್ರಚಾರ ನಡೆಸಿದರು. ಶಾಸಕ ಎಂ. ಕೆ. ಅಶ್ರಫ್ ಉಪಸ್ಥಿತರಿದ್ದರು.

## ಲೋಕ ಭವನ ಕರ್ನಾಟಕ ನಾಮಕರಣ

**ಬೆಂಗಳೂರು:** ಕರ್ನಾಟಕ ರಾಜ್ಯಪಾಲರ ನಿವಾಸ ಬೆಂಗಳೂರಿನ ರಾಜ ಭವನದ ಹೆಸರನ್ನು ಬದಲಾವಣೆ ಮಾಡಲಾಗಿದೆ. ಇನ್ನು ಮುಂದೆ ಲೋಕ ಭವನ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಗಿದೆ. ಭಾರತ ಸರ್ಕಾರದ ಗೃಹ ಸಚಿವಾಲಯದ ಸಂವಹನದ ಅನುಸಾರವಾಗಿ ಈ ಬದಲಾವಣೆ ಮಾಡಲಾಗಿದೆ. ಕರ್ನಾಟಕ ರಾಜ್ಯಪಾಲರ ಅನುಮೋದನೆಯ ಪ್ರಕಾರ, ರಾಜ ಭವನ, ಕರ್ನಾಟಕ ಎಂಬ ಸಂಸ್ಥೆಯ ಹೆಸರನ್ನು ಮಾರ್ಪಡಿಸಲಾಗಿದೆ. ಲೋಕ ಭವನ, ಕರ್ನಾಟಕ" ಎಂದು ಮರುನಾಮಕರಣ ಮಾಡಲಾಗಿದೆ.



ಆಂಧ್ರಪ್ರದೇಶದ ರಾಜ್ಯಪಾಲ ಅವರನ್ನು ಹೂಗುಚ್ಛ ನೀಡಿ ಭೇಟಿ ಮಾಡಿದ ಸಚಿವ ರಾಮಲಿಂಗಾರೆಡ್ಡಿ.

# ಕಮಲದಡಿ ಕಿಡಿ ಕೈಯಲ್ಲಿ ಕೆಂಡ

## ಬಿಜೆಪಿಯಲ್ಲಿ ನಾಯಕತ್ವದ ಬಡಿದಾಟ | ಕಾಂಗ್ರೆಸ್‌ನಲ್ಲಿ ಸಿಎಂ ಕುರ್ಚಿಯ ಕಾದಾಟ

• ಮಲ್ಲಮ್ಮ ನುಡಿ ಬೆಂಗಳೂರು

ಕಾಂಗ್ರೆಸ್‌ನಲ್ಲಿ ಕುರ್ಚಿಯ ಕಿಡಿ ಬೆಳಗುತ್ತಿದ್ದರೆ, ಬಿಜೆಪಿಯಲ್ಲೂ ನಾಯಕತ್ವದ ಕೆಂಡ ಹೊಗೆಯಾಡುತ್ತಿದೆ. ರಾಜ್ಯದ ಪ್ರಗತಿಗೆ ಶ್ರಮಿಸಬೇಕಾದ ನಾಯಕರು ಕುರ್ಚಿಯ ಕಾಗಳಗದಲ್ಲಿದ್ದರೆ, ಇವರನ್ನು ಎಚ್ಚರಿಸಬೇಕಾದ ಹೈಕ ಮಾಂಡ್‌ಗಳು ಮೌನವಾಗಿರುವುದು ಚರ್ಚೆಗೆ ಗ್ರಾಸವೊದಿಸಿದೆ.

ಕಾಂಗ್ರೆಸ್‌ನ್ಲಲಿ ಸಿಎಂ ಹುದ್ದೆ ಬಣ ಬಡಿದಾಟಕ್ಕೆ ಸಂಬಂಧಪಟ್ಟಂತೆ ಕರಾವಳಿ ಜಿಲ್ಲೆ ಮಂಗಳೂರಿನಲ್ಲಿ ಇಂದು ಹೈಡ್ರಾಮಾವೇ ನಡೆದಿದೆ.

**ಅಸಮಾಧಾನ, ಬಣಗಳ ಕಿಡಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಒಪ್ಪಂದದ ಬಗ್ಗೆ ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಸಮಾಧಾನ, ಬಣ ರಾಜಕೀಯ ಇನ್ನೂ ಶಮನಗೊಂಡಿಲ್ಲ. ಬುಧವಾರ ಮಂಗಳೂರು ವಿಮಾನ ನಿಲ್ದಾಣದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಡಿ ಕೆ ಶಿವಕುಮಾರ್ ಪರ ಘೋಷಣೆಗಳೊಂದಿಗೆ ಸ್ವಾಗತಿಸಲಾಗಿದೆ. ವೇಣುಗೋಪಾಲ್ ಟರ್ಮಿನಲ್‌ನಿಂದ ನಿರ್ಗಮಿಸುತ್ತಿದ್ದಂತೆ ಪಕ್ಷದ ಕಾರ್ಯಕರ್ತರ ಗುಂಪೊಂದು ಶಿವಕುಮಾರ್‌ಗೆ ಬೆಂಬಲ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿದೆ.



### ಬಿಜೆಪಿಯಲ್ಲೂ ಬಂಡಾಯದ ಬಣ





ರಾಜ್ಯ ಕಾಂಗ್ರೆಸ್‌ನಲ್ಲಿ ಕುಸ್ತಿ ಕದನ ನಡೆಯುತ್ತಿರುವ ನಡುವಲ್ಲೇ ರಾಜ್ಯ ಬಿಜೆಪಿಯಲ್ಲೂ ರೆಬೆಲ್ ಟೀಮ್ ಮತ್ತೆ ಸಕ್ರಿಯವಾಗಿದೆ. ರಮೇಶ್ ಜಾರಕಿಹೊಳಿ ನೇತೃತ್ವದಲ್ಲಿ ಕುಮಾರ್ ಬಂಗಾರಪ್ಪ, ಶ್ರೀಮಂತ್ ಪಾಟೀಲ್, ಬಿ.ವಿ. ನಾಯಕ್, ಬಿ.ಪಿ. ಹರೀಶ್, ಮಾಜಿ ಸಂಸದ ಸಿದ್ದೇಶ್ವರ ಮತ್ತು ಜೆಡಿಎಸ್‌ನ ಎನ್.ಆರ್. ಸಂತೋಷ್ ಸೇರಿ ಹಲವು ರೆಬೆಲ್ ನಾಯಕರು ದೆಹಲಿಗೆ ತೆರಳಿದ್ದಾರೆ.

### ಕೈ ಅಹಿಂದ ನಾಯಕರು ಸಾಥ್

ಮಂಗಳೂರಿಗೆ ತೆರಳಿದ್ದ ಸಿಎಂ ಸಿದ್ದರಾಮಯ್ಯನವರಿಗೆ ಅಹಿಂದ ನಾಯಕರು ಸಾಥ್ ನೀಡಿದ್ದಾರೆ. ಉಳ್ಳಾಲದಲ್ಲಿ ಗಾಂಧಿ– ಗುರು ಸಂವಾದದ 100 ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಬಿಕೆ ಹರಿಪ್ರಸಾದ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದಾರೆ. ಇದೇ ವೇಳೆ ಡಿಸಿಎಂ ಡಿಕೆ ಶಿವಕುಮಾರ್ ಕಾರ್ಯಕ್ರಮದಿಂದ ದೂರ ಉಳಿದಿದ್ದಾರೆ.

### ಜಾರಕಿ ಹೊಳಿ ವಿರುದ್ಧ ಎಂಬಿಪಿ ನುಡಿ

ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡುವುದು ಪಕ್ಕಾ ಎಂದು ಆಪ್ತ ಬಣದಲ್ಲಿರುವ ಸತೀಶ್ ಜಾರಕಿಹೊಳಿ ಅವರೇ ಹೇಳಿದ ಹೊರತಾಗಿಯೂ, ಸದ್ಯಕ್ಕೆ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅಪಸ್ವರ ತೆಗೆದಿದ್ದಾರೆ. ಸತೀಶ್ ಜಾರಕಿಹೊಳಿ ಹೇಳಿರಬಹುದು. ಆದರೆ ಯಾವಾಗ ಎಂಬ ಪ್ರಶ್ನೆ ಉದ್ಭವಿಸಿದೆ ಎಂದು ವ್ಯತಿರಿಕ್ತವಾಗಿ ಮಾತನಾಡಿದ್ದಾರೆ.

### ಅಧಿಕಾರ ಬಿಡುವುದು ಪಕ್ಕಾ

ಮುಖ್ಯಮಂತ್ರಿಗಳು ಮಾನಸಿಕವಾಗಿ ಸಿದ್ಧರಾಗಿದ್ದಾರೆ ಎಂದಲ್ಲ, ಆದರೆ ಮೂವತ್ತು ತಿಂಗಳ ನಂತರವಾದರೂ ಬಿಡಬಹುದು, ಅದಕ್ಕೂ ಮೊದಲೇ ಬಿಡಬಹುದು. ಬಿಡುವುದಂತೂ ಪಕ್ಕಾ. ಯಾವಾಗಲಾದ್ರೂ ಬಿಡಲೇಬೇಕು ಎಂದು ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ. ಮುಖ್ಯಮಂತ್ರಿ ಸ್ಥಾನದ ಬಗ್ಗೆ ಎಲ್ಲಾ ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳಲಿದೆ. ಯಾವ ರೀತಿಯಲ್ಲಿ ಹೈಕಮಾಂಡ್ ಬಗೆಹರಿಸುತ್ತದೆ ಎಂದು ನೋಡೋಣ ಎಂದಿದ್ದಾರೆ.

## ಒಬ್ಬರ ಕೈಯಲ್ಲಿ ಹೈಶಕ್ತಿ



**ಬೆಂಗಳೂರು:** ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರು ಎಐಸಿಸಿ ಅಧ್ಯಕ್ಷರಿಗಿಂತ ದೊಡ್ಡವರು ಮತ್ತು ಹೈಕಮಾಂಡ್ ಎಂಬುದು ಇದೀಗ ಸ್ಪಷ್ಟಗೊಂಡಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ಇದು ಕಾಂಗ್ರೆಸ್ಸಿನ ಪರಿಸ್ಥಿತಿ; ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ವೇಣುಗೋಪಾಲರನ್ನು ಭೇಟಿ ಮಾಡಿದ್ದಾರೆ. ಯಾವುದೋ ಒಬ್ಬ ವ್ಯಕ್ತಿಯ ಕೈಯಲ್ಲಿ ಹೈಕಮಾಂಡಿನ ಶಕ್ತಿ ಇದೆ ಎಂದು ತಿಳಿಸಿದ್ದಾರೆ. 8ರಿಂದ ಬೆಳಗಾವಿಯಲ್ಲಿ ಸದನ ಆರಂಭವಾಗಲಿದೆ. ಉತ್ತರ ಕರ್ನಾಟಕ ಭಾಗದ ವಿಷಯಗಳನ್ನು ಚರ್ಚಿಸಲು ಅಲ್ಲಿ ಅಧಿವೇಶನ ಮಾಡಲಾಗುತ್ತದೆ ಎಂದಿದ್ದಾರೆ.

## ಮಸೀದಿಯ ಮುಂದೆ ಭಕ್ತ ಹೈಡ್ರಾಮಾ

**ಮಂಡ್ಯ:** ಶ್ರೀರಂಗಪಟ್ಟಣದಲ್ಲಿರುವ ಜಾಮೀಯಾ ಮಸೀದಿ ಮುಂದೆ ಡಿ. 3ರ ಮಧ್ಯಾಹ್ನ ಹೈಡ್ರಾಮಾ ನಡೆದಿದೆ. ಇಲ್ಲಿ ಆಯೋಜಿಸಿದ್ದ ಬೃಹತ್ ಸಂಕೀರ್ತನಾ ಯಾತ್ರೆಯ ವೇಳೆ, ಹನುಮ ಮಾಲಾಧಾರಿಗಳು ಜಾಮೀಯಾ ಮಸೀದಿಯ ಮುಂದುಗಡೆಯಿಂದ ಸಾಗಿಹೋಗುವಾಗ ಇದ್ದಕ್ಕಿದ್ದ ಹಾಗೆ ಜಾಮಿಯಾ ಮಸೀದಿಯೊಳಗೆ ನುಗ್ಗಿದ್ದಾರೆ. ಅದರಿಂದಾಗಿ, ಜಾಮಿಯಾ ಮಸೀದಿ ಬಳಿ ಉದ್ವಿಗ್ನ ವಾತಾವರಣ ಉಂಟಾಗಿತ್ತು.

ಏನಿದು ಯಾತ್ರೆ: ಮೂಡಲಬಾಗಿಲು ಶ್ರೀ ಆಂಜನೇಯ ಸ್ವಾಮಿಯ ದೇಗುಲ ಮರುಸ್ಥಾಪನೆ ಸಂಕಲ್ಪದ ಈ ಬೃಹತ್ ಸಂಕೀರ್ತನಾ ಯಾತ್ರೆಯನ್ನು ಆಯೋಜಿಸಲಾಗಿದೆ. ಮೈಸೂರು, ಕೊಡಗು, ಹಾಸನ, ರಾಮನಗರ ಜಿಲ್ಲೆಗಳಿಂದ ಹನುಮ ಮಾಲಾಧಾರಿಗಳು ಆಗಮಿಸಿದ್ದರು.

## ಮಾಣಿಕ ಪ್ರಭು ದತ್ತಾತ್ರೇಯರ ಅವತಾರ

• ಮಲ್ಲಮ್ಮ ನುಡಿ ಹುಮನಾಬಾದ್

ಶ್ರೀಕ್ಷೇತ್ರ ಮಾಣಿಕನಗರದ ಪೂಜ್ಯಶ್ರೀ ಮಾಣಿಕ ಪ್ರಭು ಮಹಾರಾಜರು ದತ್ತಾತ್ರೇಯರ ಅವತಾರ ಎಂದು ಲಕ್ಷಾಂತರ ಭಕ್ತರು ಭಾವಭಕ್ತಿಯಿಂದ ನಂಬಿಕೊಂಡಿದ್ದಾರೆ. ಪ್ರತಿವರ್ಷ ನಡೆಯುವ ಮಾಣಿಕ ಪ್ರಭು ಜಯಂತಿ ಇಲ್ಲಿ ಅತ್ಯಂತ ವೈಭವದಿಂದ ಜರಗುತ್ತಿದ್ದು, ದೇಶದ ನಾನಾ ಭಾಗಗಳಿಂದ ಹರಿದುಬರುವ ಭಕ್ತರ ಸಮಾಗಮಕ್ಕೆ ಊರೇ ಉತ್ಸವ ವಾತಾವರಣಕ್ಕೆ ಮುಳುಗುತ್ತದೆ. ಮಾಣಿಕ ಪ್ರಭು ಮಹಾರಾಜರ ಉಪದೇಶಗಳಲ್ಲಿ ಏಕತೆಯ ತತ್ವ, ಮಾನವ ಸೇವೆ, ಜ್ಞಾನ, ಭಕ್ತಿ ಮಾರ್ಗಗಳ ಸಮನ್ವಯ ಪ್ರಮುಖವಾಗಿ ಬೆಳಕಿಗೆ ಬರುತ್ತದೆ. ಎಲ್ಲ ಧರ್ಮ ಮತಗಳ ಭಕ್ತರಿಗೆ ಸಮಾನ ಸ್ಥಾನ ನೀಡುವ ಅವರ ಸಂದೇಶ 'ಸರ್ವಧರ್ಮ ಸಮಭಾವ'ದ ಜೀವಂತ ಉದಾಹರಣೆಯೆಂದು ಭಕ್ತರು ಕೊಂಡಾಡುತ್ತಾರೆ.

ಶ್ರೀ ಕ್ಷೇತ್ರದಲ್ಲಿ ಪ್ರತಿದಿನ ನಡೆಯುವ ಅನ್ನಸಂತರ್ಪಣೆ, ಪಾರಾಯಣ, ದಾಸ ಸಾಹಿತ್ಯ ಭಜನೆ ಮತ್ತು ದತ್ತ ಸಂಕೀರ್ತನೆ ಕಾರ್ಯಕ್ರಮಗಳು ಭಕ್ತರನ್ನು ಆಕರ್ಷಿಸುತ್ತಿವೆ. ದಿನದಿಂದ ದಿನಕ್ಕೆ ಭಕ್ತರ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಂಸ್ಥಾನವು ಸೌಲಭ್ಯ ವಿಸ್ತರಣೆಗೆ ಮುಂದಾಗಿದೆ.

ಸ್ಥಳೀಯ ಭಕ್ತರು ತಮ್ಮ ಭಾವನೆ ಹಂಚಿಕೊಳ್ಳುತ್ತಾ, ಶ್ರೀ ಮಾಣಿಕ



ಪ್ರಭು ಮಹಾರಾಜರು ನಮ್ಮ ಪಾಲಿಗೆ ದತ್ತೂ, ದಯಾಮೂರ್ತಿಯೂ. ಅವರ ಆಶೀರ್ವಾದದಿಂದ ಊರಿಗೆ ಶಾಂತಿ, ಸಮೃದ್ಧಿ ಮತ್ತು ಸ್ನೇಹಭಾವ ಹೆಚ್ಚುತ್ತಿದೆ,' ಎಂದು ಮನಸಾರೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ನಡುವೆ, ಶ್ರೀ ಕ್ಷೇತ್ರದಲ್ಲಿ ನಡೆಯಲಿರುವ ವಿಶೇಷ ದತ್ತ ಜಯಂತಿ ಮಹೋತ್ಸವಕ್ಕಾಗಿ ಎಲ್ಲ ಸಿದ್ಧತೆಗಳು ಪೂರ್ಣಗೊಂಡಿದ್ದು, ಭಕ್ತರ ಸುರಕ್ಷತೆ, ಸಾರಿಗೆ ವ್ಯವಸ್ಥೆ, ನೀರು ವಿದ್ಯುತ್ ಸೌಲಭ್ಯಗಳನ್ನು ತಾಲೂಕು ಆಡಳಿತ ಬಲಪಡಿಸಿದೆ.




# ಠೇವಣಿ ವಾರಸುದಾರರಿಗೆ ಹಸ್ತಾಂತರಕ್ಕೆ ಶಿಬಿರ ಆಯೋಜನೆ

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ದೀರ್ಘಕಾಲದಿಂದ ಹಕ್ಕು ಪಡೆಯದೆ ಉಳಿದಿರುವ ಬ್ಯಾಂಕ್ ಠೇವಣಿಗಳು, ವಿಮಾ ಕಂತುಗಳು ಮತ್ತು ಷೇರುಗಳನ್ನು ಅವುಗಳ ಮಾಲೀಕರು ಅಥವಾ ಕಾನೂನುಬದ್ಧ ವಾರಸುದಾರರಿಗೆ ಹಸ್ತಾಂತರಿಸಲು ಇದೇ ಡಿಸೆಂಬರ್ 5 ರಂದು ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಜಿಲ್ಲಾ ಪಂಚಾಯತ್ ಹಳೇ ಸಭಾಂಗಣದಲ್ಲಿ ಶಿಬಿರ ಅಯೋಜಿಸಿದೆ.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮತ್ತು ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ ಅಧ್ಯಕ್ಷತೆಯಲ್ಲಿ ಶಿಬಿರ ನಡೆಯಲಿದ್ದು, ಸಾರ್ವಜನಿಕರು ಅಗತ್ಯ ಗುರುತಿನ ದಾಖಲೆಗಳು ಮತ್ತು ಅರ್ಹತಾ ಪತ್ರಗಳೊಂದಿಗೆ ಭಾಗವಹಿಸಿ ಹಣಕಾಸು ಹಸ್ತಾಂತರದ ಸವಲತ್ತುಗಳನ್ನು ಪಡೆಯಬಹುದೆಂದು ಜಿಲ್ಲಾ ಲೀಡ್ ಬ್ಯಾಂಕ್ ಚೀಫ್ ಮ್ಯಾನೇಜರ್ ರವಿಗೌಡ ತಿಳಿಸಿದ್ದಾರೆ.

ಭಾರತದ ಹಣಕಾಸು ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಬ್ಯಾಂಕ್, ವಿಮೆ ಮತ್ತು ಇತರ ಇಲಾಖಾ ಶಾಖೆಗಳಲ್ಲಿ ಡಿಸೆಂಬರ್ 31ರ ವರೆಗೆ ಶಿಬಿರ ನಡೆಯಲಿದ್ದು, ದೀರ್ಘಕಾಲದವರೆಗೆ ಹಕ್ಕು ಪಡೆಯದ ಹಣಕಾಸಿನ ಸ್ವತ್ತುಗಳನ್ನು ಹಸ್ತಾಂತರಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದಿರುವ ರವಿಗೌಡ ಅವರು, ಬ್ಯಾಂಕಿಂಗ್, ವಿಮಾ, ಹಣಕಾಸು ಹಾಗೂ ಇತರೆ ವಲಯಗಳ ಅಧಿಕಾರಿಗಳು ಈ ಶಿಬಿರದಲ್ಲಿ ಭಾಗವಹಿಸಿ ಅಗತ್ಯ ಸಲಹೆ ಸಹ ನೀಡಲಿದ್ದಾರೆ ಎಂದಿದ್ದಾರೆ.ಬ್ಯಾಂಕಿನಲ್ಲಿ ಮುಂದಿನ ಹತ್ತು ವರ್ಷಗಳ ಕಾಲ ನಿಷ್ಕ್ರಿಯ ಖಾತೆಗಳಲ್ಲಿರುವ ಹಣ ಮತ್ತು ಹತ್ತು ವರ್ಷಗಳಿಗಿಂತ ಹಳೆಯದಾದ ಕ್ಲೈಮ್ ಮಾಡದ ಠೇವಣಿಗಳನ್ನು ಆರ್‌ಬಿಐನ ಡಿಇಎ ನಿಧಿಗೆ ವರ್ಗಾಯಿಸಲಾಗುತ್ತದೆ. ವಾರಸುದಾರರು https://udgam.rbi.org.in ಇಲ್ಲಿಗೆ ಭೇಟಿ ನೀಡಿ ಯಾವುದೇ ಸಮಯದಲ್ಲಿ ಕ್ಲೈಮ್ ಮಾಡಬಹುದಾಗಿದೆ.

# ವಿವಿಧ ತರಬೇತಿಗೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಇವರ ವತಿಯಿಂದ ಗ್ರಾಮೀಣ ನಿರುದ್ಯೋಗಿ ಮಹಿಳೆಯರಿಗಾಗಿ ವಿವಿಧ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯಲ್ಲಿ ಮನೆಯಲ್ಲಿ ಅಗರಬತ್ತಿ ತಯಾರಿಸುವ 12 ದಿನಗಳು ಹಾಗೂ 20 ದಿನಗಳ ಕಾಲ ಹಪ್ಪಳ, ಉಪ್ಪಿನಕಾಯಿ ಮತ್ತು ಮಸಾಲಾ ಪುಡಿ ತಯಾರಿಕೆಯ ಮೂಲಗಳ ಕುರಿತು ತರಬೇತಿ ನೀಡಲಾಗುವುದು.

ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಹಾಗೂ ಉಚಿತ ವಸತಿ ಸೌಕರ್ಯದ ವ್ಯವಸ್ಥೆ ಇರುತ್ತದೆ. ಆಸಕ್ತರು 8ನೇ ತರಗತಿ ವ್ಯಾಸಂಗ ಮಾಡಿರುವ 18 ರಿಂದ 45 ವರ್ಷದೊಳಗಿನ ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳು ಆಧಾರ್ ಕಾರ್ಡ್ ಜೆ-ರಾಕ್ಸ್, ಗ್ರಾಮೀಣ ಪಡಿತರ ಚೀಟಿ (ಬಿಪಿಎಲ್, ಪಿಎಚ್‌ಎಚ್, ಎನ್‌ಪಿಎಚ್‌ಎಚ್ ಮತ್ತು ಆಯ್‌ವೈ) ಜೆರಾಕ್ಸ್, 4 ಫೋಟೋಗಳು, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಹಾಗೂ ಪ್ಯಾನ್ ಕಾರ್ಡ್ ಜೆರಾಕ್ಸ್‌ನೊಂದಿಗೆ ನವೆಂಬರ್ 13ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಆಶಾಪೂರು ರಸ್ತೆ, ರಾಯಚೂರು. ಅಥವಾ ಮೊಬೈಲ್ ಸಂಖ್ಯೆ: 8217382735, 9742470999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹತ್ತಿ ಖರೀದಿ ಆರಂಭ; ಸದುಪಯೋಗಕ್ಕೆ ಮನವಿ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು):** ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಹತ್ತಿ ಬೆಳೆಗಾರರಿಂದ ಭಾರತೀಯ ಹತ್ತಿ ನಿಗಮ ನಿಯಮಿತ (ಸಿಸಿಐ) ವತಿಯಿಂದ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಹತ್ತಿ ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಹತ್ತಿ ಬೆಂಬಲ ಬೆಲೆಯ ಕಾರ್ಯಕ್ರಮದಡಿ ಖರೀದಿ ಕೇಂದ್ರಗಳು ಮತ್ತು ನೋಂದಣಿ ಪ್ರಕ್ರಿಯೆ ಭಾರತೀಯ ಹತ್ತಿ ನಿಗಮದಿಂದ ಜಿಲ್ಲಾದ್ಯಂತ ವಿವಿಧ ಪ್ರಾಂಗಣಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ಇಲ್ಲಿಯವರೆಗೆ ಸುಮಾರು 27,929 ರೈತರು ಹತ್ತಿ ಬೆಂಬಲ ಬೆಲೆ ಯೋಜನೆಯಡಿ ಕಪಾಸ್ ಕಿಸಾನ್ ಅಪ್ಲಿಕೇಶನ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ. ಈ ನೋಂದಣಿ ಪ್ರಕ್ರಿಯೆ ಹಾಗೂ ಖರೀದಿ ದಿನಾಂಕವನ್ನು ಡಿಸೆಂಬರ್ 31ರವರೆಗೆ ಜಾರಿಯಲ್ಲಿದ್ದು, ಎಲ್ಲಾ ರೈತರು ಕಡ್ಡಾಯ ನೋಂದಾಯಿಸಿಕೊಂಡು ಹತ್ತಿ ಬೆಂಬಲ ಬೆಲೆ ಯೋಜನೆಯ ಸವಲತ್ತನ್ನು ಪಡೆಯಬಹುದಾಗಿದೆ. ಕನಿಷ್ಠ ಗುಣಮಟ್ಟದ ಮಾನದಂಡಗಳನ್ನು ಪೂರೈಸುವ, ಹತ್ತಿ ಮಾರಾಟದ ಹಣವು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮಾ ಆಗಲಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 2419 ಮನೆಗಳನ್ನು ನಿರ್ಮಿಸಿ ಬಡವರಿಗೆ ವಿತರಿಸುತ್ತಿರುವುದು ಮಹತ್ತರ ಕಾರ್ಯ: ಬೈರತಿ ಸುರೇಶ

**ಮಲ್ಲಮ್ಮನುಡಿವಾರ್ತೆರಾಯಚೂರು:**



ಮಾದರಿಯಲ್ಲಿಅನುಮೋದನೆಗೊಂಡು, ಪ್ರಧಾನಮಂತ್ರಿಆವಾಸ್‌ಯೋಜನೆಯ ಉಪಘಟಕಎಎಚ್‌ಪಿಯೋಜನೆಯಡಿ ರಾಯಚೂರು ಮಹಾನಗರ ಪಾಲಿಕೆಗೆ54ನೇ ಸಿಎಸ್‌ಎಂಸಿಯಲ್ಲಿ, ಯರಮರಸ್ ಹತ್ತಿರದ ವಿಮಾನ ನಿಲ್ದಾಣ ಬಳಿಯಲ್ಲಿ ನಿರ್ಮಾಣ ಹಂತದಲ್ಲಿರುವ 2419 ವಸತಿ ಸಮುಚ್ಚಯದ ಸ್ಥಳಕ್ಕೆ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬೈರತಿ ಸುರೇಶ ಅವರು ಡಿಸೆಂಬರ್ 3ರಂದು ಭೇಟಿ ನೀಡಿದರು.

ಪೂರ್ವ ನಿಗದಿಯಂತೆ, ಬೆಳಗ್ಗೆ ಬಳ್ಳಾರಿಯಿಂದ ಹೆಲಿಕ್ಯಾಪ್ಟರ್ ಮೂಲಕ ಹೊರಟು ರಾಯಚೂರ ನಗರಕ್ಕೆ ಆಗಮಿಸಿ ಮಧ್ಯಾಹ್ನ 12.15ರ ವೇಳೆಗೆ ವಸತಿ ಸಮುಚ್ಚಯ ಸ್ಥಳಕ್ಕೆ ಆಗಮಿಸಿ ಕಾಮಗಾರಿಯ ಬಗ್ಗೆ ಮಾಹಿತಿ ಪಡೆದುಕೊಂಡರು. ಕಾಮಗಾರಿಯನ್ನು ಬೇಗನೇ ಪೂರ್ಣಗೊಳಿಸಿ, ಮನೆಗಳನ್ನು ಬಡಜನತೆಗೆ ವಿತರಿಸಲು ಕ್ರಮವಹಿಸುವಂತೆ ಸಚಿವರು ಸೂಚನೆ ನೀಡಿದರು.

ಈ ರೀತಿ, ಜಿ+3 ಸಮುಚ್ಛಯ ನಿರ್ಮಾಣ ಕಾರ್ಯವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಲ್ಲಿ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿದೆ. ಬಡವರಿಗೆ ಮನೆಗಳನ್ನು ನಿರ್ಮಿಸಿ ಕೊಡುವ ಈ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ದಾಖಲೆಯ 2419 ಮನೆಗಳನ್ನು ನಿರ್ಮಿಸಿ ಕಡುಬಡವರಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಾಮಾನ್ಯ ವರ್ಗದ ಹಾಗೂ ಹಿಂದುಳಿದ ವರ್ಗದ ಜನತೆಗೆ ನೀಡುತ್ತಿರುವುದು ರಾಯಚೂರ ಇತಿಹಾಸದಲ್ಲಿ ಪ್ರಪ್ರಥಮವಾದ ದಾಖಲಾರ್ಹ ಕಾರ್ಯವಾಗಿದೆ ಎಂದು ಸಚಿವರು ತಿಳಿಸಿದರು.

ಮೌಲಸೌಕರ್ಯ ಕಲ್ಪಿಸಲು ಕ್ರಮ: ರಾಯಚೂರು ವಿಮಾನ ನಿಲ್ದಾಣದ ಬಳಿಯಲ್ಲಿ ನಿರ್ಮಾಣವಾಗುತ್ತಿರುವ ಜಿ+3 ವಸತಿ ಸಮುಚ್ಚಯಕ್ಕೆ ಬೇಕಿರುವ ರಸ್ತೆ ಸಂಪರ್ಕ, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಾರ್ಯಕ್ಕೆ ಬೇಕಾಗಿರುವ ಹೆಚ್ಚುವರಿ ಅನುದಾನವನ್ನು ನಗರಾಭಿವೃದ್ಧಿ ಇಲಾಖೆಯಿಂದ ಕೊಡುವುದಾಗಿ ಸಚಿವರು ಇದೆ ವೇಳೆ ತಿಳಿಸಿದರು.

ಈ ಮನೆಗಳನ್ನು 44 ಎಕರೆ ಜಾಗದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಮನೆಗಳ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿದೆ. ಪರಿಶಿಷ್ಟ ಜಾತಿಗೆ 951 ಮನೆಗಳು, ಪರಿಶಿಷ್ಟ ಪಂಗಡಕ್ಕೆ 1053 ಮನೆಗಳು, ಸಾಮಾನ್ಯ ವರ್ಗಕ್ಕೆ 228 ಮನೆಗಳು ಮತ್ತು ಹಿಂದುಳಿದ ವರ್ಗಕ್ಕೆ 187 ಮನೆಗಳು ಅನುಮೋದನೆಯಾಗಿವೆ. ಈ ಯೋಜನೆಯ ಅಂದಾಜು ವೆಚ್ಚ 9 ಲಕ್ಷ ಇರುತ್ತದೆ. ಎಸ್‌ಎಸಿ ಮತ್ತು ಎಸ್‌ಟಿ ಅವರಿಗೆ

ಕೇಂದ್ರ ಮತ್ತು ರಾಜ್ಯದಿಂದ ಸಬ್ಸಿಡಿ ಅನುದಾನ ರಾಜ್ಯ ಸರ್ಕಾರದಿಂದ 2 ಲಕ್ಷ ರೂ ಹಾಗೂ ಕೇಂದ್ರ ಸರ್ಕಾರದ 1.5 ಲಕ್ಷ ರೂ ಅನುದಾನ ಸೇರಿ ಒಟ್ಟು 3.50 ಲಕ್ಷ ರೂ ನಿಗದಿಪಡಿಸಲಾಗಿದೆ. ಬ್ಯಾಂಕಿನಿಂದ ಲೋನ್ ಪಡೆದು ಬಾಕಿ ಉಳಿದ ಅನುದಾನವನ್ನು ಫಲಾನುಭವಿಗಳೇ ಭರಿಸಬೇಕಿರುತ್ತದೆ

ಎಂದು ಜಿಲ್ಲಾಧಿಕಾರಿ ನಿತೀಶ್ ಕೆ ಹಾಗೂ ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ ಅವರು ಸಚಿವರಿಗೆ ಮಾಹಿತಿ ನೀಡಿದರು.

ಈ ವೇಳೆ ಮಸ್ಕಿ ಶಾಸಕರಾದ ಬಸನಗೌಡ ತುರವಿಹಾಳ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಏಗನೂರ ಗ್ರಾಪಂ ಅಧ್ಯಕ್ಷ ಶ್ರೀನಿವಾಸ ಹಾಗೂ ಇನ್ನಿತರರು ಇದ್ದರು.

# ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಬಸ್ ನಿಲ್ದಾಣದ ವೃತ್ತದಲ್ಲಿ ಪ್ರತಿಭಟನೆ



**ಮಲ್ಲಮ್ಮ ನುಡಿ ವಾರ್ತೆ ಲಿಂಗಸೂಗೂರು:**

ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿಯವರೆಗೂ ರೈತರಿಗೆ. ಹೇಳತೀರದಷ್ಟು ಕಷ್ಟವಾಗಿದ್ದು ಕೂಡಲೇ ರಾಜ್ಯ ಸರ್ಕಾರ ಅತಿವೃಷ್ಟಿಯಿಂದ ಹಾನಿಯಾದ ರೈತರ ಬೆಳೆಗಳಿಗೆ ತಕ್ಷಣವೇ ಪರಿಹಾರ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಬಸ್ ನಿಲ್ದಾಣದ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರರ ಮುಖಾಂತರ ಮನವಿ ಸಲ್ಲಿಸಿ ಪ್ರತಿಭಟನೆ ಹೋರಾಟ ನಡೆಸಿದರು. ತಕ್ಷಣವೇ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಶಾಸಕ ಮಾನಪ್ಪ ಡಿ ವಜ್ಜಲ್ ಅವರು ಮಾತನಾಡಿ ರಾಜ್ಯ ಸರಕಾರವು ಸರ್ಕಾರದ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಆಗಮಿಸಿ ಪರಿಹಾರದ ವರದಿ ಪಡೆದುಕೊಂಡು ಎರಡು ತಿಂಗಳು ಕಳೆದರೂ ಸಹ ಇಲ್ಲಿಯವರೆಗೂ ಒಂದು ನಯಾಪೈಸನು ನೀಡಿಲ್ಲ ತಮಗೆ ಬೇಕಾದ ಜಿಲ್ಲೆಗಳಿಗೆ ಪರಿಹಾರ ನೀಡಿ ನಮಗೆ ದೊಡ್ಡ ಅನ್ಯಾಯ ಮಾಡಿದ್ದಾರೆ. ಇದರಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಈ ಹಿಂದಿನ ಸರಕಾರ ರೈತರಿಗೆ ಕೊಡುತ್ತಿದ್ದ ಎಲ್ಲಾ ಅನುದಾನಗಳನ್ನು ನಿಲ್ಲಿಸಲಾಗಿದ್ದು ಮುಂದುವರಿಸಬೇಕು

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಿಂದ, ಕೊಡುವ ವಾರ್ಷಿಕ 6 ಸಾವಿರರ ಜೊತೆ ರಾಜ್ಯ ಸರ್ಕಾರದಿಂದ 4 ಸಾವಿರ ಸೇರಿಸಿ ನೀಡಬೇಕು.

ರೈತರ ಮಕ್ಕಳ ಉನ್ನತ ವ್ಯಾಸಂಗಕ್ಕೆ" ವಿದ್ಯಾಸಿರಿ" ಮೂಲಕ ಸ್ಕಾಲರ್ ಶಿಪ್ ನೀಡಲಾಗುತ್ತಿತ್ತು

ಅಮೃತ ಯೋಜನೆಯಲ್ಲಿ ರೈತರಿಗೆ 220 ಕೆ ವಿ ಯಲ್ಲಿ ಕೇವಲ 28 ಸಾವಿರದಲ್ಲಿ ರೈತರ ಹೊಲಗಳಿಗೆ ವಿದ್ಯುತ್ ಒದಗಿಸುತ್ತಿತ್ತು.

ಸಣ್ಣ ರೈತರಿಗೆ ಸಹಾಯಧನ ನೀಡಿ ಕೃಷಿ ಪರಿಕರಗಳನ್ನು ಕೊಡಿಸುತ್ತಿತ್ತು. ಸಮರ್ಪಕ ನೀರು ನಿರ್ವಹಣೆ ಮತ್ತು ಉತ್ತಮ ಪಸಲಿಗೆ, ಬೆಂಬಲ ಬೆಲೆಯಲ್ಲಿ ಖರೀದಿ ಕೇಂದ್ರಗಳ ಮೂಲಕ ತೊಗರಿ, ಜೋಳ, ಭತ್ತ, ಖರೀಧಿಸಿ, ಪ್ರೋತ್ಸಾಹಧನದ ಜೊತೆ ಹಣ ಸಂದಾಯ ಆಗುತ್ತಿತ್ತು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೇವಲ ಪಂಚ ಗ್ಯಾರಂಟಿಗಳಿಗೆ ಆದ್ಯತೆ ಕೊಟ್ಟು, ರೈತರಿಗೆ ಸಿಗಬೇಕಿದ್ದ ಎಲ್ಲಾ ಸೌಲತ್ತುಗಳನ್ನು ಕತ್ತರಿಸಿ, ಅವರ ಬದುಕುಗಳನ್ನು ಬೀದಿಗೆ ತಂದಿದೆ

ಮೀಸಲಿಡಬೇಕ ವಾರ್ಷಿಕ 4000, ಸಮ್ಮಾನ ನಿಧಿಯು ಕೊಡುತ್ತಿಲ್ಲ ವಿದ್ಯಾನಿಧಿ ತೆಗೆದಿದ್ದೀರಿ.

ಲಿಂಗಸುಗೂರು ತಾಲೂಕಿನ ಕೃಷಿ ಸಹಾಯಕ ನಿರ್ದೇಶಕರ ಕಛೇರಿಯನ್ನು ಲಿಂಗಸುಗೂರಿ ನಿಂದ ಸಿಂಧನೂರಿಗೆ ಸ್ಥಳಾಂತರ ಮಾಡಿದ್ದನ್ನು ರದ್ದು ಪಡಿಸಬೇಕು.

ರೈತರಿಗೆ ಅನುಕೂಲವಾಗಲು ಸಕಾಲದಲ್ಲಿ ಖರೀಧಿ ಕೇಂದ್ರ ಸ್ಥಾಪಿಸದೆ ಅನ್ಯಾಯ ಮಾಡಲಾಗುತ್ತಿದೆ.

ಖಿಐಃಅ ಯಿಂದ ಎರಡನೇ ಬೆಳೆಗೆ ನೀರು ಕೊಡಿ. ಆದಾಗದಿದ್ದರೆ ಪ್ರತಿ ಎಕರೆಗೆ ರೂ.25000/- ಪರಿಹಾರ ನೀಡಬೇಕು.ಅತಿವೃಷ್ಟಿಗೆ ತುತ್ತಾದ, ಸಮೀಕ್ಷೆಯಂತೆ ಬೆಳೆಗಳಿಗೆ ರಾಜ್ಯದಿಂದ ಪರಿಹಾರ ನೀಡಬೇಕು.

ರೈತರಿಗೆ ಉಚಿತ ವಿದ್ಯುತ್ ಸಂಪರ್ಕ ಹಾಲಿಗೆ ಸಹಾಯಧನ ಹೆಚ್ಚಿಸಿ.ಸಕಾಲದಲ್ಲಿ ತೊಗರಿ,, ಭತ್ತ ಮತ್ತು ಮೆಕ್ಕೆಜೋಳ ಖರೀಧಿ ಕೇಂದ್ರ ಸ್ಥಾಪಿಸಿ. ರೈತರು ಬೆಳೆದಷ್ಟನ್ನು ಸರ್ಕಾರವೇ ಖರೀದಿಸಬೇಕು.

ಮುದ್ರಾಂಕ ಶುಲ್ಕ ಕಡಿಮೆ ಮಾಡಬೇಕು,

ಎಪಿಎಂಸಿ ಯಲ್ಲಿ ನಡೆಯುತ್ತಿರುವ ಅನ್ಯಾಯವನ್ನು ತಡೆಗಟ್ಟಿ, ತಪ್ಪಿತಸ್ತರನ್ನು ಕಾನೂನು ಶಿಸ್ತಿಗೆ ಒಳಪಡಿಸಬೇಕುಅಅಖ ಯಿಂದ ಹತ್ತಿ ಖರೀಧಿಗೆ ಬೇಕಿರುವಷ್ಟು ಮಿಲ್ಲುಗಳನ್ನು ಒದಗಿಸಬೇಕು

ಅತಿವೃಷ್ಠಿ ಮತ್ತು ಹವಾಮಾನ ವೈಪರಿತ್ಯದಿಂದ ತತ್ತರಿಸುವ ದಾಳಿಂಬೆ ಬೆಳೆಗಾರರಿಗೆ ನೆರವಿಗೆ ದಾವಿಸಿ ಪರಿಹಾರ ಒದಗಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಗಿರಿ ಮಲ್ಲನಗೌಡ, ತಾಲೂಕ ಬಿಜೆಪಿ ಮಂಡಲ ಅಧ್ಯಕ್ಷ ಕೆ ನಾಗಭೂಷಣ್, ಮುದಗಲ್ ಬಿಜೆಪಿ ಮಂಡಲ ಅಧ್ಯಕ್ಷ ಹುಲ್ಲೇಶ ಸಾಹುಕಾರ್, , ಭಾ.ಜ.ಪಾ ರೈತ ಮೋರ್ಚಾ ಲಿಂಗಸುಗೂರು ಮಂಡಲ ಅಧ್ಯಕ್ಷ ವೆಂಕನಗೌಡ ಐದನಾಳ, ರಾಜು ಚೌಹಾಣ್ ಹನುಮಂತ ನಾಯಕ್, ಜೀವಲೆಪ್ಪ ಸೇರಿದಂತೆ ಹಲವು ಮುಖಂಡರು ಪಾಲ್ಗೊಂಡಿದ್ದರು.

# ಪ್ರಧಾನಮಂತ್ರಿ ಮತ್ಸ ಸಂಪದ ಯೋಜನೆಯಡಿ ಅರ್ಜಿ ಆಹ್ವಾನ

ರಾಯಚೂರು: ಇಲ್ಲಿನ ಮೀನುಗಾರಿಕೆ ಇಲಾಖೆಯಿಂದ ಜಿಲ್ಲೆಯ ರಾಯಚೂರು, ದೇವದುರ್ಗ, ಮಾನವಿ, ಸಿರವಾರ ಹಾಗೂ ಅರ-ಕೇರಾ ತಾಲ್ಲೂಕಿನಲ್ಲಿ 2025-26ನೇ ಸಾಲಿನ ಪ್ರಧಾನ ಮಂತ್ರಿ ಮತ್ಸ ಸಂಪದ ಯೋಜನೆಯ ಧರ್ತಿ ಅಭಾ ಜನ ಜಾತಿಯ ಗ್ರಾಮ ಉತ್ಕರ್ಷ ಅಭಿಯಾನ (ಡಿಎಜೆಜಿಯುಎ)ದಡಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭಿಯಾನದಡಿ ಬುಡಕಟ್ಟು ಸಮುದಾಯದ ಪರಿಶಿಷ್ಟ ಪಂಗಡದ (ಎಸ್‌ಟಿ) ವರ್ಗದವರಿಗೆ ಮಾತ್ರ ಮೀನು ಮಾರಾಟಕ್ಕಾಗಿ ಐಸ್ ಬಾಕ್ಸ್ ನೊಂದಿಗೆ ದ್ವಿಚಕ್ರ ವಾಹನ ಖರೀದಿ ಮತ್ತು ಜೀವಂತ ಮೀನು ಮಾರಾಟ ಮಳಿಗೆ ಕೇಂದ್ರಗಳನ್ನು ಸ್ಥಾಪಿಸಲು ನಿಗದಿತ ಗುರಿಗಳನ್ವಯ ಕೇಂದ್ರ ಸರ್ಕರವು ನೀಡಿರುವ ಪಟ್ಟಿಯಲ್ಲಿರುವ ಗ್ರಾಮಗಳಿಗೆ ಮಾತ್ರ ಸೀಮಿತಗೊಳಿಸಿ ಮೀನುಗಾರಿಕೆಯಲ್ಲಿ ತೊಡಗಿರುವ ಪರಿಶಿಷ್ಟ ಪಂಗಡದ ಆಸಕ್ತರು ಡಿಸೆಂಬರ್ 20ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ರಾಯಚೂರಿನ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ದೂರವಾಣಿ ಸಂಖ್ಯೆ: 8050196667ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರಿನ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಮಿತಿಯ ಅಧ್ಯಕ್ಷರಾಗಿ ರಮೇಶ ಡಾಕುಳಗಿ ನೇಮಕ:ರಾಹುಲ್ ಉದ್ದಾ ಹರ್ಷ

**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನದ ಬೀದರ ಜಿಲ್ಲೆಯ ದಲಿತ ಒಕ್ಕೂಟದ ವತಿಯಿಂದ ಸರ್ವಾನುಮತದಿಂದ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಘಟನಾ ಸಂಚಾಲಕರಾದ ರಮೇಶ ಡಾಕುಳಗಿ ಇವರನ್ನು ಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಮಾಡಿದಕ್ಕೆ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ) ತಾಲ್ಲೂಕ ಸಂಚಾಲಕ ರಾಹುಲ್ ಉದ್ದಾ ರವರು ಹರ್ಷವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ. ಡಿ.6 ರಂದು ಬೀದರ ಜಿಲ್ಲೆಯ ಅಂಬೇಡ್ಕರ್ ವೃತ್ತದ ಹತ್ತಿರ ಡಾ.ಬಿ.ಆರ್.ಅಂಬೇಡ್ಕರ್ ರವರ ಪರಿನಿರ್ವಾಣ ಕಾರ್ಯಕ್ರಮಕ್ಕೆ ಹುಮನಾಬಾದ ಪಟ್ಟಣದ ಎಲ್ಲ ದಲಿತ ಮುಖಂಡರು, ಸಂಘಟನೆಯ ಮುಖಂಡರು, ಪದಾಧಿಕಾರಿಗಳು, ವಿಶೇಷವಾಗಿ ಮಹಿಳೆಯರು, ಯುವಕರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ



ಕಾರ್ಯಕ್ರಮಯಶಸ್ವಿಗೊಳಿಸಬೇಕೆಂದು ರಾಹುಲ್‌ಉದ್ದಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಮ್ಮ ಕರ್ನಾಟಕ ಸೇನೆ ವಾರ್ಷಿಕೋತ್ಸವ: ಭಿತ್ತಿ ಪತ್ರ ಬಿಡುಗಡೆ

**ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಬೆಂಗಳೂರಿನಲ್ಲಿ ನಡೆಯಲಿರುವ ನಮ್ಮ ಕರ್ನಾಟಕ ಸೇನೆಯ ಮೂರನೇ ವಾರ್ಷಿಕೋತ್ಸವದ ಭಿತ್ತಿ ಪತ್ರವನ್ನು ನಗರದ ಸೇನೆಯ ಜಿಲ್ಲಾ ಘಟಕದ ಕಚೇರಿಯಲ್ಲಿ ಬುಧವಾರ ಬಿಡುಗಡೆ ಮಾಡಲಾಯಿತು.

ಬೆಂಗಳೂರಿನಲ್ಲಿ ಸೇನೆಯ ವಾರ್ಷಿಕೋತ್ಸವ ಅದ್ಧೂರಿಯಾಗಿ ಜರುಗಲಿದೆ ಎಂದು ಭಿತ್ತಿ ಪತ್ರ ಬಿಡುಗಡೆ ಮಾಡಿದ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ ಪಾಟೀಲ ಜ್ಯಾಂತಿ ತಿಳಿಸಿದರು.

ವಾರ್ಷಿಕೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಕಾಯಕಯೋಗಿ ಬಸವಣ್ಣ, ದಕ್ಷಿಣ ಪಥೇಶ್ವರ ಇಮ್ಮಡಿ ಪುಲಕೇಶಿ, ನಾಡಪ್ರಭು ಕೆಂಪೇಗೌಡ, ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಸರ್ ಎಂ. ವಿಶ್ವೇಶ್ವರಯ್ಯ, ದ.ರಾ. ಬೇಂದ್ರೆ, ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಬಿ.ಆರ್ ರಾಮಣ್ಣ, ವೀರೇಂದ್ರ ಪಾಟೀಲ, ಡಾ. ರಾಜಕುಮಾರ, ಸಿ. ಅಶ್ವಥ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ಹೇಳಿದರು.

ಕೇಂದ್ರ ಸಚಿವರು, ಮುಖ್ಯಮಂತ್ರಿ, ರಾಜ್ಯದ ಸಚಿವರು, ಸಾಹಿತಿಗಳು, ಗಣ್ಯರು, ಸಂಘ ಸಂಸ್ಥೆಗಳ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ ಸೇನೆಯ ಕಾರ್ಯಕರ್ತರು ಹೆಚ್ಚಿನ



ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪದಾಧಿಕಾರಿಗಳ ಆಯ್ಕೆ: ಇದೇ ವೇಳೆ ಸೇನೆಯ ಜಿಲ್ಲಾ ಹಾಗೂ ತಾಲ್ಲೂಕು ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಜಿಲ್ಲಾ ಘಟಕ: ಉದಯಕುಮಾರ ಅಷ್ಟೂರೆ, ರಾಜಕುಮಾರ ಜಮಾದಾರ್ (ಉಪಾಧ್ಯಕ್ಷರು), ರಾಕೇಶ್ ಕುರುಬಖೇಳಗಿ (ಸಂಘಟನಾ ಕಾರ್ಯದರ್ಶಿ). ಕಮಲನಗರ ತಾಲ್ಲೂಕು ಘಟಕ: ಸಂತೋಷ್ ಬಿರಾದಾರ (ಅಧ್ಯಕ್ಷ).

ಸೇನೆಯ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ರಾಜಕುಮಾರ ಪಾಟೀಲ, ಪ್ರದೀಪ್ ಪಾಟೀಲ, ರವಿ ಪಾಟೀಲ, ಭಾಲ್ಕಿ ತಾಲ್ಲೂಕು ಘಟಕದ ಅಧ್ಯಕ್ಷ ಬಸವರಾಜ ಕಾರಬಾರಿ, ಔರಾದ್ ತಾಲ್ಲೂಕು ಘಟಕದ ಅಧ್ಯಕ್ಷ ಬಾಲಾಜಿ ದಾಮ, ಬೀದರ್ ನಗರ ಘಟಕದ ಅಧ್ಯಕ್ಷ ಸಂತೋಷ್ ಪಾಟೀಲ ಮತ್ತಿತರರು ಇದ್ದರು.

# ಹನುಮಮಾಲಾಧಾರಿಗಳಿಗೆ ವಿವಿಧ ಮೂಲಭೂತ ಸೌಲಭ್ಯ - ಸಂಸದ ರಾಜಶೇಖರ ಬಸವರಾಜ ಹಿಟ್ನಾಳ


ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಹನುಮಮಲಾ ವಿಸರ್ಜನಾ ಕಾರ್ಯಕ್ರಮ ನಿಮಿತ್ತ ಕೊಪ್ಪಳ ಜಿಲ್ಲಾ ಅಥ್ಲೆಟಿಕ್ ಅಸೋಷಿಯೇಷನ್, ಕೈಗಾರಿಕೆಗಳು ಮತ್ತು ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರ ಸಯಯೋಗದಲ್ಲಿ ಹನುಮಮಾಲಾಧಾರಿಗಳಿಗೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಕೊಪ್ಪಳ ಸಂಸದರಾದ ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು. ಅವರು ಸೋಮವಾರ ಕೊಪ್ಪಳ ಜಿಲ್ಲಾಡಳಿತ ಭವದಲ್ಲಿರುವ ಲೋಕಸಭಾ ಸದಸ್ಯರ ಕಛೇರಿಯಲ್ಲಿ ಹನುಮಮಲಾ ವಿಸರ್ಜನಾ ಕಾರ್ಯಕ್ರಮ-2025ರ ಹಿನ್ನೆಲೆಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ ಮಾತನಾಡಿದರು. ಆಂಜನೇಯಸ್ವಾಮಿ ಜನ್ಮಸ್ಥಳ ಅಂಜನಾದ್ರಿಯಲ್ಲಿ ಇದೇ ಡಿಸೆಂಬರ್ 2 ಮತ್ತು 3ರಂದು ನಡೆಯಲಿರುವ ಹನುಮಮಾಲಾ ವಿಸರ್ಜನಾ ಕಾರ್ಯಕ್ರಮಕ್ಕಾಗಿ ಕೊಪ್ಪಳ ಜಿಲ್ಲಾಡಳಿತವು ಈಗಾಗಲೇ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿದ್ದು, ದೇವಸ್ಥಾನದ ಅಲಂಕಾರ, ಬೆಟ್ಟಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಬೆಟ್ಟದ ಮೇಲಿನ ದೇವಸ್ಥಾನದಲ್ಲಿ ನಡೆಯವ ವಿಶೇಷ ಪೂಜಾ ಕಾರ್ಯಕ್ರಮದ ನೇರಪ್ರಸಾರವನ್ನು ಎಲ್.ಇ.ಡಿ ಪರದೆ ಮೂಲಕ ಬೆಟ್ಟದ ಕೆಳಗಿರುವ ಭಕ್ತಾಧಿಗಳಿಗೆ ತೋರಿಸುವ ಕೆಲಸ ಮಾಡಲಾಗಿದೆ. ಇದರ ಜೊತೆಗೆ ಕುಡಿಯುವ ನೀರು ಮತ್ತು ಪ್ರಸಾದದ ವ್ಯವಸ್ಥೆ, ಭಕ್ತಾಧಿಗಳಿಗೆ ಸ್ನಾನಘಟ್ಟಗಳ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಪಾರ್ಕಿ ಹಾಗೂ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದಲ್ಲದೇ ಆರೋಗ್ಯ ಸೇವೆ ಮತ್ತು ಸಹಾಯವಾಣಿ ಕೇಂದ್ರವನ್ನು ಸಹ ಸ್ಥಾಪಿಸಲಾಗಿದ್ದು, ಈ ಎಲ್ಲಾ ವ್ಯವಸ್ಥೆಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಲಾಗಿದೆ ಎಂದರು.



ಕಳೆದ ವರ್ಷವೂ ಹನುಮಮಾಲಾ ವಿಸರ್ಜನಾ ಕಾರ್ಯಕ್ರಮವನ್ನು ತುಂಬಾ ಚೆನ್ನಾಗಿ ಮಾಡಲಾಗಿತ್ತು. ಈ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಬರುವ ನಿರೀಕ್ಷೆಯಿರುವುದರಿಂದ ಇನ್ನೂ ಹೆಚ್ಚಿನ ವ್ಯವಸ್ಥೆಗಳನ್ನು ಮಾಡಬೇಕೆಂಬ ಉದ್ದೇಶದಿಂದ ಕೊಪ್ಪಳ ಜಿಲ್ಲಾ ಅಥ್ಲೆಟಿಕ್ ಅಸೋಷಿಯೇಷನ್ ಮತ್ತು ಕೈಗಾರಿಕೆಗಳು ಹಾಗೂ ಸ್ಥಳೀಯರ ಸಯಯೋಗದಲ್ಲಿ ಹನುಮ ಮಾಲಾಧಿರಿಗಳಿಗೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಹಾಗಾಗಿ ಸಂಗಾಪೂರದ ಶ್ರೀ ಕಣಿವೆ ಆಂಜನೇಯ ಸ್ವಾಮಿ ದೇವಸ್ಥಾನ, ಆನೆಗುಂದಿಯ ಶ್ರೀ ದುರ್ಗಾದೇವಿ ಬೆಟ್ಟ, ತಿರುಮಲಾಪುರದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಅಂಜನಾದ್ರಿ ಮುಖ್ಯರಸ್ತೆಯ ಅಗಳಕೇರಾದ ಅಂದಿಗಾಲೇಶ್ವರ ದೇವಸ್ಥಾನ, ಹಿಟ್ನಾಳ ಕ್ರಾಸ್, ಆನೆಗುಂದಿಯ ಶ್ರೀ ಕೃಷ್ಣದೇವರಾಯ ವಿಶ್ರಾಂತಿ ತಾಣ, ಸಣಾಪೂರ ಐ.ಬಿ., ಕಮಲಾಪುರದ ಕಡ್ಡಿರಾಂಪೂರ ಕ್ರಾಸ್ ಹಂಪಿ ರೋಡ್ ಸೇರಿದಂತೆ ಈ ಎಂಟು ಸ್ಥಳಗಳಲ್ಲಿ ಅಗತ್ಯ ಅನುಕೂಲ ಮಾಡಿಕೊಳ್ಳಲಾಗಿದ್ದು, ಪಾದಯಾತ್ರೆ ಮೂಲಕ ಬರುವ ಹನುಮಮಾಲಾಧಾರಿಗಳಿಗೆ ಅಲ್ಲಿ ತಂಗಲು ಪೆಂಡಲ ವ್ಯವಸ್ಥೆ ಜೊತೆಗೆ ಹಾಲು, ಮಜ್ಜಿಗೆ, ಉಪಹಾರ, ಊಟ, ವಿಶ್ರಾಂತಿ, ಶೌಚಾಲಯ ವ್ಯವಸ್ಥೆ, ಸ್ನಾನಗೃಹ ಮತ್ತು ರಾತ್ರಿ ಭಜನೆಗೂ ಅನುಕೂಲಗಳಿವೆ. ಈ ಎಲ್ಲಾ ಸೌಲಭ್ಯಗಳು ಇಂದು ರಾತ್ರಿಯಿಂದ ಡಿಸೆಂಬರ್ 3ರ ಬೆಳಿಗ್ಗೆಯ ಉಪಹಾರದ ವರೆಗೂ ಇರಲಿವೆ ಎಂದು ಹೇಳಿದರು.

ಹನುಮಮಾಲಾ ವಿಸರ್ಜನಾ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಿದ್ದು, ಈ ಬಗ್ಗೆ ಜಿಲ್ಲಾಡಳಿತವು ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ಪ್ಲಾಸ್ಟಿಕ್ ಬಾಟಲ್ ಸೇರಿದಂತೆ ಯಾವುದೇ ರೀತಿಯ ಪ್ಲಾಸ್ಟಿಕ್ ವಸ್ತುಗಳನ್ನು ಅಂಜನಾದ್ರಿ ಬೆಟ್ಟದ ವ್ಯಾಪ್ತಿಯಲ್ಲಿ ಕೊಂಡೊಯ್ಯಲು ಅವಕಾಶವಿಲ್ಲ. ಹಾಗಾಗಿ ಎಲ್ಲರೂ ಪ್ಲಾಸ್ಟಿಕ್ ಬಳಕೆಯನ್ನು ಮಾಡಬಾರದು. ಭಕ್ತಾಧಿಗಳಿಗೆ ಸ್ನಾನಕ್ಕಾಗಿ ಕಡ್ಲೆ ಹಿಟ್ಟಿನ ವ್ಯವಸ್ಥೆಯನ್ನು ಸಹ ಮಾಡಲಾಗಿದ್ದು, ಭಕ್ತಾಧಿಗಳು ಯವುದೇ ರೀತಿಯ ಸಾಬೂನು ಮತ್ತು ಶಾಂಪು ಬಳಸದೇ ಕಡ್ಲೆ ಹಿಟ್ಟಿನ ಬಳಕೆ ಮಾಡಿಬೇಕು. ಹನುಮಮಾಲಾ ವಿಸರ್ಜನೆಗೆ ಭಕ್ತಾಧಿಗಳ ವಸ್ತ್ರಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಹಾಕಲು ಪ್ರತ್ಯೇಕ ಸ್ಥಳವನ್ನು ಗುರುತಿಸಿದ್ದು, ಭಕ್ತಾಧಿಗಳು ತಮ್ಮ ಬಟ್ಟೆಗಳನ್ನು ನಿಗದಿಪಡಿಸಿದ ಜಾಗದಲ್ಲಿಯೇ ಹಾಕಬೇಕು ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕೆಂದು ಈ ಮೂಲಕ ಮನವಿ ಭಕ್ತಾಧಿಗಳಲ್ಲಿ ಮಾಡಿಕೊಳ್ಳುತ್ತೇನೆಂದರು. ಪತ್ರಿಕಾಗೋಷ್ಠಿಯಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ಸಂಸದರ ಆಪ್ತ ಸಹಾಯಕ ಅರುಣಕುಮಾರ ಸೇರಿದಂತೆ ವಿವಿಧ ಮಾಧ್ಯಮ ಪ್ರತಿನಿಧಿಗಳು, ವಾರ್ತಾ ಇಲಾಖೆಯ ಸಿಬ್ಬಂದಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಹುಮನಾಬಾದ:ಪಟ್ಟಣದ ಮಾಜಿ ಸಚಿವ ರಾಜಶೇಖರ ಬಿ.ಪಾಟೀಲರವರ ನಿವಾಸದಲ್ಲಿ ಬೀದರ್ ವಿಧಾನ ಪರಿಷತ್ತಿನ ಸದಸ್ಯರಾದ ಭೀಮರಾವ್ ಪಾಟೀಲ್ ಅವರ ಸುಪುತ್ರ ರುದ್ರಂ ಬಿ. ಪಾಟೀಲ್ ರವರ ಹುಟ್ಟು ಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೆಪಿಸಿಸಿ ಬೀದಿಬದಿ ವ್ಯಾಪಾರಿಗಳ ವಿಭಾಗ ಬೀದರ್ ವತಿಯಿಂದ ಜಿಲ್ಲಾ ಅಧ್ಯಕ್ಷರಾದ ಪುಟ್ಟರಾಜ್ ಹಲಗ್ಯಾ ಹಾಗೂ ಜಿಲ್ಲಾ ಉಪಾಧ್ಯಕ್ಷರಾದ ವಿಲಾಸ್ ಮೇತ್ರೆ, ಹುಮ್ನಾಬಾದ್ ತಾಲೂಕ ಅಧ್ಯಕ್ಷರಾದ ಅಷ್ಫಾಕ್ ಮತ್ತು ಅಜರ, ಹಾಗೂ ಎಲ್ಲಾ ಕೆಪಿಸಿಸಿ ಬೀದಿಬದಿ ವ್ಯಾಪಾರಿಗಳು ಹಾಗೂ ಪದಾಧಿಕಾರಿಗಳು ಸನ್ಮಾನಿಸಿ ಶುಭ ಕೋರಿದರು. ಕೊನೆಯಲ್ಲಿ ವ್ಯಾಪಾರಿಗಳ ವಿಭಾಗ ಬೀದರ್ ವತಿಯಿಂದರೋಗಿಗಳಿಗೆ ಹಣ್ಣು ಹಂಪಲ್ ವಿತರಿಸಲಾಯಿತು. **(ಮಲ್ಲಮ್ಮ ನುಡಿ ಚಿತ್ರ)**

# ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆಗೈದು ಕೀರ್ತಿ ಹೆಚ್ಚಿಸಿ ಸಚಿವ ಶ್ರೀ ಶರಣಬಸಪ್ಪ ದರ್ಶನಾಪುರ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಯುವ ಜನೋತ್ಸವದಲ್ಲಿ ಸ್ಪರ್ಧಾಳುಗಳು ತಮ್ಮ ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ವಿಜೇತರಾಗುವ ಮೂಲಕ ಕೀರ್ತಿ ಹೆಚ್ಚಿಸುವಂತೆ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ರಾಜ್ಯಮಟ್ಟದ ಯುವಜನೋತ್ಸವವನ್ನು,ಮಡಿಕೆಗೆ ಸಿರಿಧಾನ್ಯ ತುಂಬಿ,ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಓದು ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಅವಕಾಶಗಳ ಸದುಪಯೋಗ ಪಡೆದುಕೊಳ್ಳಬೇಕು. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈಯ್ಯಬೇಕು.ಪಾಲಕರು ಸಹ ಮಕ್ಕಳ ಆಸಕ್ತಿಯನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಇದೇ ಮೊದಲ ಬಾರಿಗೆ ಯಾದಗಿರಿಯಲ್ಲಿ ವಿಶೇಷವಾದ ರಾಜ್ಯಮಟ್ಟದ ಯುವಜನೋತ್ಸವ ಹಮ್ಮಿಕೊಂಡಿರುವುದು ಎಲ್ಲರಲ್ಲಿ ಉತ್ಸಾಹ,ಸಂತಸ ಮೂಡಿಸಿದೆ.

ರಾಜ್ಯದ ವಿವಿಧ ಭಾಗಗಳಿಂದ ಜಿಲ್ಲಾಮಟ್ಟದಲ್ಲಿ ಸಾಧನೆಗೈದು ರಾಜ್ಯಮಟ್ಟದ ಈ ಯುವಜನೋತ್ಸವದಲ್ಲಿ ಭಾಗವಹಿಸಿರುವುದಕ್ಕೆ ನಾನು ಅಭಿನಂದಿಸುತ್ತೇನೆ ಎಂದು ಹೇಳಿದರು.

ರಾಜ್ಯದ 31 ಜಿಲ್ಲೆಗಳಿಂದ 1050 ಸ್ಪರ್ಧಾಳುಗಳು ಭಾಗವಹಿಸಿರುವುದು ಸಂತಸದ ವಿಷಯ. ನಗರದ ವಿವಿಧ ಏಳು ವೇದಿಕೆಗಳಲ್ಲಿ ಜಾನಪದ ನೃತ್ಯ ,ಜಾನಪದ ಗೀತೆ,ಕವಿತೆ ಬರೆಯುವ ಸ್ಪರ್ಧೆ, ಘೋಷಣಾ ಸ್ಪರ್ಧೆ, ವಿಜ್ಞಾನ ಮೇಳ,ಕಥೆ ಬರೆಯುವ ಸ್ಪರ್ಧೆ ಹಾಗೂ ಚಿತ್ರಕಲೆ



ಬರೆಯುವ ಸ್ಪರ್ಧೆಗಳು, ಮಲ್ಲಕಂಬ ಕ್ರೀಡೋತ್ಸವ ನಡೆಯುತ್ತಿವೆ.

ಸ್ಪರ್ಧಾಳುಗಳು ಕೂಡ ಈ ರಾಜ್ಯಮಟ್ಟದ ಯುವಜನೋತ್ಸವದಲ್ಲಿ ತಮ್ಮ ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಿ ವಿಜೇತರಾಗಿ ಮುಂದೆ ನಡೆಯುವ ರಾಷ್ಟ್ರಮಟ್ಟದ ಯುವಜನೋತ್ಸವದಲ್ಲಿ ಅತಿಹೆಚ್ಚು ಪದಕ ಪಡೆದು ಯಾದಗಿರಿ ಜಿಲ್ಲೆಯ ಹಾಗೂ ರಾಜ್ಯಕ್ಕೆ ಕೀರ್ತಿ ತರಬೇಕೆಂದು ಶುಭಹಾರೈಸಿದರು.

ಯಾದವನಗರಿ ಎಂದೇ ಐತಿಹಾಸಿಕವಾಗಿ ಖ್ಯಾತಿ ಪಡೆದಿರುವ ಈ ನಗರದಲ್ಲಿ ಇಂದು ಯುವಜನೋತ್ಸವ ಆಚರಿಸಲು ನಾವೆಲ್ಲರೂ ಸೇರಿದ್ದೇವೆ.ಯುವ ಎಂದರೆ ಉತ್ಸಾಹ,ಸಾಹಸ,ಹುಮ್ಮಸ್ಸು ಚೈತನ್ಯ,ಮಹತ್ವಾಕಾಂಕ್ಷೆಯ ಪ್ರತೀಕ.ಈ ಕಾರ್ಯಕ್ರಮವು ಯುವಪ್ರತಿಭೆಗಳ ಯುವಶಕ್ತಿ ಗುರುತಿಸಿ,ಅವರಲ್ಲಿನ ಪ್ರತಿಭೆ ಪ್ರದರ್ಶಿಸಲು ಪ್ರೋತ್ಸಾಹದಾಯಕವಾದ, ಉತ್ತಮ ವೇದಿಕೆಯಾಗಿದೆ ಎಂದು ಹೇಳಿದರು.

ಭಾರತದ ಭವಿಷ್ಯ ನಿಮ್ಮಂತಹ ಯುವ ಜನರ ಕೈಯಲ್ಲಿದೆ ಇದು ಸರ್ವಕಾಲಿಕ ಸತ್ಯ. ಯುವ ವಯಸ್ಸಿನಲ್ಲೇ ಭಗತ್ ಸಿಂಗ್, ಚಂದ್ರಶೇಖರ್ ಆಜಾದ್. ರಾಜಗುರುರಂತಹ ಹೋರಾಟಗಾರರು ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದರು.

ಇಂತಹ ಯುವಜನಾಂಗ ದಿಂದ ಸದೃಢ ಭಾರತ ನಿರ್ಮಿಸಲು ಸಾಧ್ಯ ಎಂಬುದನ್ನು ಮನಗಂಡು ಸರ್ಕಾರ ಎಲ್ಲ ರಂಗದಲ್ಲಿ ಯುವಕ,ಯುವತಿಯರಿಗೆ ಪ್ರೋತ್ಸಾಹ ನೀಡುತ್ತಿದೆ. ಯುವಜನಾಂಗ ಸಾಂಸ್ಕೃತಿಕ ರಾಯಭಾರಿಗಳಾಗಬೇಕು ಎಂಬ ಉದ್ದೇಶದಿಂದ ಇಂತಹ ಮಹತ್ತರವಾದ ಕಾರ್ಯಕ್ರಮ ವನ್ನು ನಾವಿಲ್ಲಿ ಆಯೋಜಿಸಿದ್ದೇವೆ ಎಂದು ಹೇಳಿದರು.

ಯುವಕರು ಕಲೆ, ಸಂಗೀತ, ನಾಟಕ, ಹಾಡು, ಕುಣಿತ, ಗಳಂತಹ ಸಾಂಸ್ಕೃತಿಕ ಸೊಗಡನ್ನು ಉಳಿಸಿ ಬೆಳೆಸುವ ಮುಂದಾಳುಗಳಾಗಬೇಕು. ನಮ್ಮ ಗ್ರಾಮೀಣ ಕಲೆಗಳು,ಜಾನಪದ,ಜೋಗುಳ ಪದ, ಬೀಸುಪದ ಮುಂತಾದವುಗಳನ್ನು ಮುಂದಿನ ಪೀಳಿಗೆಗೆ ತಿಳಿಸುವ ಮೂಲಕ ತಮ್ಮ ಮೊದಲ ಕರ್ತವ್ಯವೆಂದು ತಿಳಿಯಬೇಕು ಎಂದು ಸಲಹೆ ನೀಡಿದರು.

ಈ ಯುವಜನೋತ್ಸವದಲ್ಲಿ ತಾವೆಲ್ಲರೂ ಕೇವಲ ಮನೋರಂಜನೆ ಎಂದು ಭಾವಿಸದೆ ನಿಮ್ಮೊಳಗಿರುವ ಕಲಾತ್ಮಕ ಮತ್ತು ಸೃಜನಶೀಲತೆ, ಕಲೆ ಸಾಹಿತ್ಯ ಪ್ರತಿಭೆಯನ್ನು ಹೊರಹಾಕಲು ಬಂದಿದ್ದೀರಿ.ನಾಟಕ,ನೃತ್ಯ ಸಂಗೀತ ,ಚಿತ್ರ ಕಲೆ, ಕಥೆ ,ಕವನ ರಚನೆಯಲ್ಲಿ ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸುವುದು ಈ ಉತ್ಸವದ ಮೂಲ ಉದ್ದೇಶ ವಾಗಿದೆ ಎಂದು ಹೇಳಿದರು.

ಸ್ಪರ್ಧಾಳುಗಳಿಗೆ ಸೋಲು-ಗೆಲುವು ಸಹಜ ಆದ-ರೆ ಪ್ರದರ್ಶನ ಮುಖ್ಯ.ತೀರ್ಪುಗಾರರ ತೀರ್ಪುಗಳನ್ನು ತಾವು ಗೌರವಿಸಬೇಕು. ಹಾಗೆಯೇ ತೀರ್ಪುಗಾರರು ಕೂಡ ನ್ಯಾಯಯುತ ತೀರ್ಮಾನ ನೀಢಿ ಯಾವುದೇ ಪಕ್ಷಪಾತ ಮಾಡದೇ ನಿಜವಾದ ಪ್ರತಿಭಾವಂತರನ್ನು ಆಯ್ಕೆಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರು, ಯಾದಗಿರಿ ಹೊಸ ಜಿಲ್ಲೆ ಆದಾಗಿನಿಂದ ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದ ಯುವಜನೋತ್ಸವ ಹಮ್ಮಿಕೊಂಡಿದ್ದು ಅಭಿಮಾನದ ಸಂಗತಿಯಾಗಿದೆ. ರಾಕ್ ಕ್ಲೈಂಬಿಂಗ್,ಸ್ಕೂಬಾ ಡೈವಿಂಗ್,ಕರಾಟೆ ಪ್ರದರ್ಶನ,ಮಲ್ಲಕಂಬ ಪ್ರದರ್ಶನ, ಏಳು ವೇದಿಕೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಯುವಜನೋತ್ಸವದ ವಿಶೇಷತೆಯಾಗಿದವೆ ಎಂದು ಹೇಳಿದರು.

ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಆಯುಕ್ತರಾದ ಚೇತನ್ .ಆರ್.ಅವರು ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಯುವಕ,ಯುವತಿಯರು ರಾಯಭಾರಿಗಳಿದ್ದಂತೆ. ತಮ್ಮ ಸುಪ್ತ ಪ್ರತಿಭೆ ಸಕಾರಾತ್ಮಕ ವಾಗಿ ಪ್ರದರ್ಶಿಸಲು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ನಗರ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು, ವಿದ್ಯಾರ್ಥಿಗಳು ಉತ್ತಮ ಕ್ರೀಡಾಪಟುಗಳಾಗಿ,

ಒಳ್ಳೆಯ ಆಧ್ಯಾತ್ಮಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಮೋಬೈಲ್ ಗೀಳಿನಿಂದ ದೂರ ಉಳಿದು ಜೀವನದಲ್ಲಿ ಸಾಧನೆ ಮಾಡುವ ಛಲ ಹೊಂದಬೇಕು. ಇಲ್ಲಿಯ ಜಿಲ್ಲಾ ಕ್ರೀಡಾಂಗಣದ ಸುಧಾರಣೆಗೆ 6 ಕೋ.ರೂ ಒದಗಿಸುವ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ನೀಡಿದ್ದು,ತಾವು 1 ಕೋ.ರೂ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸಹ ಅನುದಾನ ಒದಗಿಸುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ರಾಜಾ ವೇಣುಗೋಪಾಲ್ ನಾಯಕ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್, ಅಪರ್ ಜಿಲ್ಲಾಧಿಕಾರಿ ರಮೇಶ ಕೋಲಾರ, ಸಹಾಯಕ ಆಯುಕ್ತ ಶ್ರೀಧರ್ ಗೋಟೂರ್ ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರು ಇದಕ್ಕೂ ಮುನ್ನ ವಿವಿಧ ಸರ್ಕಾರಿ ಇಲಾಖೆಗಳ ಹತ್ತು ವಸ್ತುಪ್ರದರ್ಶನ ಮಳಿಗೆಗಳನ್ನು ಉದ್ಘಾಟಿಸಿದರು.

# ರಾಜ್ಯ ಮಟ್ಟದ ಯುವಜನೋತ್ಸವ ಹಾಗೂ ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ, ಕೋಟೆ ಪ್ರದೇಶದಲ್ಲಿ, ಗಮನ ಸೆಳೆದ ರಾಕ್ ಕ್ಲೈಂಬಿಂಗ್


**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಜಿಲ್ಲಾಡಳಿತ,ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ,ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ವತಿಯಿಂದ ನಗರದ ಕೋಟೆ ಪ್ರದೇಶದಲ್ಲಿ ರಾಕ್ ಕ್ಲೈಂಬಿಂಗ್ ಸಾಹಸ ಕ್ರೀಡಾ ಚಟುವಟಿಕೆಯನ್ನು ಇಂದು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು.

ಬಿಭಾಸ್ ಮತ್ತು ಸುನಿತಾ ಸಾಹಸಿ ಕ್ರೀಡಾಪಟುಗಳು ಇಂದು ಯಾದಗಿರಿ ಕೋಟೆ ಮೇಲೆ ಯಶಸ್ವಿಯಾಗಿ ರಾಕ್ ಕ್ಲೈಂಬಿಂಗ್ ಮಾಡುವ ಮೂಲಕ ಸಾಹಸ ಮೆರೆದರು. ನೆರೆದ ಜನ ಇವರ ಸಾಹಸ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಆಯುಕ್ತರಾದ ಶ್ರೀ ಚೇತನ್ ಅವರು ಸಾಹಸಿ ಕ್ರೀಡಾ ಚಟುವಟಿಕೆ ನೆರವೇರಿಸುತ್ತಿದ್ದ,ಸುನಿತಾ ಹಾಗೂ ಬಿಭಾಸ್ ಅವರಿಗೆ ಶುಭ ಹಾರೈಸಿ, ತಮ್ಮ ಸಾಹಸ ಜನರಿಗೆ ಸ್ಪೂರ್ತಿಯಾಗಿದೆ ಎಂದು ಅವರಿಗೆ ಶುಭ ಹಾರೈಸಿದರು.





ಈ ಭಾಗದ ಯುವ ಜನಾಂಗಕ್ಕೆ ರಾಕ್ ಕ್ಲೈಂಬಿಂಗ್ ತರಬೇತಿ ಸಹ ನೀಡಲಾಗುತ್ತಿದೆ. ಸುಂದರ ಕೋಟೆ ಇದಾಗಿದೆ , ರಾಕ್ ಕ್ಲೈಂಬಿಂಗ್ ಗೆ ಉತ್ತಮ ಪ್ರದೇಶ ಇದಾಗಿದೆ.

ಈ ಪ್ರದೇಶಕ್ಕೆ ಬೇರೆ ಬೇರೆ ದೇಶದ ಸಾಹಸಿಗಳಿಗೂ ,ಈ ಸಾಹಸ ಕ್ರೀಡೆ,ಪ್ರೇರಣೆಯಾಗಲಿ ಎಂದು ಹಾರೈಸಿದರು.ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್, ಈ ಸಾಹಸ ಕ್ರೀಡೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ,ಇತರರಿಗೂ ಪ್ರೇರಣೆಯಾಗಲಿ ಎಂದು ಹಾರೈಸಿದರು.

ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಶ್ರೀ ರಾಮಚಂದ್ರ ಕಟ್ಟಿಮನಿ,, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಕೀರ್ತಿ , ಸುಭಾಷ್ ಚಂದ್ರ, ಮುನಿರಾಜು,ಗಂಗಾಧರ ಉಪಸ್ಥಿತರಿದ್ದರು.

ವಿಶ್ವ ಅಂಗವಿಕಲರ ದಿನಾಚರಣೆ ಹಾಗೂ ರಾಜ್ಯಮಟ್ಟದ ಯುವಜನೋತ್ಸವ ಅಂಗವಾಗಿ ಈ ಸಾಹಸ ಕ್ರೀಡಾ ಚಟುವಟಿಕೆ ಇಂದು ಹಮ್ಮಿಕೊಳ್ಳಲಾಗಿತ್ತು.

# ಶುಲ್ಕ ವಿನಾಯಿತಿ, ಯೋಜನೆ ಸೌಲಭ್ಯಕ್ಕೆ ಅರ್ಜಿ ಅವಧಿ ವಿಸ್ತರಣೆ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

2025-26ನೇ ಸಾಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಮೆಟ್ರಿಕ್ ವಿದ್ಯಾರ್ಥಿವೇತನ, ಅಲೆಮಾರಿ, ಅರೆಅಲೆಮಾರಿ ನಂತರದ ಜನಾಂಗದ ವಿದ್ಯಾರ್ಥಿಗಳಿಂದ ಅಲೆಮಾರಿ, ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ, ಮತ್ತು ಶುಲ್ಕ ವಿನಾಯಿತಿ,ಯೋಜನೆಗಳ ಸೌಲಭ್ಯಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಧಿ ವಿಸ್ತರಿಸಿದೆ ಎಂದು ಯಾದಗಿರಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಸದಾಶಿವ. ಎಂ.ನಾರಾಯಣಕರ್ ಅವರು ತಿಳಿಸಿದ್ದಾರೆ.

ಪಿ.ಯು.ಸಿ ಹೊರತುಪಡಿಸಿ ಉಳಿದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ, ಅರೆಅಲೆಮಾರಿ ವಿದ್ಯಾರ್ಥಿಗಳಿಂದ, 2025-26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ, "ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ" ಅಲೆಮಾರಿ, ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ", ವಿದ್ಯಾಸಿರಿ

ಊಟ ಮತ್ತು ವಸತಿ ಸಹಾಯ "ಶುಲ್ಕ ಮರುಪಾವತಿ",

ಕಾರ್ಯಕ್ರಮಗಳ ಸೌಲಭ್ಯ ಪಡೆಯಲು ಆನ್‌ಲೈನ್ ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಲು 2025ರ ಡಿಸೆಂಬರ್ 20ರ ವರೆಗೆ ಅವಧಿ ವಿಸ್ತರಿಸಿದೆ.

ಕಾರ್ಯಕ್ರಮಗಳ ವಿವರ, ಅರ್ಹತೆ,ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ

ಆದೇಶಗಳು ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ bcwd.karnataka.gov.in ನಲ್ಲಿ ಭೇಟಿ ನೀಡಬೇಕು. ಇಲಾಖಾ

ಸಹಾಯವಾಣಿ ದೂ.ಸಂ. 8050770005 ಇಮೇಲ್ bc-wdhelpline@gmail.com, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾವಾಣಿ 1902 ಇಮೇಲ್ postmatrichelp@karnataka.gov.in ನಲ್ಲಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚರ್ಮ ವೈದ್ಯಕೀಯ ಕ್ಷೇತ್ರಕ್ಕೆ ಕೊಡುಗೆ ಡಾ. ಅಶೋಕಕುಮಾರ ನಾಗೂರೆಗೆ ಸತ್ಕಾರ



**ಮಲ್ಲಮ್ಮ ನುಡಿ ವಾರ್ತೆ ಬೀದರ:**

ಚರ್ಮ ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಗಣನೀಯ ಕೊಡುಗೆಗಾಗಿ ಡಾ. ಅಶೋಕಕುಮಾರ ನಾಗೂ-ರೆ ಅವರನ್ನು ಕಲಬುರಗಿಯಲ್ಲಿ ನಡೆದ 'ಕ್ಯುಟಿಕಾನ್ ಕರ್ನಾಟಕ' ಸಮಾರಂಭದಲ್ಲಿ ಸತ್ಕರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷ ಡಾ. ವಿಶಾಲ್ ವಾಲಿ ಅವರು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಿದರು.

ಡಾ. ನಾಗೂರೆ ಅವರ ಸೇವೆಯನ್ನು ಶ್ಲಾಘಿಸಿದರು.

ಉತ್ತರ ಕರ್ನಾಟಕದ ಹೆಸರಾಂತ ಚರ್ಮರೋಗ ತಜ್ಞರಲ್ಲಿ ಒಬ್ಬರಾದ ಡಾ. ನಾಗೂರೆ ಅವರು, 26 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಬೀದರ್‌ನಲ್ಲಿ ಚರ್ಮರೋಗ ತಜ್ಞರ ರಾಜ್ಯಮಟ್ಟದ ಸಮ್ಮೇಳನ ಹಾಗೂ ಉಚಿತ ತಪಾಸಣೆ ಶಿಬಿರ ಆಯೋಜಿಸಿದ ಹಿರಿಮೆ ಅವರದ್ದಾಗಿದೆ.

ನಾಗೂರೆ ಅವರ ಬಾಲಾಜಿ ಸ್ಕಿನ್ ಕೇರ್ ಸೆಂಟರ್ ಯಶಸ್ವಿ 25 ವರ್ಷ ಪೂರ್ಣಗೊಳಿಸಿದ್ದು, ಮಹಾರಾಷ್ಟ್ರ, ತೆಲಂಗಾಣದ ರೋಗಿಗಳ ವಿಶ್ವಾಸ ಗಳಿಸಿದೆ. ಕುಷ್ಠರೋಗಿಗಳಿಗೆ ಉಚಿತ ಚಿಕಿತ್ಸೆ, ಪೊಲೀಸ್, ವಾಯು ಪಡೆ ಸಿಬ್ಬಂದಿ ಹಾಗೂ ಹಿರಿಯ ನಾಗರಿಕರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಕೊಡುವುದು ಕೇಂದ್ರದ ವಿಶೇಷವಾಗಿದೆ.

ಕಾರ್ಯಕ್ರಮದ ಕಾರ್ಯದರ್ಶಿ ಡಾ. ಗುರುಪ್ರಸಾದ್, ಡಾ. ಸಾಗ-ರೆ, ಡಾ. ಅಂಬರೀಷ್ ಬಾಡದ್ ಮತ್ತಿತರರು ಇದ್ದರು.

# ದೈಹಿಕ ಸಾಮರ್ಥ್ಯದಿಂದ ವ್ಯಕ್ತಿತ್ವ ನಿರ್ಮಾಣ: ಶ್ಯೆನಿ ಗುಂಟಿ

**ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಯುವಜನರು ತಮ್ಮ ದೈಹಿಕ ಸಾಮರ್ಥ್ಯ ಪ್ರದರ್ಶಿಸಿದಲ್ಲಿ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಸಾಧ್ಯವಿದೆ ಎಂದು ಅಕ್ಕಪಡೆ ರಾಜ್ಯ ಸಂಘಟಕಿ ಶ್ಯೆನಿ ಗುಂಟಿ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಲಿಂಗರಾಜ ಅಪ್ಪ ಇಂಜಿನಿಯರಿಂಗ್ ಕಾಲೇಜು ಕ್ಯಾಂಪಸ್‌ನಲ್ಲಿರುವ ಶ್ರೀ ಶರಣಬಸವೇಶ್ವರ ಪಬ್ಲಿಕ್ ಸ್ಕೂಲ್ ಅವರಣದಲ್ಲಿ ಮೇರಾ ಯುವ ಭಾರತ ಇಲಾಖೆ ಹಾಗೂ ಮಂಗಲಾ ಮಹಿಳಾ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳ ಸಹಯೋಗದಲ್ಲಿ ಜರುಗಿದ ತಾಲೂಕು ಮಟ್ಟದ ಕ್ರೀಡಾಕೂಟ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯುವಜನರು ಜೀವನದಲ್ಲಿ ವಿದ್ಯ ಜೊತೆಗೆ ದೈಹಿಕ ಚಟುವಟಿಕೆಗಳಲ್ಲಿ ನಿತ್ಯ ತೊಡಗಿಕೊಳ್ಳಬೇಕು. ಇದ-ರಿಂದ ಅವರ ಆರೋಗ್ಯ ಸುಧಾರಣೆ ಜೊತೆಗೆ ಸ್ಪರ್ಧಾ ಮನೋಭಾವ ಬೆಳೆಯುತ್ತದೆ. ಹಾಗೇ ಮಾನಸಿಕ ಒತ್ತಡ ನಿವಾರಣೆಯಾಗಿ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂದರು.

ಜೀವನದಲ್ಲಿ ಸಾಧನೆ ಮಾಡಲು ಗುರಿ ಮುಖ್ಯ. ಗುರಿ ತಲುಪಲು ಶಿಸ್ತು ಅಗತ್ಯ. ಶಿಸ್ತಿನ ಜೀವನ ಮನುಷ್ಯನಿಗೆ ಎತ್ತರಕ್ಕೆ ಕೊಂಡೊಯ್ದು ನಿಜವಾದ ಸಾಧಕನನ್ನಾಗಿ ನಿಲ್ಲಲು ಇದು ಸಹಕಾರಿಯಾಗುತ್ತದೆ ಎಂದು ಶ್ಯೆನಿ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಚನಶೆಟ್ಟಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಬೀದರ್ ಜಿಲ್ಲೆ ಹಿಂದುಳಿದ ಜಿಲ್ಲೆ ಅಲ್ಲವೆ ಅಲ್ಲ. ಇಲ್ಲಿ ಅನೇಕ ಪ್ರತಿಭೆಗಳಿವೆ. ಎಲ್ಲ ಕ್ಷೇತ್ರದಲ್ಲಿ ಸಾಧಕರಿದ್ದಾರೆ. ಅದರಲ್ಲೂ ಕ್ರೀಡಾ ಕ್ಷೇತ್ರದಲ್ಲಿ ಬೀದರ್ ಜಿಲ್ಲೆಯಲ್ಲಿ ಎತ್ತಿದ ಕೈ. ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರತಿಭೆಗಳು ಮಿಂಚುವಂತಾಗಲು ಯುವಜನರು ಇಂಥ ಕಾರ್ಯಗಳಲ್ಲಿ ನಿರಂತರವಾಗಿ



ತೊಡಗಿಕೊಳ್ಳುವಂತೆ ಕರೆ ಕೊಟ್ಟರು.

ರೆಡ್ ಕ್ರಾಸ್ ಸಂಸ್ಥೆ ಅಧ್ಯಕ್ಷೆ ಡಾ.ವಿದ್ಯಾ ಪಾಟೀಲ ಗೌರವ ಅತಿಥಿಗಳಾಗಿ ಮಾತನಾಡಿ, ಸ್ಪರ್ಧೆ ಎಂದಾದ ಬಳಿಕ ಸೋಲು, ಗೆಲುವು ಇದ್ದೆ ಇರುತ್ತದೆ. ಗೆಲ್ಲುವ ಹುಮ್ಮಸ್ಸಿದ್ದರೂ ಕೆಲವೊಂದು ಕ್ಷಣ ಸೋಲು ಉಂಟಾಗುತ್ತದೆ. ಆದರೆ ಅದೇ ಮುಂದೊಂದು ದಿನ ಸಾಧನೆಗೆ ಮೆಟ್ಟಿಲಾಗಿ ಪರಿಣಮಿಸುತ್ತದೆ ಎಂಬುದನ್ನು ಮರೆಯಬಾರದೆಂದು ಕಿವಿ ಮಾತು ಹೇಳಿದರು. ಸಾಹಿತಿ ವಿಜಯಲಕ್ಷ್ಮೀ ಕೌಟಗೆ, ಲಿಂಗರಾಜಪ್ಪ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯೆ ವಿನುತಾ ಪ್ರತಾಪುರೆ, ಶರಣಬಸವೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸತೀಶ ಪ್ರತಾಪುರೆ ಮಾತನಾಡಿದರು. ಯೋಗ ಶಿಕ್ಷಕ ಗೋರಖನಾಥ ಕುಂಬಾರ, ರಾಜ್ಯ ಪ್ರಶಸ್ತಿ ಪುರಸ್ಕೃತ ಸತೀಶ ಬೆಳಕೋಟೆ, ಸಮಾಜ ಸೇವಕ ಹಣಮು ಪಾಜಿ,. ರತಿಕಾಂತ ಜೋಜನಾ, ಸಚೀನ ಕಲಾಲ, ಸೋಮನಾಥ ಪೂಜಾರಿ ಕಾರ್ಯಕ್ರಮದಲ್ಲಿದ್ದರು.

ಮಂಗಲಾ ಮಹಿಳಾ ಗ್ರಾಮಿಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷೆ ಕು.ಮಂಗಲಾ ಮರಕಲೆ ಅಧ್ಯಕ್ಷತೆ ವಹಿಸಿದ್ದರು.

# ಕೃಷಿ ಉತ್ಪನ್ನ ಮಾರುಕಟ್ಟೆ ನಿವೇಶನ ಸಂಖ್ಯೆ 50 (ಸಿ) ವರ್ಗಾವಣೆ : ಆಕ್ಷೇಪಣೆ ಅರ್ಜಿಗೆ ಅವಕಾಶ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ 50 (ಸಿ) ವರ್ಗಾವಣೆ ಮಾಡುವ ಹಿನ್ನೆಲೆ ರೈತರ ಆಕ್ಷೇಪಣೆಗೆ ಅರ್ಜಿ ಅವಕಾಶ ಕಲ್ಪಿಸಿದೆ ಎಂದು ಶಹಾಪೂರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಅವರು ತಿಳಿಸಿದ್ದಾರೆ.

ಪ್ರಸ್ತುತ ಇದ್ದವರ ಹೆಸರು ಮೇ.ನಂದಿ ಟ್ರೇಡಿಂಗ ಕಂಪನಿ ಮಾ.ಪಂಪನಗೌಡ ತಂದೆ ಬಸರಡ್ಡೆಪ್ಪ ಇಟಗಿ ಶಹಾಪೂರ ನಿವೇಶನ ಸಂಖ್ಯೆ 50 (ಸಿ), ವರ್ಗಾವಣೆ ಬಯಸಿದವರ ಮೇ.ರೈತಸೇವಾ ಟ್ರೇಡಿಂಗ್ ಕಂಪನಿ ಮಾ.ಶ್ರೀಮತಿ ಗಿರಿಜಾ ಗಂಡ ಶರಣಪ್ಪಗೌಡ ಪಾಟೀಲ ಶಹಾಪೂರ ವರ್ಗಾವಣೆ ನೀಡಿದೆ.

ಶಹಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಪ್ರಾಂಗಣದಲ್ಲಿ ನಿವೇಶನ ವರ್ತಕರು ಮಾರಾಟ ಮಾಡಲು ಇಚ್ಚಿಸಿರುವ ಪ್ರಯುಕ್ತ ಹೆಸರಿನಲ್ಲಿ ಇರುವ ಕಟ್ಟಡ ಸಹಿತ ನಿವೇಶನವನ್ನು ಶ್ರೀ ರೈತಸೇವಾ ಟ್ರೇಡಿಂಗ ಕಂಪನಿ ಮಾ.ಶ್ರೀಮತಿ ಗಿರಿಜಾ ಗಂಡ ಶರಣಪ್ಪಗೌಡ ಪಾಟೀಲ ಶಹಾಪುರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ನಿವೇಶನ, ಕಟ್ಟಡ ಮಾರಾಟ ವರ್ಗಾವಣೆ ಮಾಡಲು ಪೇಟೆ, ರೈತರ ಆಕ್ಷೇಪಣೆ ತಕರಾರು ಇದಲ್ಲಿ ಈ ಕಾರ್ಯಾಲಯಕ್ಕೆ ಒಂದು ವಾರ ಒಳಗೆ ಲಿಖಿತವಾಗಿ ಸಲ್ಲಿಸಬೇಕು, ನಿಗದಿತ ಸಮಯದ ನಂತರ ಬಂದ ಆಕ್ಷೇಪಣೆ, ತಕರಾರು ಪರಿಗಣಿಸುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾತ್ಯಾತೀತ, ಪ್ರಬುದ್ಧ ನಾಯಕನಿಗೆ ಮುಖ್ಯಮಂತ್ರಿ ಹಕ್ಕು,ದಲಿತ ಸಂಘರ್ಷ ಸಮಿತಿ ಬೀದರ ವತಿಯಿಂದ ಆಗ್ರಹ

**ಮಲ್ಲಮ್ಮ ನುಡಿ ವಾರ್ತೆ ಬೀದರ:**

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪರಿವರ್ತನವಾದ) ಬೀದರ ಜಿಲ್ಲಾ ಸಮಿತಿ, ರಾಜ್ಯದ ಕಾಂಗ್ರೆಸ್ ಪಕ್ಷದ ಎಲ್ಲಾ ಸಮುದಾಯದ ಶಾಸಕರು ಮತ್ತು ಸದಸ್ಯರು ಒಟ್ಟಾಗಿ ಜಾತ್ಯಾತೀತ, ಪ್ರಬುದ್ಧ ವ್ಯಕ್ತಿತ್ವ ಹೊಂದಿರುವವರನ್ನು ಮುಂದಿನ ಮುಖ್ಯಮಂತ್ರಿ ಆ

ಯ್ಕೆ ಮಾಡಬೇಕು ಎಂದು ಗಟ್ಟಿಯಾಗಿ ಒತ್ತಾಯಿಸಿದೆ. ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರಧಾನ ಸಂಚಾಲಕರಾದ ಜಗನಾಥ ಹೊನ್ನಾ ಹೇಳಿದ್ದಾರೆ,

ದಲಿತ ಸಮಾಜದವರು ಸುಮಾರು 40-50 ವರ್ಷಗಳಿಂದ ಪಕ್ಷಕ್ಕಾಗಿ ಸಮರ್ಪಿತವಾಗಿ ದುಡಿದುಕೊಂಡು ಬಂದರೂ, ಇದುವರೆಗೂ ಯಾವುದೇ ದಲಿತ ನಾಯಕನನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರಲಾಗಿಲ್ಲ. ಜಗನಾಥ ಹೊನ್ನಾ ಅಭಿಪ್ರಾಯಪಟ್ಟಿದ್ದಾರೆ,

ಇಂತಹ ನಾಯಕನ ಆಯ್ಕೆ ಕಾಂಗ್ರೆಸ್ ಪಕ್ಷದ ಭವಿಷ್ಯಕ್ಕೆ ಬಲವನ್ನು ಒದಗಿಸಲಿದೆ ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗಲಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪತ್ರಿಕಾ ಪ್ರಕಟಣೆಯ ಮೂಲಕ ರಾಜ್ಯದ ಕಾಂಗ್ರೆಸ್ ರಾಷ್ಟ್ರೀಯ ಮತ್ತು ರಾಜ್ಯಾಧ್ಯಕ್ಷರು, ಶಾಸಕರು ಮತ್ತು ಸದಸ್ಯರಿಗೆ ತಮ್ಮ ಪ್ರಸ್ತಾವನೆ ತಲುಪಿಸಿರುವುದಾಗಿ ತಿಳಿಸಿದ್ದಾರೆ.

## ಮಸ್ಕಿ: ಖರೀದಿ ಕೇಂದ್ರ ಸ್ಥಾಪನೆಗೆ, ಕನಿಷ್ಠ ಬೆಂಬಲ ಬೆಲೆಗೆ ಆಗ್ರಹ



**ಮಲ್ಲಮ್ಮ ನುಡಿ ವಾರ್ತೆ ಮಸ್ಕಿ:** ತೋಗರಿ ಮತ್ತು ಭತ್ತಕ್ಕೆ ಬೆಂಬಲ ಬೆಲೆ ನೀಡಬೇಕು, ಖರೀದಿ ಕೇಂದ್ರ ತೆರೆಯಬೇಕು, ಬೆಳೆ ವಿಮೆ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಸೋಮವಾರ ಪಟ್ಟಣದಲ್ಲಿ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮಂಜುನಾಥ ಭೋಗಾವತಿ ಅವರಿಗೆ ಮನವಿ ಸಲ್ಲಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣಪ್ಪ ಮರಳಿ ಮಾತನಾಡಿ, ತೊಗರಿ ಬೆಳೆ ಕಟಾವು ಆಗಿದ್ದು ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಒಂದು ಸಾವಿರಕ್ಕೂ ಅಧಿಕ ಕಡಿಮೆ ದರಕ್ಕೆ ಮಾರಾಟ ವಾಗುವ ಕಾರಣ ಇದೆ ವಾರದಲ್ಲಿ ಖರೀದಿ ಕೇಂದ್ರ ತೆ–ಗೆದು ಖರೀದಿಸುವುದು. ಬೆಳೆ ನಷ್ಟವಾದ ರೈತರಿಗೆ ಅತೀ ಶೀಘ್ರದಲ್ಲಿ ಪರಿಹಾರ ಹಣ ಪಾವತಿ ಮಾಡಬೇಕು. ತಾಲೂಕಾಗಿ ಕನಿಷ್ಟ 08 ವರ್ಷಗಳಾದರು ಕೃಷಿ ನೀರ್ದೇಶಕರ ಕಾರ್ಯಾಲಯ ಇರಬೇಕಾಗಿತ್ತು ಆದರೆ ರೈತ ಸಂಪರ್ಕ ಕೇಂದ್ರದ ಇದೆ, ಮಸ್ಕಿ ತಾಲ್ಲೂಕಿನಲ್ಲಿ ರೈತ ಸಂಪರ್ಕ ಕೇಂದ್ರದಲ್ಲಿ ಖಾಲಿರುವ ಹುದ್ದೆಗಳನ್ನು ಭರ್ತಿಮಾಡಬೇಕು. ಸಂತೆಕೆಲ್ಲೂರು ಗ್ರಾಮಕ್ಕೆ ಹೋಬಳ್ಳಿ ಕೇಂದ್ರವನ್ನಾಗಿ ಪರಿಗಣಿಸಬೇಕು. ಗ್ರಾಮ ಲೆಕ್ಕಾಧಿಕಾರಿಗಳನ್ನು ಮತ್ತು ಕಂದಾಯ ನೀರಿಕ್ಷಕರನ್ನು ಕೇಂದ್ರದಲ್ಲಿ ಇರುವಂತೆ ಅನುಕೂಲ ಮಾಡಿಕೊಡಬೇಕು. ಮಸ್ಕಿ ನಗರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸಾಕಷ್ಟು ಮಳಿಗೆಗಳಿದ್ದು, ವ್ಯಾಪಾರ ವಹಿವಾಟು ನಡೆಸದೆ ಬೇರೆ ಬೇರೆ ವ್ಯಾಪಾರಸ್ಥರಿಗೆ ಬಾಡಿಗೆ ನೀಡಿದ್ದು, ಇದರಿಂದ ರೈತರು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ತೊಂದರೆ–ಯಾಗಿದೆ. ಮಳಿಗೆಗಳನ್ನು ವರ್ತಕರಿಗೆ ಮಾತ್ರ ನೀಡಲು ಸೂಚಿಸಿ ಉತ್ಪನ್ನಗಳ ಖರೀದಿಗೆ ಅನುಕೂಲ ಮಾಡಿಕೊಡಬೇಕು. ಇನ್ನು 8 ದಿನದಲ್ಲಿ ಸ್ಪಂದಿಸದಿದ್ದರೆ ಜಿಲ್ಲಾಧಿಕಾರಿ ಕಾರ್ಯಾಲಯದ ಮುಂದೆ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು. ರಾಮಯ್ಯ ಜವಳಗೇರಾ, ವೆಂಕಟೇಶ ರತ್ನಾಪುರ ಹಟ್ಟಿ, ಲಾಲ್ ಸಾಬ್ ನಾಡಗೌಡ, ಸಂತೆಕೆಲ್ಲೂರು ಗ್ರಾಮದವರಾದ ವೆಂಕಟೇಶ, ಚೆನ್ನಯ್ಯಸ್ವಾಮಿ, ರಾಜಪ್ಪ, ಹನುಮಂತಪ್ಪ, ನಾಗಪ್ಪ ಭೂಪುರ, ರಾಜಪ್ಪ ಗೊನವಾರ, ಅಂಪಣ್ಣ ಗುಡಿಹಾಳ, ಆದಪ್ಪ ಹಾಗೂ ವಿವಿಧ ಗ್ರಾಮ ಘಟಕಗಳ ರೈತ ಸಂಘ ಮುಖಂಡರು, ರೈತರು ಉಪಸ್ಥಿತರಿದ್ದರು.

## ಬಳ್ಳಾಪುರ್ ಗ್ರಾಮಕ್ಕೆ ಬಸ್ ಸೌಲಭ್ಯ ವಿದ್ಯಾರ್ಥಿಗಳ , ಗ್ರಾಮಸ್ಥರ ಮುಖದಲ್ಲಿ ಹರುಷ



**ಮಲ್ಲಮ್ಮ ನುಡಿ ವಾರ್ತೆ ಸಿರವಾರ:** ತಾಲೂಕಿನ ಹೀರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬುಳ್ಳಾಪುರ ಗ್ರಾಮಕ್ಕೆ ನಿನ್ನೆಯಿಂದ ಬಸ್ ಸಂಚಾರ ಪ್ರಾರಂಭವಾಗಿದ್ದು ವಿದ್ಯಾರ್ಥಿಗಳು ಗ್ರಾಮಸ್ಥರು ಹರುಷ ವ್ಯಕ್ತಪಡಿಸಿದರು.

ಬುಳ್ಳಾಪುರ್ ಗ್ರಾಮ ಗುಡ್ಡಗಾಡು ಪ್ರದೇಶ ಇರುವುದರಿಂದ ಗ್ರಾಮದಿಂದ ಸತತ 4–5 ಕಿಲೋಮೀಟರ್ ವಿದ್ಯಾರ್ಥಿಗಳು ನಡೆದುಕೊಂಡು ಬರುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಬರುವಾಗ ಅರಣ್ಯ ಪ್ರದೇಶ ಇರುವುದರಿಂದ ವನ್ಯಜೀವಿಗಳ ಭಯದಲ್ಲಿ ಮಕ್ಕಳು ಶಾಲಾ ಕಾಲೇಜಿಗೆ ಬರುವಂತ ಸ್ಥಿತಿ ನಿರ್ಮಾಣವಾಗಿತ್ತು. ಹಲವು ವರ್ಷಗಳಿಂದ ರಸ್ತೆ ಸಂಪರ್ಕ ಇದ್ದರೂ ಬಸ್ಸಿನ ಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಪಕ್ಕದಲ್ಲಿರುವ ಕಸನ ದೊಡ್ಡಿ ಗ್ರಾಮಕ್ಕೆ ನಡೆದುಕೊಂಡು ಬಂದು ಹಟ್ಟಿ ಮತ್ತು ಸಿರವಾರ ಬಸ್ ಗಳ ಮೂಲಕ ಹೋಗಬೇಕಾದಂತ ಪರಿಸ್ಥಿತಿ ನಿರ್ಮಾಣವಾಗಿತ್ತು.

ಆದರೆ ಅಲ್ಲಿನ ಗ್ರಾಮಸ್ಥರು ವಿದ್ಯಾವಂತ ವಿದ್ಯಾರ್ಥಿಗಳು ಸಂಬಂಧಪಟ್ಟ ಸಾರಿಗೆ ಇಲಾಖೆಗೆ ಬಸ್ ಸೌಕರ್ಯ ಕಲ್ಪಿಸಬೇಕೆಂದು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಮಾಡಿಕೊಡಲು ತಿಳಿಸಲಾಗಿತ್ತು. ಬುಳ್ಳಾಪುರ ಗ್ರಾಮಕ್ಕೆ ನಿನ್ನೆಯಿಂದ ಬಸ್ ಸಂಚಾರ ಪ್ರಾರಂಭವಾಗಿದ್ದು ವಿದ್ಯಾರ್ಥಿಗಳು ಗ್ರಾಮಸ್ಥರು ಹರುಷ ವ್ಯಕ್ತಪಡಿಸಿದರು. ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ಅಂಜಪ್ಪ ,ಗ್ರಾಮ ಪಂಚಾಯಿತಿ ಸದಸ್ಯರಾದ ಸಣ್ಣ ದುರುಗಯ್ಯ ,ಖಆಒಅ ಅಧ್ಯಕ್ಷರಾದ ಬಸವಲಿಂಗಪ್ಪ ,ದಿಡ್ಡಿ ರೇವಣಪ್ಪ,ಅದನಗೌಡ, ಕುರುಕುಂದಿ ಮಲ್ಲಪ್ಪ,ಗ್ರಾಮಸ್ಥರು ವಿದ್ಯಾರ್ಥಿಗಳು ಇದ್ದರು.

## ಮಸ್ಕಿ ಪಿಎಂಶ್ರೀ ಶಾಲೆಯಲ್ಲಿ ನನ್ನ ಕಣ್ಣು ಕಾರ್ಯಕ್ರಮ.



**ಮಲ್ಲಮ್ಮ ನುಡಿ ವಾರ್ತೆ.ಮಸ್ಕಿ:** ಪಟ್ಟಣದ ಪಿಎಂಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಧನಗರವಾಡಿ ಯಲ್ಲಿ ಟೈಟನ್ ಕಂಪನಿ ಸಂಯೋಗದಲ್ಲಿ ಶಂಕರ ಕಣ್ಣಿನ ಆಸ್ಪತ್ರೆ ಬೆಂಗಳೂರು ರವರ ನನ್ನ ಕಣ್ಣು ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ವೇಳೆ ಎಲ್ಲಾ ಶಾಲೆ ಮಕ್ಕಳಿಗೆ ಕಣ್ಣಿನ ತಪಾಸಣೆ ಮಾಡಲಾಯಿತು.

ಈ ವೇಳೆ,ಡಾ. ಅನಿಲ್, ಡಾ. ಶೋನಲ್,ಡಾ.ಡೇಸಿಮಾ ಸೂಫಿ, ಶಾಲೆಯ ಮುಖ್ಯ ಗುರುಗಳಾದ ಶ್ರೀ ಕಾಂತಮ್ಮ,ಶಿಕ್ಷಕರಾದ ಶಿವಾನಂದ ಪತ್ತಾರ್, ಬಸವರಾಜ ಬಂಡಿವಡ್ಡರ,ಮಲ್ಲಮ್ಮ,ಪವಿತ್ರ, ಯಶೋಧ,ಸಿದ್ದಯ್ಯ ಹಿರೇಮಠ ಸೇರಿದಂತೆ ಮಕ್ಕಳು ಇದ್ದರೂ.

## ಕಾಮಗಾರಿ ಅಪೂರ್ಣಗೊಳಿಸಿ ನಾಪತ್ತೆಯಾದ ಕೆ ಆರ್ ಐ ಡಿ ಎಲ್ ಅಧಿಕಾರಿಗಳು:ಎಇಇ ಹನುಮಂತಪ್ಪ



**ಮಲ್ಲಮ್ಮ ನುಡಿ ವಾರ್ತೆ ಸಿರವಾರ:**

ತಾಲೂಕಿನ ಕುರುಕುಂದ ಪ್ರೌಢಶಾಲೆಗೆ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ 2024 –25 ನೇ ಸಾಲಿನ ಮಂಜೂರಾದ ಎರಡು ಶಾಲಾ ಹೆಚ್ಚುವರಿ ಕೊಠಡಿಗಳು ನಿರ್ಮಾಣ ಪೂರ್ಣಗೊಳಿಸದೇ ಅಧಿಕಾರಿಗಳು ನಾಪತ್ತೆಯಾಗಿದ್ದು, ಕೊಠಡಿಗಳಿಲ್ಲದೇ ವಿದ್ಯಾರ್ಥಿಗಳು ಬಯಲಿನಲ್ಲಿ ಅಭ್ಯಾಸ ಮಾಡುವ ದುಸ್ಥಿತಿ ನಿರ್ಮಾಣವಾಗಿದೆ. ಸಿರವಾರ ತಾಲ್ಲೂಕಿನ ಕುರುಕುಂದ ಪ್ರೌಢಶಾಲೆಗೆ 2024 –25 ನೇ ಸಾಲಿನ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆಯಲ್ಲಿ ಎರಡು ಶಾಲಾ ಕೊಠಡಿಗಳನ್ನು 25 ಲಕ್ಷ ರೂಪಾಯಿ ಹಣ ಮಂಜೂರು ಮಾಡಿ ವರ್ಷ ಕಳೆದರೂ ಕೊಠಡಿಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳದಿರುವುದು ಪಾಲಕರ ಆಕ್ರೋಶಕ್ಕೆ ಕಾರಣವಾಗಿದೆ. ಈಗಾಗಲೇ ಅರ್ಧಕ್ಕೂ ಹೆಚ್ಚು ಕೊಠಡಿಗಳ ನಿರ್ಮಾಣ ಕಾರ್ಯ ಮುಗಿದು ಆರು ತಿಂಗಳಾದರೂ ಉಳಿದ ಕಾಮಗಾರಿಯನ್ನು ಮಾಡದಿರುವುದು ಹಣ ದುರ್ಬಳಕೆ ಮಾಡಿಕೊಂಡಿರುವ ಅನುಮಾನ ವ್ಯಕ್ತವಾಗುವಂತಾಗಿದೆ.ಮಾಡಿರುವ ಅರ್ಧ ಕಾಮಗಾರಿಯೂ ಅಂದಾಜು ಪತ್ರಿಕೆಯ ಪ್ರಕಾರ ಕಾಮಗಾರಿ ಕಳಪೆ ಗುಣಮಟ್ಟದಲ್ಲಿ ಮಾಡಲಾಗಿದ್ದು, ಇದರ ಬಗ್ಗೆ ಗಮನಹರಿಸಬೇಕಾದ ಕೆ ಆರ್ ಐ ಡಿ ಎಲ್ ಲಿಂಗಸ್ಗೂರು ಉಪವಿಭಾಗ ಅಧಿಕಾರಿ ಹನುಮಂತಪ್ಪ ಅವರು ಕಾಮಗಾರಿ ವೀಕ್ಷಣೆ ಮಾಡದೇ ಸಂಪರ್ಕಕ್ಕೂ ಸಿಗದೇ ನಿರ್ಲಕ್ಷ್ಯವಹಿಸಿದ್ದಾರೆ ಎಂದು ಪಾಲಕರು ದೂರುತ್ತಾರೆ.

ಕಾಮಗಾರಿ ಪೂರ್ಣಗೊಳ್ಳದ ಕಾರಣ ಶಾಲಾ ಮಕ್ಕಳಿಗೆ ಕೊಠಡಿಗಳ ಸಮಸ್ಯೆಯಿಂದಾಗಿ ,ಒಂದೇ ಕಟ್ಟಡದಲ್ಲಿ ಪ್ರೌಢಶಾಲೆ, ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮಕ್ಕಳಿಗೆ ಶಾಲಾ ಕೊಠಡಿಗಳು ಇಲ್ಲದೆ ಹೆಚ್ಚು ಸಮಸ್ಯೆ ಉಂಟಾಗಿದೆ. ಆವರಣದಲ್ಲಿ ಕುಳಿತುಕೊಂಡು ವಿದ್ಯಾಭ್ಯಾಸ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.ಅಧಿಕಾರಿಗಳಿಗೆ ಎಸ್ ಡಿ ಎಂ ಸಿ ಅಧ್ಯಕ್ಷರು ಗ್ರಾಮಸ್ಥರು ಕಾಮಗಾರಿ ಗುಣಮಟ್ಟದಿಂದ ನಿರ್ಮಿಸಿ ಅತಿ ಬೇಗನೆ ಕಾಮಗಾರಿ ಮುಗಿಸಿ ಮಕ್ಕಳಿಗೆ ಅನುಕೂಲ ಮಾಡಿಕೊಡುಬೇಕು ಎಂದು ಹಲವು ಬಾರಿ ತಿಳಿಸಿದರು ಯಾವುದು ಪ್ರಯೋಜನವಿಲ್ಲ.ಎಇ ಧನಂಜಯ್ ರಾಯಚೂರು ಇವರಿಗೂ ದೂರವಾಣಿ ಸಂಪರ್ಕದ ಮಾಹಿತಿ ತಿಳಿಸಿದರು ಯಾವುದೇ ಪ್ರಯೋಜನವಾಗಿಲ್ಲ. ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸಚಿವರುಗಳು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಗ್ರಾಮೀಣಮಟ್ಟದಲ್ಲಿ ಸರ್ಕಾರಿ ಶಾಲೆಗಳ ಕೊಠಡಿಗಳು ನಿರ್ಮಾಣ ಮಾಡಿ ಮಕ್ಕಳಿಗೆ ಅನುಕೂಲವಾಗಲೆಂದು ಸಾಕಷ್ಟು ಅನುದಾನ ಬಿಡುಗಡೆಗೊಳಿಸಿದರು. ಅಧಿಕಾರಿಗಳು ಮಾತ್ರ ಕಾಮಗಾರಿ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಎಸ್ ಡಿ ಎಂ ಸಿ ಅಧ್ಯಕ್ಷರು ಮಕ್ಕಳ ಪಾಲಕರು, ಊರಿನ ಹಿರಿಯರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

## ಆರ್ ಸಿದ್ದನಗೌಡ ತುರುವಿಹಾಳಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸನ್ಮಾನ



**ಮಲ್ಲಮ್ಮ ನುಡಿ ವಾರ್ತೆ ಮಸ್ಕಿ:**

ನೂತನ ಯೋಜನಾ ಪ್ರಾಧಿಕಾರ ಅಧ್ಯಕ್ಷ ಆರ್ ಸಿದ್ದನಗೌಡ ತುರುವಿಹಾಳ ಅವರಿಗೆ ಮಂಗಳವಾರದಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ) ತಾಲೂಕು ಘಟಕ ಮಸ್ಕಿ ವತಿಯಿಂದ ಪಟ್ಟಣದ ಪತ್ರಿಕ ಭವನದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ನೂತನ ಯೋಜನಾ ಪ್ರಾಧಿಕಾರ ಅಧ್ಯಕ್ಷ ಆರ್ ಸಿದ್ದನಗೌಡ ತುರುವಿಹಾಳ, ಪಟ್ಟಣದಲ್ಲಿ ಅನಾಧಿಕೃತವಾಗಿ ನಡೆಯುತ್ತಿರುವ ಬಡಾವಣೆಗಳನ್ನು ತಡೆಯಲಾಗುವುದು ಹಾಗೂ ಸರಕಾರದಿಂದ ಬರುವಂತಹ ಸೌಲಭ್ಯಗಳನ್ನು ಪಟ್ಟಣಕ್ಕೆ ಒದಗಿಸುವಲ್ಲಿ ಪ್ರಯತ್ನಿಸಲಾಗುವುದು ಹಾಗೂ ಸೋಮನಾಥನಗರದ ನಿವಾಸಿಗಳಿಗೆ ಹಕ್ಕು ಪತ್ರ ವಿತರಣೆಯ ವಿಷಯವಾಗಿ ಶಾಸಕರು ಹಾಗೂ ನಾವು ಪ್ರಾಮಾಣಿಕವಾಗಿ ಸಹಕರಿಸುತ್ತೇವೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಅಬ್ದುಲ್ ಅಜೀಜ್, ಪ್ರಕಾಶ್, ಕಾ.ಪ.ಸ ಅಧ್ಯಕ್ಷ ವೀರೇಶ ಚೌದ್ರಿ, ಅಮರೇಶ್ ಪತ್ತಾರ್, ದುರ್ಗೇಶ್ ಹಸಮಕಲ್, ಇಂದ್ರಪಾಷ ಚಿಂಚರಕಿ, ರವಿ ಗೌಡನಬಾವಿ, ಸೇರಿದಂತೆ ಪಕ್ಷದ ಕಾರ್ಯಕರ್ತರಾದ ಶಿವಣ್ಣ ನಾಯಕ ವೆಂಕಟಾಪುರ, ಮಲ್ಲಯ್ಯ ಮುರಾರಿ, ನಾಗರಾಜ್ ಗುಡಿಸಲಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ವಿಶ್ವ ಏಡ್ಸ್ ದಿನಾಚರಣೆ & ವಿಕಲಚೇತನರ ದಿನ ಜಾಗೃತಿ ಜಾಥಾ ಮಾನವೀಯತೆ, ಸಮಾನತೆ, ಸಂವೇದನೆಗೆ ಕರೆ



**ಮಲ್ಲಮ್ಮ ನುಡಿ ವಾರ್ತೆ ದೇವದುರ್ಗ:** "ಎಲ್ಲರೂ ಸಮಾನ ಆರೋಗ್ಯ ಹಕ್ಕು ಎಲ್ಲರಿಗೂ" ಎಂಬ ನುಡಿಯೊಂದಿಗೆ ವಿಶ್ವ ಏಡ್ಸ್ ದಿನಾಚರಣೆ ಹಾಗೂ ವಿಕಲಚೇತನರ ದಿನಾಚರಣೆ ಅಂಗವಾಗಿ ತಾಲೂಕಿನ ಕಾನೂನು ಸೇವಾ ಸಮಿತಿ, ಸಾರ್ವಜನಿಕ ಆಸ್ಪತ್ರೆಗೆ, ಪುರಸಭೆ, ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಭಾನುವಾರ ದೇವದುರ್ಗದಲ್ಲಿ ಜಾಗೃತಿ ಜಾಥಾ ಭವ್ಯವಾಗಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲೆಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಶ್ರೀ ಸುರೇಶ ಅಣ್ಣಪ್ಪ ಸವದಿ ಮಾತನಾಡಿ, ಏಡ್ಸ್ ರೋಗವು ಕೇವಲ ವೈದ್ಯಕೀಯ ಸಮಸ್ಯೆ ಅಲ್ಲದೆ, ಸಮಾಜದ ಜವಾಬ್ದಾರಿಯೂ ಆಗಿದೆ. ಸೋಂಕಿತರನ್ನು ಉಪೇಕ್ಷಿಸದೇ ಗೌರವದಿಂದ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.

ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಶ್ರೀ ರಫಿಕ್ ಅಹಮ್ಮದ್ ಅವರು ಮಾತನಾಡಿ, ವಿಕಲಚೇತನರು ಅವಕಾಶ ದೊರೆತರೆ ಸಾಧಕರಾಗಬಹುದು. ಸರ್ಕಾರ ನೀಡುವ ಎಲ್ಲಾ ಸೌಲಭ್ಯಗಳು ಅವರಿಗೆ ತಲುಪಲು ಕಾನೂನು ಸೇವಾ ಸಮಿತಿ ಸದಾ ಸಿದ್ಧವಾಗಿದೆ ಎಂದರು. ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಬನದೇಶ್ವರ ಗಬ್ಬೂರು ಅವರು, ಎವಿ ವಿರುದ್ಧ ಹೋರಾಡಲು ಪರೀಕ್ಷೆ, ಚಿಕಿತ್ಸೆ, ಜಾಗೃತಿ ಮತ್ತು ಮಾನಸಿಕ ಸಹಾಯ ಮುಖ್ಯ ಅಂಶ ಎಂದು ತಿಳಿಸಿದರು. ಡಾ. ನಿರ್ಮಲಾ ದೇವಿ ಅವರು ಏಡ್ಸ್ ಬಗ್ಗೆ ಅರಿವು ಮತ್ತು ಸುರಕ್ಷಿತ ಜೀವನಶೈಲಿ ಯೌವನದಿಂದಲೇ ಬೆಳೆಸಬೇಕೆಂದರು. ತಾಲೂಕು ನ್ಯಾಯವಾದಿಗಳ ಸಂಘ ಅಧ್ಯಕ್ಷರು ವಸಂತಕುಮಾರ ಬಿ. ಸೋಮನಮರಡಿ ಅವರು, ವಿಕಲಚೇತನರಿಗೆ ಸರ್ಕಾರ ನೀಡುವ ಕಾನೂನು ಸೌಲಭ್ಯಗಳನ್ನು ತಲುಪಿಸುವಲ್ಲಿ ವಕೀಲರು ಪ್ರಮುಖ ಪಾತ್ರವಹಿಸಲಿದ್ದಾರೆ ಎಂದು ಹೇಳಿದರು.

ಲುಕ್ಮಾನ್ ಸಾಬ್ ಆರೋಗ್ಯ ನಿರೀಕ್ಷಕರು ಮಾತನಾಡಿ, ಗ್ರಾಮ ಮಟ್ಟದಲ್ಲಿಯೂ ಏಡ್ಸ್ ಜಾಗೃತಿ ಶಿಬಿರಗಳನ್ನು ಹೆಚ್ಚಿಸಲಾಗುತ್ತದೆ ಎಂದರು. ಜಾಥಾದಲ್ಲಿ ಆಶಾ ಕಾರ್ಯಕರ್ತರು, ಸಾರ್ವಜನಿಕ ಆಸ್ಪತ್ರೆಯ ವೈದ್ಯರು ಹಾಗೂ ನರ್ಸ್‌ಗಳು, ಜೆ. ಜೆ. ಕಾಲೇಜು ಮತ್ತು ಗವಿಮಾನಪ್ಪ ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳು, ನ್ಯಾಯವಾದಿಗಳು, ಅಂಗವಿಕಲ ಸಂಘದ ಸದಸ್ಯರು ಹಾಗೂ ಹಲವು ಸ್ವಯಂಸೇವಾ ಸಂಘಟನೆಗಳ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಘೋಷಣೆಗಳೊಂದಿಗೆ ಜಾಥಾ ಸಾಗಿತು.

ಈ ಸಂದರ್ಭದಲ್ಲಿ ಗೀತಮ್ಮ ಬಿ.ಚ್.ಓ, ಶ್ರೀಮತಿ ಶಾಂತಾ ನಾಯ್ಕು, ಮನೋಜ್ ಪಾಟೀಲ, ರಘುನಂದನ್, ಹನುಮಂತಪ್ಪ, ಅನಿತಾ, ಶಿಲ್ಪಾ, ನಾಗರಾಜಯ್ಯ, ಶಿವರಾಜ ಸೇರಿದಂತೆ ಅನೇಕ ಮಂದಿ ಸಿಬ್ಬಂದಿಗಳು ಶ್ರಮಿಸಿದರು.

## ಪ್ರೌಢಶಾಲೆಯ ಮಕ್ಕಳಿಗೆ ಶೂ ಸಾಕ್ಸ್ ಹಾಗೂ ಎಲ್ ಬಿ ಎ ಪ್ರಶ್ನೆ ಕೋಟೆ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ ಸಿರವಾರ:**

ಸಿರವಾರ ತಾಲೂಕಿನ ಕುರುಕುಂದ ಪ್ರೌಢಶಾಲೆಯಲ್ಲಿ 2025 26 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶಾಲಾ ಮಕ್ಕಳಿಗೆ ಎಸ್ ಡಿಎಂಸಿ ಅಧ್ಯಕ್ಷರು ಶೇಖರಪ್ಪ ಗೌಡ ಮಾಲಿ ಪಾಟೀಲ್ ಮಕ್ಕಳಿಗೆ ಶೂ ಸಾಕ್ಸ್ ಹಾಗೂ 10ನೇ ತರಗತಿ ವಿದ್ಯಾರ್ಥಿಗಳು ಉತ್ತಮ ಅಂಕ ಪಡೆಯಲು ಎಲ್ ಬಿ ಎ ಪ್ರಶ್ನೆ ಕೋಟೆಯನ್ನು ವಿತರಣೆ ಮಾಡಿದರು.

ನಂತರ ಮಾತನಾಡಿದ ಸರ್ಕಾರ ನೀಡುವ ಸೌಲಭ್ಯಗಳನ್ನು ಪಡೆದು–ಕೊಂಡು ಮಕ್ಕಳು ಶಾಲೆಗೆ ಸಮವಸ್ತ್ರ ಧರಿಸಿ ಹಾಗೂ ಶೋ ಸಾಕ್ಸ್ ಹಾಕಿಕೊಂಡು ಶಿಸ್ತಿನಿಂದ ಶಾಲೆಗೆ ಬರಬೇಕು ಎಂದು ಎಸ್ ಡಿಎಂಸಿ ಅಧ್ಯಕ್ಷರು ಮಕ್ಕಳಿಗೆ ತಿಳಿಸಿದರು.

ಮುಖ್ಯೋಪಾಧ್ಯಾಯರಾದ ನಾಗಲಿಂಗಪ್ಪ ಇವರು ಮಾತನಾಡಿ ಶಾಲಾ ಮಕ್ಕಳಿಗೆ ಸರಕಾರ ನೀಡುವ ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರಗಳು, ಶೂ ಸಾಕ್ಸ್ , ಹಾಗೂ 10ನೇ ತರಗತಿ ಮಕ್ಕಳಿಗೆ 70 ರಿಂದ 80 ಅಂಕಗಳನ್ನು ಪಡೆಯಲು ಎಲ್ ಬಿ ಎ ಪ್ರಶ್ನೆ ಕೋಟೆ ಪುಸ್ತಕಗಳ ವಿತರಣೆ ಮಾಡಿದರು. ಮಕ್ಕಳು ಉತ್ತಮ ರೀತಿ ವಿದ್ಯಾಭ್ಯಾಸ ಮಾಡಬೇಕಾಗಿದೆ. ಉತ್ತಮ ಅಂಕಗಳಿಗೆ ಸಹಾಯಕವಾಗಲಿದೆ ಎಂದು ಮಕ್ಕಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರು ನಾಗಲಿಂಗಪ್ಪ ,ಎಸ್ಡಿಎಂಸಿ ಅಧ್ಯಕ್ಷರು ಶೇಖರಪ್ಪ ಗೌಡ ಮಾಲಿಪಾಟೀಲ್, ಮಲ್ಲಿಕಾರ್ಜುನ, ಸಹಶಿಕ್ಷಕರಾದ ರತ್ನಾಕರ್, ಬಶಿರತ್ ಬೇಗಮ್, ಅತಿಥಿ ಶಿಕ್ಷಕರಾದ ರಾಜಮಹಮದ್, ಸುನಿತಾ, ಕವಿತಾ, ಬಾಲಮ್ಮ, ಗ್ರಾಮಸ್ಥರು ಇತರರು ಇದ್ದರು.

## ಧರ್ಮದ ಹಾದಿಯಲ್ಲಿ ನಡೆಯಲು ರೇವಪ್ಪಯ್ಯನವರ ತತ್ವಾದರ್ಶಗಳು ಅತ್ಯವಶ್ಯಕ



**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:** ಧರ್ಮದ ಹಾದಿಯಲ್ಲಿ ನಡೆದು, ಜೀವನ ಸಾರ್ಥಕ ಮಾಡಿಕೊಳ್ಳಲು ಸದ್ಗುರು ಶ್ರೀ ರೇವಪ್ಪಯ್ಯ ಮಹಾಶಿವಶರಣ ತತ್ವಾದರ್ಶಗಳು ಅತ್ಯವಶ್ಯಕವಾಗಿವೆ ಎಂದು ಕಟ್ಟಿಮನಿ ಹಿರೇಮಠ ಸಂಸ್ಥಾನ ಮೇಹಕರನ ಶ್ರೀ ರಾಜೇಶ್ವರ ಶಿವಾಚಾರ್ಯರು ಪ್ರತಿಪಾದಿಸಿದರು.

ತಾಲೂಕಿನ ನಾವದಗಿ ಗ್ರಾಮದ ಸದ್ಗುರು ರೇವಪ್ಪಯ್ಯ ಸ್ವಾಮಿಗಳ ಮಂದಿರದಲ್ಲಿ ಆಯೋಜಿಸಿದ್ದ ಶ್ರೀ ರೇವಪ್ಪಯ್ಯಾ ಮುತ್ಯಾರವರ 89ನೇ ಜಾತ್ರಾ ಮಹೋತ್ಸವದ ಧರ್ಮಸಭೆಯ ಸಾನಿಧ್ಯವಹಿಸಿ ಅವರು ಮಾತನಾಡಿದರು. ಧರ್ಮದ ಅವನತಿಯ ಸಂದರ್ಭದಲ್ಲಿ ಧರ್ಮದ ಮಾರ್ಗದಲ್ಲಿ ನಡೆಯುವಂತೆ ಮಾಡಲು ಸದ್ಗುರು ರೇವಪ್ಪಯ್ಯ ಶಿವಶರಣರು ಸತತ ಪ್ರಯತ್ನಪಟ್ಟು, ಲಿಂಗಾಯತ ಸಮಾಜದ ಧಾರ್ಮಿಕ ಆಚರಣೆಗಳಿಗೆ ಮಹತ್ವನೀಡಿದರು. ಅವರ ತತ್ವಾದರ್ಶಗಳು ನಮ್ಮೆಲ್ಲರಿಗೂ ಆದರ್ಶವಾಗಿವೆ. ಗುರುವಿಗಿಂತ ಅಧಿಕ ಜಗತ್ತಿನಲ್ಲಿ ಮತ್ತೊಂದಿಲ್ಲ, ಸದ್ಗುರು ರೇವಪ್ಪಯ್ಯನವರು ತಮ್ಮ ಪವಾಡಗಳಿಂದ ಎಲ್ಲರನ್ನೂ ಧಾರ್ಮಿಕ ಮಾರ್ಗದಲ್ಲಿ ನಡೆಯುವಂತೆ ಮಾಡಿದರು ಎಂದರು. ನಾವದಗಿಯ ಸದ್ಗುರು ರೇವಪ್ಪಯ್ಯ ದೇವಸ್ಥಾನ ಸಮಿತಿಯವರು ಪ್ರಸಾದ ನಿಲಯ ಸ್ಥಾಪಿಸಲು ಮುಂದಾಗಬೇಕು. ಭಕ್ತಾದಿಗಳಿಗೆ ಕುಳಿತುಕೊಂಡು ಪ್ರಸಾದ ಬಡಿಸುವ ಕಾರ್ಯವಾಗಬೇಕು. ದೇವಸ್ಥಾನದ ಹತ್ತಿರ ಸಾಕಷ್ಟು ಸ್ಥಳಾವಕಾಶವಿದೆ ಇದನ್ನು ಬಳಸಿಕೊಂಡು ಉತ್ತಮ ಪ್ರಸಾದ ನಿಲಯ ಸ್ಥಾಪಿಸಿ ಎಂದು ಮಾರ್ಗದರ್ಶನ ಮಾಡಿದರು.

ಸಂಸ್ಥಾನಮಠದ ಶ್ರೀ ಶಾಂತವೀರ ನಾಗಭೂಷಣ ಸ್ವಾಮಿಜಿ ಮಾತನಾಡಿ, ಸದ್ಗುರು ರೇವಪ್ಪಯ್ಯ ಶಿವಶರಣರು ಬೇಡಿದ ಭಕ್ತರಿಗೆ ಬೇಡಿದನ್ನು ನೀಡಿದ ಮಹಾನ್ ಸ್ವಾಮೀಜಿಗಳಾಗಿದ್ದರು. ಅವರು ಇಂದಿಗೂ ನಮ್ಮೆಲ್ಲರ ಇಷ್ಟಾರ್ಥಗಳನ್ನು ಪೋರೈಸುತ್ತಿದ್ದಾರೆ. ಇಂತಹ ಮಹಾನ್ ಪುರುಷರ ಜಾತ್ರಾ ಮಹೋತ್ಸವದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಿಗೆ ನಾವೆಲ್ಲರೂ ಸಾಕ್ಷಿಯಾಗಿದ್ದೇವೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಮೈಸೂರಿನ ಸಂಗೀತ ಕಲಾವಿದ ಶಿವದೇವ ಸ್ವಾಮಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷ ರಾಜಶೇಖರ ಗೌಡಪ್ಪ ಬಿರಾದಾರ, ಪ್ರಮುಖರಾದ ರಾಜೆಪ್ಪ ಶೇರಿಕಾರ, ಪ್ರದೀಪ ಪಾಟೀಲ, ಶಿದ್ದಲಿಂಗ ಸ್ವಾಮಿ, ಹಾವಯ್ಯ ಸ್ವಾಮಿ, ಮಲ್ಲಿಕಾರ್ಜುನ ಶೇರಿಕಾರ, ಶಿವಕುಮಾರ ಸ್ವಾಮಿ ಜಮಾದಾರ, ರೇವಣಯ್ಯಾ ಸ್ವಾಮಿ ರಾಜೇಶ್ವರ, ಬಾಬುರಾವ ಗುಡ್ಡಾ, ರವಿ ಪಾಟೀಲ, ಮಲ್ಲಿಕಾರ್ಜುನ ಕನಕಟ್ಟೆ, ಚಂದ್ರಕಾಂತ ಬಿರಾದಾರ, ಶಿವರಾಜ ಬಿರಾದಾರ, ಸೂರ್ಯಕಾಂತ ಬಿರಾದಾರ, ಶರಣಪ್ಪ ಸಾತಾನೋರ, ನಾಗಪ್ಪ ಉಚ್ಚೆ ಉಪಸ್ಥಿತರಿದ್ದರು.ಜಯರಾಜ ದಾಬಶೆಟ್ಟಿ ಸ್ವಾಗತಿಸಿದರು. ಶಾಂತವೀರ ಸ್ವಾಮಿ ನಿರೂಪಿಸಿದರು. ಶಿವದೇವ ಸ್ವಾಮಿ ವಂದಿಸಿದರು.

## ಬೆಳೆಹಾನಿಗೆ ಸರ್ಕಾರ ಸುಮಾರು 36. ಕೋಟಿ ಬಿಡುಗಡೆ: ಬೋಸರಾಜ್

**ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**

ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಆನೆಗೊಳಗಾದ ಬೆಳೆಗಳಿಗೆ ಸರ್ಕಾರದ ಸುಮಾರು 36. ಕೋಟಿ ಬಿಡುಗಡೆಯಾಗಿದ್ದು ಅತಿ ಶೀಘ್ರದಲ್ಲಿ ಬೆಳೆಯಿಂದ ನಷ್ಟವಾದ ರೈತರಿಗೆ ಶೀಘ್ರದಲ್ಲಿ ನೇರವಾದ ಅವರ ಖಾತೆಗೆ ಜಮಾ ಆಗಲಿದೆ ಎಂದು ಸಣ್ಣ ನೀರಾವರಿ ಸಚಿವ ಎನ್ ಎಸ್ ಬೋಸರಾಜ ಹೇಳಿದರು.ಲಿಂಗಸುಗೂರು ತಾಲೂಕಿನ ಕಸಬಾ ಲಿಂಗಸುಗೂರಿನ ಶ್ರೀ ಕುಪ್ಪಿ ಭೀಮ ಜಾತ್ರಾ ಮಹೋತ್ಸವ,ಹಾಗೂ ಶತಮಾನೋತ್ಸವದ ಅಂಗವಾಗಿ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ಸಾಮೂಹಿಕ ವಿವಾಹ ಹಾಗೂ ಶ್ರೀ ಕುಪ್ಪಿ ಭೀಮ ಕೃತಿ ಬಿಡುಗಡೆ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ. ನೂತನ 26 ಜೋಡಿ ವಧು–ವರರಗೆ ಶುಭ ಹಾರೈಸಿ ಮಾತನಾಡಿದ ಅವರು. ರೈತರ ಪರ ಸರಕಾರವಾಗಿದ್ದು ಕಬ್ಬು, ಹತ್ತಿ, ತೊಗರಿ, ಬೆಳೆ ಸೇರಿದಂತೆ ವಿವಿಧ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿದ್ದು ಅದರಂತೆ ಜಿಲ್ಲೆಯಲ್ಲಿ ಅತಿವೃಷ್ಟಿಗೆ ಹಾನಿಗೊಳಗಾದ ರೈತರಿಗೆ ರಾಜ್ಯ ಸರ್ಕಾರದಿಂದ ಜಿಲ್ಲೆಗೆ ಸುಮಾರು 36 ಕೋಟಿ ರೂಪಾಯಿಗಳ ಬಿಡುಗಡೆ ಮಾಡಲಾಗಿದ್ದು ಆದಷ್ಟು ಶೀಘ್ರದಲ್ಲಿ ಜಮಾ ಆಗಲಿದ್ದು ರೈತರು ಯಾವುದೇ ತರಹದ ಆತಂಕ ಪಡುವದು ಅವಶ್ಯಕತೆ ಇಲ್ಲ. ಸರಕಾರ ಈಗಾಗಲೇ ಬರಿ ಶಾದಿಬಾಗ್ಯಕ್ಕೆ ಯೋಜನೆ ರೂಪಿಸಿಲ್ಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನವ ವಧು ವರರಿಗೆ ಉಪನೊಂದಣೆ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡ ನವ ಜೋಡಿಗಳಿಗೆ 50 ಸಾವಿರ ಮತ್ತು ರೂ. 2 ಸಾವಿರ, ಸರ್ಕಾರದ ಪ್ರೋತ್ಸಾಹ ಧನ ಸೇರಿ ಒಟ್ಟು 52 ಸಾವಿರ ರೂ ಗಳ ಯೋಜನೆ ಜಾರಿಯಲ್ಲಿದ್ದು ಇದರ ಸದುಪಯೋಗಪಡಿಸಿಕೊಳ್ಳಲು ಮುಂದಾಗಬೇಕು ಅವರು ಹೇಳಿದರು. ಎಲ್ಲ ಜಾತಿ ಧರ್ಮದವರು ಸೇರಿ ಸಂಭ್ರಮದಿಂದ ಶ್ರೀ ಕುಪ್ಪಿ ಭೀಮ ದೇವರ ಜಾತ್ರಾ ಶತಮಾನೋತ್ಸವದ ಅಂಗವಾಗಿ ಈ ಕಾರ್ಯಕ್ರಮದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಿರುವುದು ಸಂತಸದ ವಿಷಯವಾಗಿದೆ ವಧು ವರರು ತಮ್ಮ ಮುಂದಿನ ಭವಿಷ್ಯ ಉಜ್ವಲವಾಗಲಿ ಪ್ರತಿಯೊಬ್ಬ ನೂತನ ಜೋಡಿಗಳು ತಮ್ಮನ್ನು ತಾವರಿತುಕೊಂಡು ನೂತನ ದಾಂಪತ್ಯಕ್ಕೆ ಕಾಲಿಟ್ಟು ಹೊಸ ಬಾಳ್ವೆ ನಡೆಸಬೇಕೆಂದು ನೂತನ ವಧು ವರರಿಗೆ ಮಾತು ಹೇಳಿದರು.



ಶಾಸಕ ಮಾನಪ್ಪ ಡಿ ವಜ್ಜಲ್ ಮಾತನಾಡಿ ನೂತನ ವಧು ವರರು ಇಂತಹ ಸೌಭಾಗ್ಯದ ದಿನದಲ್ಲಿ ಗೃಹತಶ್ರಮಕ್ಕೆ ಕಾಲಿಡುತ್ತಿರುವ ನಿಮ್ಮಂತ ನವಜೋಡಿಗಳು ಅದೃಷ್ಟವಂತರೆಂದು ತಪ್ಪಾಗಲಿಕ್ಕಿಲ್ಲ, ಒಂದು ಹೆಣ್ಣು ಪವಿತ್ರವಾದ ಗಂಗಾ ನದಿಯ ರೀತಿ ಎಲ್ಲೋ ಹುಟ್ಟಿ ಎಲ್ಲೋ ಸೇರುವ ಅಲ್ಲಿ ಮಗಳಾಗಿ ತಾಯಿಯಾಗಿ ಅತ್ತೆಯಾಗಿ ಇಡೀ ಸಂಸಾರದ ತೊಟ್ಟಿಲನ್ನು ನಿಮ್ಮ ಜೀವನ ಶೈಲಿ ಹಿಂದಿನಿಂದ ಉಜ್ವಲವಾಗುತ್ತಿದೆ, ಎಂದು ಹೇಳುತ್ತಾ ಸರ್ಕಾರದ ಸಚಿವರನ್ನ ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರ ಬೆಳೆ ಪರಿಹಾರ ಘೋಷಿಸಲು, ಮತ್ತು ತಾಲೂಕಿನ ಕೃಷಿ ಉಪ ನಿರ್ದೇಶಕರ ಕಛೇರಿ ಟು ಸಿಂಧನೂರಿಗೆ ಸ್ಥಳಾಂತರ ಗೊಂಡಿದ್ದು ಇದನ್ನು ಲಿಂಗಸಗೂರಿನಲ್ಲಿ ಮುಂದುವರಿಸಲು ಸರ್ಕಾರದ ಪ್ರತಿನಿಧಿಗಳಾದ ನೀವು ಇದನ್ನ ಇಲ್ಲಿಯೇ ಮುಂದುವರಿಸಲು ಸರ್ಕಾರಕ್ಕೆ ಒತ್ತಡ ಹಾಕಿ ಎಂದು ಕಾರ್ಯಕ್ರಮದ ವೇದಿಕೆಯಲ್ಲಿ ಸಚಿವರಗೆ ಮನವಿ ಮಾಡಿಕೊಂಡರು. ಕಾರ್ಯಕ್ರಮ ಉದ್ದೇಶಿಸಿ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪುರ. ಮಾಜಿ ಸಂಸದರಾದ ಕೆ ವಿರೂಪಾಕ್ಷಪ್ಪ. ಸೇರಿದಂತೆ ಹಲವು ಮುಖಂಡರು ಮಾತನಾಡಿದರು. ಸಾಹಿತಿ ಸಾಹಿತಿ ಸಂಶೋಧಕ ಶ್ರೀ ಕುಟ್ಟಿಶ್ರೀ ಕುಪ್ಪಿ ಭೀಮ ಆದಿದೇವ ಶ್ರೀ ಕುಪ್ಪಿ ಭೀಮ ಇತಿಹಾಸ ಕುರಿತು ಮಾತನಾಡಿದ ಅವರು ರಚಿಸಿದ ಕೃತಿಯನ್ನು ಬಿಡುಗಡೆಗೊಳಿಸಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಮ. ನಿ. ಪ್ರ ಸಿದ್ಧಲಿಂಗ ಮಹಾಸ್ವಾಮಿಗಳು ಸುವರ್ಣ ಗಿರಿ. ಶ್ರೀ ಗುರು ಮಹಾಂತ ಮಹಾಸ್ವಾಮಿಗಳು ಇಲಕಲ್ಲ. ಶಿವಾಚಾರ್ಯರು ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ನಂದವಡಗಿ. ಮ.ನಿ.ಪ್ರ. ಶ್ರೀ ಗುರುಬಸವ ಮಹಾಸ್ವಾಮಿಗಳು ಶ್ರೀ ಗಣಮಠಶ್ವರ ಮಠ ಸಂತೆಕಲ್ಲೂರು. ಷ ಬ್ರಹ್ಮ ಗುರು ಗಜದಂಡ ಶಿವಾಚಾರ್ಯರು ತೋಪಿನಕಟ್ಟಿ ಮಠ ದೇವರು ಭೂಪುರ್. ಮಾತಾಡು ಶ್ರೀ ಸೈಯದ್ ಮುಜಾಮಿಲ್ಲ ಇಸ್ಲಾಂ ಧರ್ಮದ ಧಾರ್ಮಿಕ ಗುರುಗಳು ಸೇರಿದಂತೆ ಹರ ಗುರು ಚರಮೂರ್ತಿಗಳು ಹಾಗೂ ಮಾಜಿ ಸಂಸದರಾದ ರಾಜ ಅಮರೇಶ್ವರ ನಾಯಕ್. ಮಾಜಿ ಶಾಸಕ ಹಾಗೂ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷರಾದ ಡಿ. ಎಸ್. ಹೂಲಗೇರಿ. ರಾಜ ಶ್ರೀನಿವಾಸ್ ನಾಯಕ್. ಅಮರಗುಂಡಪ್ಪ ಮೇಟಿ. ಅಮ್ಮಾಪುರ್. ವೀರನಗೌಡ ಲೆಕ್ಕಿಹಾಳ ಗೋವಿಂದ ನಾಯಕ್ ಅಮರೇಶ್ ಹೆಸರು ಭೂಪನಗೌಡ ಕರಡಕಲ್. ಬಾಬುರೆಡ್ಡಿ ಮುನ್ನೂರು. ರಾಜ್ಯದೂರಿಣ–ರು ಸೇರಿದಂತೆ ರಾಜಕೀಯ ಹಲವು ರಾಜಕೀಯ ದುರುಂಡರು ಉಪಸ್ಥಿತರಿದ್ದರು

# ಸಿಟಿಗೆ ಕ್ವಾಲಿಟಿ ನೀರು ಪೂರೈಕೆಯಾಗಲಿ: ಭೈರತಿ ಸುರೇಶ ಕಟ್ಟುನಿಟ್ಟಿನ ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು:ಸಿಟಿಗೆ ಕ್ವಾಲಿಟಿ ನೀರು ಪೂರೈಕೆಗೆ ಅಗತ್ಯ ಕ್ರಮವಹಿಸಬೇಕು ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬೈರತಿ ಸುರೇಶ ಅವರು ರಾಯಚೂರು ಮಹಾನಗರಪಾಲಿಕೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಿಸೆಂಬರ್ 3ರಂದು ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಜನರ ಆರೋಗ್ಯ ತುಂಬಾ ಮುಖ್ಯ. ಜನತೆಗೆ ಶುದ್ಧ ಮತ್ತು ಸಕಾಲಕ್ಕೆ ನೀರು ಕೊಡುವುದು ನಮ್ಮ ಆದ್ಯ ಕಾರ್ಯವಾಗಬೇಕಿದೆ. ಈ ದಿಶೆಯಲ್ಲಿ ಯೋಚಿಸಿ ಪಾಲಿಕೆಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ಕನಿಷ್ಠ 40 ಲಕ್ಷರೂ.ಗಳನ್ನು ಕುಡಿವ ನೀರಿನ ಲಿಕೇಜ್, ಪೈಪ್ ದುರಸ್ತಿಯಂತಹ ಬೇರೆ ಬೇರೆ ಕಾರ್ಯಗಳಿಗೆಂದೇ ಮೀಸಲಿರಿಸಿ, ಶುದ್ಧ ನೀರು ಪೂ–ರೈಕೆಗೆ ಒತ್ತು ಕೊಡಬೇಕು ಎಂದು ಪಾಲಿಕೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕುಡಿವ ನೀರು ಪರೀಕ್ಷೆಯ ಬಗ್ಗೆ ಸಚಿವರು ಅಧಿಕಾರಿಗಳಿಗೆ ಕೇಳಿದರು. ಪ್ರತಿ ದಿನ ಮೂರು ಭಾರಿ ಪರೀಕ್ಷೆಗೊಳಪಡಿಸಿಯೇ ಕುಡಿವ ನೀರು ಪೂರೈಕೆ ಮಾಡುತ್ತಿದ್ದೇವೆ. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ಪ್ರಯೋಗಾಲಯ ಕೇಂದ್ರದಲ್ಲಿ ಸಹ ನೀರನ್ನು ಪರೀಕ್ಷಿಸಿ ಸಿಟಿಗೆ ನೀರು ಪೂರೈಕೆ ಮಾಡುತ್ತಿದ್ದೇವೆ ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

ತೆರಿಗೆ ವಸೂಲಾತಿಯಲ್ಲಿ ಪ್ರಗತಿ ತೋರಿದ್ದೀರಾ ಎಂದು ಸಚಿವರು ಮಹಾನಗರಪಾಲಿಕೆಯ ಅಧಿಕಾರಿಗಳಿಗೆ ಪ್ರಶ್ನಿಸಿದರು. ಮಹಾನಗರಪಾಲಿಕೆಯಿಂದ ರಾಯಚೂರು ಸಿಟಿ ವ್ಯಾಪ್ತಿಯಲ್ಲಿ ವಿಶೇಷ ಅಭಿಯಾನ ನಡೆಸಿ ತೆರಿಗೆ ಸಂಗ್ರಹದಲ್ಲಿ ಪ್ರಗತಿ ತೋರಿದ್ದೇವೆ ಎಂದು ರಾಯಚೂರು ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ ಅವರು ಸಚಿವರಿಗೆ ತಿಳಿಸಿದರು.

ಪೌರಕಾರ್ಮಿಕರ ನೇಮಕಾತಿಗೆ ಕ್ರಮ: ರಾಯಚೂರು ನಗರಸಭೆಯು ಮಹಾನಗರ ಪಾಲಿಕೆಯಾಗಿ ಮೇಲ್ದರ್ಗೇರಿದ ಬಳಿಕ ಹೆಚ್ಚುವರಿ 75 ಪೌರ ಕಾರ್ಮಿಕರ ನೇಮಕಾತಿಯ ಪ್ರಸ್ತಾವಣೆಯ ಬಗ್ಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸಚಿವರ ಗಮನಕ್ಕೆ ತಂದರು. ಸಭೆಯಲ್ಲಿಯೇ, ಬೆಂಗಳೂರಿಗೆ ದೂರವಾಣಿ ಕರೆ ಮಾಡಿದ ಸಚಿವರು, ಪ್ರಸ್ತಾವಣೆಯ ಬಗ್ಗೆ ಕೂಡಲೇ ಗಮನ ಹರಿಸಿ ಹೆಚ್ಚುವರಿ 75 ಪೌರ ಕಾರ್ಮಿಕರ ನೇಮಕಾತಿಯ ಪ್ರಕ್ರಿಯೆಯನ್ನು ಸಂಜೆಯೊಳಗೆ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ಸಿಟಿಯಲ್ಲಿ ಒತ್ತುವರಿ ತಡೆಯಬೇಕು: ರಾಯಚೂರು ಸಿಟಿ ವ್ಯಾಪ್ತಿಯಲ್ಲಿನ ಕೆರೆ ಜಾಗ, ಸ್ಮಶಾನ ಜಾಗ ಸೇರಿದಂತೆ ಯಾವುದೇ ಸಾರ್ವಜನಿಕ ಜಾಗವು, ಯಾವುದೇ ವ್ಯಕ್ತಿಗಳಿಂದ ಅತಿಕ್ರಮಣವಾಗದಂತೆ ನೋಡಿಕೊಳ್ಳಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಚಿವರೊಂದಿಗೆ ಚರ್ಚೆ: ಸದ್ಯ ರಾಯಚೂರಗೆ ಒಟ್ಟು 52 ಎಂಎಲ್‌ಡಿ ಪ್ರಮಾಣದ ನೀರು ಪೂರೈಕೆ–ಯಾಗುತ್ತಿದ್ದು, ಇದು ಸಾಕಾಗುತ್ತಿಲ್ಲ. ರಾಯಚೂರು ಸಿಟಿಗೆ ಹೆಚ್ಚುವರಿಯಾಗಿ 20 ಎಂಎಲ್‌ಡಿಯಷ್ಟು ನೀರು ಬೇಕಿದೆ. 3.20 ಲಕ್ಷ ಜನತೆಗೆ ಅನುಕೂಲವಾಗುವಂತೆ ಸಮರ್ಪಕ ನೀರು ಪೂರೈಕೆಗೆ ಕಾರ್ಯಯೋಜನೆ ರೂಪಿಸಿ ಕಾರ್ಯರೂಪಕ್ಕೆ ತರಬೇಕಿದೆ ಎಂದು ನಗರ ಶಾಸಕರಾದ ಡಾ.ಶಿವರಾಜ ಎಸ್ ಪಾಟೀಲ ಅವರು ಸಚಿವರೊಂದಿಗೆ ಚರ್ಚಿಸಿದರು.

# 5 ವರ್ಷದೊಳಗಿನ ಪ್ರತಿ ಮಗುವಿಗೂ ತಪ್ಪದೇ ಪಲ್ಸ್ ಪೋಲಿಯೋ ಹಾಕಿಸಿ: ಡಿಹೆಚ್‌ಓ ಡಾ.ಯಲ್ಲಾ ರಮೇಶ್ ಬಾಬು ಮನವಿ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಇದೇ ಡಿ.21 ರಂದು ನಡೆಯುವ ಪಲ್ಸ್‌ಪೋಲೀಯೋ ಅಭಿಯಾನದಲ್ಲಿ ಹುಟ್ಟಿನಿಂದ 5 ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ತಪ್ಪದೇ ಹಾಕಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಪೋಷಕರಲ್ಲಿ ಮನವಿ ಮಾಡಿದ್ದಾರೆ.

ಈ ಹಿಂದೆ ಎಷ್ಟು ಬಾರಿ ಹಾಕಿಸಿದ್ದರೂ ಸಹ ತಪ್ಪದೇ ಲಸಿಕೆ ಹಾಕಿಸಬೇಕು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಬಸ್ ನಿಲ್ದಾಣ, ರೈಲು ನಿಲ್ದಾಣ, ಅಂಗನವಾಡಿಗಳಲ್ಲಿ, ಶಾಲೆಗಳಲ್ಲಿ ಹಾಗೂ ಕೊಳಚೆ ಪ್ರದೇಶ ಸೇರಿದಂತೆ ಮುಂತಾದೆಡೆ ತೆರೆಯುವ ಪೋಲಿಯೋ ಬೂತ್‌ಗಳಲ್ಲಿ ತಪ್ಪದೇ ಲಸಿಕೆ ಹಾಕಿಸಬೇಕು. ಜೀವದ ಎರಡು ಹನಿಗಳಿಂದ ಪೋಲಿಯೋ ಪಿಡುಗಿನ ಮೇಲೆ ವಿಜಯ ಸಾಧಿಸುವುದನ್ನು ಮುಂದುವರೆಸೋಣ ಎಂದು ಅವರು ವಿನಂತಿಸಿದ್ದಾರೆ.


ಎರಡು ಹನಿ ಪೋಲಿಯೋ ಲಸಿಕೆ ಹಾಕಿಸಿ ನಿಮ್ಮ ಮಗುವನ್ನು ಪೋಲಿಯೋ ರೋಗದಿಂದ ಜೀವನ ಪೂರ್ತಿ ರಕ್ಷಿಸಿ, ಪೋಲಿಯೋ ಮೇಲಿನ ನಮ್ಮ ಗೆಲುವಿಗೆ ಎರಡು ಹನಿಗಳು ಸಾಕು ಪೋಲಿಯೋ ಕೊನೆಗಾಣಿಸಿ ಪೋಲಿಯೋ ರಹಿತ ವಿಶ್ವದ ಕನಸು ನನಸಾಗಿಸಿ ಎಂದು ಮನವಿ ಮಾಡಿದ್ದಾರೆ.

ಕ್ಷೇತ್ರಮಟ್ಟದಲ್ಲಿ ಎಲ್ಲಾ ಪ್ರದೇಶಗಳಿಗೆ ವೈದ್ಯಾಧಿಕಾರಿಗಳು, ಕ್ಷೇತ್ರ ಮಟ್ಟದ ಅಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಭೇಟಿ ಮಾಡಿ ಸಾರ್ವಜನಿಕರಿಗೆ ಕಾರ್ಯಕ್ರಮದ ಕುರಿತು ಮಾಹಿತಿ ನೀಡಲಿದ್ದು, ಜಿಲ್ಲೆಯ ಎಲ್ಲಾ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ 2 ಹನಿ ಹಾಕಿಸುವಂತೆ ತಿಳಿಸಲಿದ್ದಾರೆ.

ಗಡಿ ಮತ್ತು ವಲಸೆ ಜನಸಂಚಾರ ಪ್ರದೇಶಗಳಲ್ಲಿ ವಿಶೇಷ ಶಿಬಿರಗಳು ರೈಲು ನಿಲ್ದಾಣ, ಬಸ್ ನಿಲ್ದಾಣ, ದೇಗುಲ, ಮೇಳ, ಗಡಿಭಾಗಗಳಲ್ಲಿ ಲಸಿಕಾಕರಣ ಕುರಿತು ಮಾಹಿತಿ ನೀಡಲು ಇಂದಿನಿಂದಲೇ ಕ್ರಮವಹಿಸಲಾಗುತ್ತಿದೆ. ಟಿವಿ, ರೇಡಿಯೋ, ಜಾಗೃತಿ ಜಾಥಾ, ಪೋಸ್ಟರ್‌ಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಎಲ್ಲ ತಾಲೂಕಿನ ಎಲ್ಲ ವಸತಿ ಪ್ರದೇಶಗಳು, ವಲಸೆ ಪ್ರದೇಶಗಳು, ಕಟ್ಟಡ ನಿರ್ಮಾಣ ಪ್ರದೇಶಗಳು, ಇಟ್ಟಿಗೆ ಬಟ್ಟಿ, ಕುರಿಗಾಯಿಗಳು ತಂಗಿರುವ ಸ್ಥಳಗಳು, ಕೊಳಚೆ ಪ್ರದೇಶಗಳು ತೋಟದ ಮನೆ, ದೊಡ್ಡಿ, ಹಟ್ಟಿ, ಕ್ಯಾಂಪ್‌ಗಳು, ನಗರಗಳಲ್ಲಿಯ ಅಪಾರ್ಟ್ಮೆಂಟ್‌ಗಳು ಸೇರಿದಂತೆ ಎಲ್ಲ ಸ್ಥಳಗಳಲ್ಲಿಯ ಮಕ್ಕಳ ಸಂಖ್ಯೆಯನ್ನು ಪಟ್ಟಿ ಮಾಡಿಕೊಳ್ಳಲಾಗಿದ್ದು, ಈ ಹಿಂದೆ ಪೋಲಿಯೋ ಹನಿ ಹಾಕಿಸಿದ್ದರೂ ಸಹ ಪಾಲಕರು ತಮ್ಮ ಮಕ್ಕಳಿಗೆ ತಪ್ಪದೇ ಎರಡು ಹನಿ ಪೋಲಿಯೋ ದ್ರಾವಣ ಹಾಕಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯನ್ನು ರಕ್ಷಿಸಿದ ಪತ್ರಕರ್ತ ವಿದ್ಯಾರ್ಥಿಗಳು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ : ಕುಟುಂಬ ಕಲಹದಿಂದ ಬೇಸತ್ತ ಬೆಸ್ಟ್ ಶಾಲೆಯಲ್ಲಿ ಕೆಲಸ ಮಾಡುವ ಮಹಿಳಾ ಸಿಬ್ಬಂದಿ ಇಂದು ಬುಧವಾರ ಬೆಳ್ಳಂಬೆಳಿಗ್ಗೆ ನಗರದ ಹೊಸಪೇಟೆ ರಸ್ತೆಯ ಎಚ್‌ಎಲ್‌ಸಿ ಕಾಲುವೆಯಲ್ಲಿ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ ಸದರಿ ಮಹಿಳೆಯನ್ನು ಪತ್ರಕರ್ತ, ವಿದ್ಯಾರ್ಥಿಗಳು ರಕ್ಷಣೆ ಮಾಡಿದ್ದಾರೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಆವರಣದಲ್ಲಿ ಪತ್ರಕರ್ತ ಜಂಬುನಾಥ ಹಾಗೂ ವಿದ್ಯಾರ್ಥಿಗಳು ವಾಯು ವಿಹಾರದಲ್ಲಿ ತೆ–ೂಡಗಿದ್ದ ಸಂದರ್ಭದಲ್ಲಿ ಎಚ್–ಎಲ್‌ಸಿ ಕಾಲುವೆಯಲ್ಲಿ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯನ್ನು ರಕ್ಷಣೆ ಮಾಡಿದ್ದಾರೆ. ನಂತರ ಮಹಿಳೆಯನ್ನು ರಸಿದಾಗ ತಾನು ಬೆಸ್ಟ್ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ವಿಚಾರಣೆ ಮಾಡಿದ ಸದರಿ ಮಹಿಳೆಯ ಕುಟುಂಬ ಬೆಸ್ಟ್ ಶಾಲೆಯ ಅವರಣದಲ್ಲಿರುವ ಆಶ್ರಯ ಒಂದರಲ್ಲಿ ಇದ್ದಾರೆ ಎಂದು ತಿಳಿದು ಬಂದಿದೆ.

ಮಂಗಳವಾರ ರಾತ್ರಿ ಪತಿ–ಪತ್ನಿ ಗಲಾಟೆ ಮಾಡಿಕೊಂಡು ಜೀವನದ ಮೇಲೆ ಬೇಜಾರು ಮಾಡಿಕೊಂಡು ಕಾಲುವೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧ–ರಿಸಿದ್ದೆ ಎಂದು ಆ ಮಹಿಳೆ ತಿಳಿಸಿದ್ದಾರೆ. ಈ ವಿಷಯವನ್ನು ಪತ್ರಕರ್ತ ಜಂಬುನಾಥ ಫೋನ್ ಮುಖಾಂತರ ಕರೆ ಮಾಡಿ ಬೆಸ್ಟ್ ಶಾಲೆಯ ಸಿಬ್ಬಂದಿಗೆ ತಿಳಿಸಿದ್ದಾರೆ. ಬೆಸ್ಟ್ ಶಾಲೆಯ ಸಿಬ್ಬಂದಿ ಎಚ್‌ಎಲ್‌ಸಿ ಕಾಲುವೆ ಹತ್ತಿರ ಬಂದು ಆ ಮಹಿಳೆಯನ್ನು ಶಾಲೆಗೆ ಕರೆದುಕೊಂಡು ಹೋಗಿದ್ದಾರೆ.

# ಮಹಿಳೆಯರ ಸಾಧನೆ ಅವಿಸ್ಮರಣೀಯ : ಶಾಸಕ ವಜ್ಜಲ್



ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರ.ಡಿ.3:ಮಹಿಳೆ ಜೀವನದಲ್ಲಿ ಹಲವು ಪಾತ್ರಗಳನ್ನು ನಿಭಾಯಿಸುವ ಮೂಲಕ ಕುಟುಂಬದ ಜವಬ್ದಾರಿ ಹೊತ್ತು ಸಂಸಾರ ನಿರ್ವಹಣೆಯಲ್ಲಿ ಅತಿಮುಖ್ಯ ಪಾತ್ರ ವಹಿಸುತ್ತಾಳೆ ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.

ಸ್ಥಳೀಯ ಆರ್ ಎಂ ಎಸ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ, ನೂತನ ಗಾರ್ಮೆಂಟ್ಸ ಸ್ಥಾಪನೆಗೆ ಚಾಲನೆ ಹಾಗು ಹೊಲಿಗೆ ಮತ್ತು ಬ್ಯೂಟಿಷಿಯನ್ ಕಲಿಕಾರ್ಥಿಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಥೆಯ ಮುಖ್ಯಸ್ಥೆ ಹಾಗೂ ತರಬೇತಿದಾರರಾದ ಪವಿತ್ರ ಹೂಗಾರ ಅವರು 120 ಮಹಿಳೆಯರಿಗೆ ತರಬೇತಿ ನೀಡಿ ಉದ್ಯೋಗ ಅವಕಾಶ ಕಲ್ಪಿಸುವ ಕಾರ್ಯ ಶ್ಲಾಘನೀಯವಾಗಿದ್ದು ಇಂತಹ ಕೆಲಸಕ್ಕೆ ಸದಾ ನಮ್ಮ ಬೆಂಬಲ ಇರುತ್ತದೆ ಎಂದ ಅವರು, ಚುನಾವಣೆ ಸಂದರ್ಭದಲ್ಲಿ ನಾನೇ ಪ್ರಚಾರ ಭಾಷಣದಲ್ಲಿ ಮಾತನಾಡಿದ್ದೆ, ಮಹಿಳೆಯರಿಗೆ ಸ್ವಂತ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಕನಿಷ್ಠ 2 ಸಾವಿರ ಮಹಿಳೆಯರ ಉದ್ಯೋಗ ಸೃಷ್ಟಿಸಲು ಗಾರ್ಮೆಂಟ ಮಾಡುವದಾಗಿ ಹೇಳಿದ್ದೆ ಆದರೆ ನಮ್ಮ ತಾಲೂಕಿನ ಮಹಿಳೆಯರಿಗೆ ಅನುಕೂಲ ಆಗುವ ಉದ್ಯೋಗ ಅವಕಾಶ ದೊರೆಯುವಂತಹ ಕೆಲಸ ಮಾಡಿದ ಪವಿತ್ರ ಹೂಗಾರ ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ಮಹಿಳೆಯರಿಗೆ ತರಬೇತಿ ನೀಡಿ ಸ್ವಾವಲಂಭಿ ಬದುಕು ಸಾಗಿಸಲು ದಾರಿದೀಪವಾಗಲಿ ಎಂದ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದ ಮಹಿಳೆ ಪುರುಷರಿಗೆ ಸಮಾನವಾಗಿ ಉನ್ನತ ಹುದ್ದೆ ಹಾಗೂ ಪದವಿಯನ್ನು ಪಡೆದು ಸಮರ್ಥವಾಗಿ ನಿಭಾಯಿಸಿ ಪುರುಷ ಪ್ರಧಾನ ಸಮಾಜದಲ್ಲಿ ಸಮಾನತೆ ಸಾರಿದ ಮಹಿಳೆಯರು ಮುಂದಿನ ದಿನಗಳಲ್ಲಿ 33 ಪರ್ಸೆಂಟ ಮೀಸಲಾತಿ ಜಾರಿಯಾದರೆ ಮಹಿಳೆಯರಿಗೆ ಅಧಿಕಾರ ಅಡುಗೆ ಮನೆಗೆ ಹುಡುಕಿಕೊಂಡು ಬರಲಿದೆ ಎಂದರು.

ಈ ಸಂದರ್ಭದಲ್ಲಿ ದಿವ್ಯ ಸಾನಿಧ್ಯವಹಿಸಿದ್ದ ಮುರುಘರಾಜೇಂದ್ರ ಸ್ವಾಮೀಜಿಗಳು ಸಿದ್ದರಾಮೇಶ್ವರ ಗುರುಮಠ ಯರಡೋಣಿ, ಹಾಗು ಸಿದ್ದಲಿಂಗ ಮಹಾಸ್ವಾಮಿಗಳು ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಶಾಖಾಮಠ ಲಿಂಗಸಗೂರ ಹಾಗು ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ ಬಯ್ಯಾಪೂರ, ಡಾ.ರುದ್ರಗೌಡ ಪಾಟೀಲ, ಎಂ.ಪಿ ಸದಾನಂದ ನಿರ್ದೇಶಕರು ಜನಶಿಕ್ಷಣ ಸಂಸ್ಥೆ ರಾಯಚೂರ, ಮಾಜಿ ಪುರಸಭೆ ಅಧ್ಯಕ್ಷೆ ಸುನಿತಾ ಪರಶುರಾಮ ಕೆಂಭಾವಿ, ಸಂಗಮೇಶ ವಸ್ತ್ರದ, ಪವಿತ್ರ ಹೂಗಾರ ಕಾರ್ಯಕ್ರಮ ಸಂಯೋಜಕರು, ಸೇರಿದಂತೆ ಅನೇಕ ಗಣ್ಯರು ಹಾಗೂ ಕಲಿಕಾರ್ಥಿಗಳು ಉಪಸ್ಥಿತರಿದ್ದರು.

# ಪ್ರವಾದಿಯವರ 1500 ನೇ ಜನ್ಮ ದಿನಾಚರಣೆಯಂದು ಬಸವಕಲ್ಯಾಣದಲ್ಲಿ ಸೂಫಿ ಸಂತ ಸಮ್ಮೇಳನ ಸೈಯದ್ ಹೈದರ್ ವಾಲಿ ಅಲ್ಲಾ ಸಜ್ಜದಾ ನಾಶಿನ್ ಭಾಗವಹಿಸಲು ಮನವಿ

ಮಲ್ಲಮ್ಮ ನುಡಿ ವಾರ್ತೆಬೀದರ್,:

ಮಹಾರಾಷ್ಟ್ರದ ನೀಲಂಗಾದ ದರ್ಗಾ ಹಜರತ್‌ಹೈದರ್ ವಾಲಿ ಅಲ್ಲಾ ಸಜ್ಜದಾ ನಾಶಿನ್ ಅಲಿಯಾಸ್ ದಾದಾಪೀರ್ ರೆಹಮತುಲ್ಲಾ ಅಲೈಹಿ,ದರ್ಗಾ ಹಜರತ್ ಹೈದರ್ ವಾಲಿ ಅಲ್ಲಾ ಸಜ್ಜದಾ ನಾಶಿನ್ ಅವರು ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆ ಮಾಡಿದ್ದು, ಕರ್ನಾಟಕದ ಬೀದರ್‌ನ ಬಸವಕಲ್ಯಾಣ ಶರೀಫ್‌ನಲ್ಲಿ ಪ್ರವಾದಿಯವರ 1500 ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಡಿಸೆಂಬರ್ 7, 2025 ರಂದು ಸೂಫಿ ಸಂತ ಸಮ್ಮೇಳನವನ್ನು ದೊಡ್ಡ ಪ್ರಮಾಣದಲ್ಲಿ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈ1500 ನೇ ವಾರ್ಷಿಕೋತ್ಸವ ಆಚರಣೆಯನ್ನು ಗುಲ್ಬರ್ಗಾ ಶರೀಫ್, ರಾಯಚೂರು, ಹುಬ್ಬಳ್ಳಿಮತ್ತು ಕೊಪ್ಪಳದಂತಹ ನಗರಗಳಲ್ಲಿ ಈ ಹಿಂದೆ ಆಚರಿಸಲಾಗಿತ್ತು. ಈ ಬಾರಿ ಈ ಆಚರಣೆಯನ್ನು ಬಸವಕಲ್ಯಾಣದಲ್ಲಿ ನಡೆಸಲಾಗುವುದು. ಈ ಭವ್ಯ ಆಚರಣೆಯಲ್ಲಿ ಎಲ್ಲಾ ಚಿಂತನಾ ಶಾಲೆಗಳ ನಾಯಕರು ಭಾಗವಹಿಸುತ್ತಿದ್ದಾರೆ ಎಂದು ಶ್ರೀ ಹೈದರ್ ವಲಿಯುಲ್ಲಾ ಸಜ್ಜದಾ ನಾಶಿನ್ ತಿಳಿಸಿದ್ದಾರೆ.

ಮಶಾಖೀನ್, ಸಜ್ಜದ್ಗನ್, ಉಲೇಮಾ ಮತ್ತು ಇತರ ವ್ಯಕ್ತಿಗಳು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಉಲೇಮಾಗಳಲ್ಲಿ, ಅಂತರರಾಷ್ಟ್ರೀಯ ಖ್ಯಾತಿಯ ವ್ಯಕ್ತಿ ಮೌಲಾನಾಮುಹಮ್ಮದ್ ಒಬೈದುಲ್ಲಾ ಖಾನ್ ಅಜ್ಮಿ, ರಾಜ್ಯಸಭೆಯ ಮಾಜಿ ಸದಸ್ಯ ಮತ್ತು ಅಖಿಲ ಭಾರತಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಉಪಾಧ್ಯಕ್ಷ, ಮಂಡಳಿಯ ಸದಸ್ಯ ಮೌಲಾನಾ ಅಬುತಾಲಿಬ್ ರಹಮಾನಿ ಭಾಗವಹಿಸಲಿದ್ದಾರೆ. ಈ ಆಚರಣೆಯ ಸಂದರ್ಭದಲ್ಲಿ, ಹಜರತ್ ಹಫೀಜ್ ಅಲಿಮುಹಮ್ಮದ್ ಮುಹಮ್ಮದ್ ಅಲ್ ಹುಸೈನಿ, ಬರ್ಗಾ ಹಜರತ್ ಖ್ವಾಜಾ ಬಂದಾ ನವಾಜ್ ಗೆಸುದ್ರಝ್‌ರಹಮತುಲ್ಲಾ ಅಲೈಹಿಯ ಸಜ್ಜದಾ ನಾಶಿನ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲಾಗುವುದು.



ಲಾತೂರ್, ಗುಲ್ಬರ್ಗಾ, ಬೀದರ್ ಮತ್ತು ಬಸವಕಲ್ಯಾಣದ ಸ್ಥಳೀಯ ಮಶಾಖೀನ್ ಮತ್ತುಸಜ್ಜದ್ಗನ್ ಈ ಆಚರಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ರಾಜಕೀಯ ನಾಯಕರು ಮತ್ತು ಸಚಿವರಲ್ಲಿ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ್ ಜಾರಕಿ ಹೋಳಿ, ಬೀದರ್‌ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಈಶ್ವರ್ ಖಂಡ್ರೆ, ಮಾಜಿ ಸಚಿವ ಶ್ರೀ ರಾಜಶೇಖರ್‌ಪಾಟೀಲ್ ಹುಮ್ನಾಬಾದ್, ಮಾಜಿ ಎಂಎಲ್ಸಿ ಶ್ರೀ ವಿಜಯ್ ಸಿಂಗ್, ಮಾಜಿ ಎಂಎಲ್ಸಿ ಶ್ರೀಅರವಿಂದ್ ಕುಮಾರ್ ಅರ್ಲಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಶ್ರೀ ಸೈಯದ್ ನಾಸಿರ್ ಹುಸೇನ್, ಕಾಶ್ಮೀರ, ರಾಜ್ಯಸಭೆ, ಉತ್ತರ ಪ್ರದೇಶದ ಉಸ್ತುವಾರಿಸಂಸದ ಶ್ರೀ ಇಮ್ರಾನ್ ಮಸೂದ್, ಕರ್ನಾಟಕ ಸರ್ಕಾರದ ಮುಖ್ಯ ಸಚೇತಕ ಶ್ರೀ ಸಲೀಂ ಅಹ್ಮದ್‌ಎಂಎಲ್ಸಿ, ಕರ್ನಾಟಕದ ಪುರಸಭೆ ವ್ಯವಹಾರಗಳು ಮತ್ತು ಹಜ್ ಸಚಿವ ಶ್ರೀ ರಹೀಮ್ ಖಾನ್, ತೆಲಂಗಾಣದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಶ್ರೀ ಮೊಹಮ್ಮದ್ ಅಜರುದ್ದೀನ್(ಹೈದರಾಬಾದ್) ಮತ್ತು ಕೆಕೆಆರ್ಡಿಬಿ ಅಧ್ಯಕ್ಷರು ಮತ್ತು ಶಾಸಕ ಡಾ. ಅಜಯ್ ಸಿಂಗ್‌ಸೇರಿದ್ದಾರೆ.

ಮಿಲಾದ್–ಉನ್–ನಬಿ (ಸ) ಅವರ 1500 ನೇ ಭವ್ಯ ವಾರ್ಷಿಕೋತ್ಸವದ ಸಂದರ್ಭದಲ್ಲಿನಡೆಯಲಿರುವ ಸೂಫಿ ಸಂತ ಸಮ್ಮೇಳನದಲ್ಲಿ ಭಾಗವಹಿಸಿ ಸರ್ವಶಕ್ತನ ಪ್ರತಿಫಲವನ್ನು ಪಡೆಯುವಂತೆ ಶ್ರೀ ಹೈದರ್ವಲಿಲ್ಲಾ ಸಜ್ಜದಾ ನಾಶಿನ್ ಅವರು ಎಲ್ಲಾ ಜನರನ್ನುವಿನಂತಿಸಿದ್ದಾರೆ.

# ಪ್ರತಿಭಾ ಕಾರಂಜಿಯಿಂದ ಬೌದ್ಧಿಕ ಸಾಮರ್ಥ್ಯ ವೃದ್ಧಿ : ಹನುಮಂತಪ್ಪ ಹೆಚ್

ಮಲ್ಲಮ್ಮ ನುಡಿ ವಾರ್ತೆಕೊಪ್ಪಳ :

ಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲು ಪ್ರತಿಭಾ ಕಾರಂಜಿ ಸಹಕಾರಿಯಾಗಿದ್ದು, ಹೆಚ್ಚಿನ ಮಟ್ಟದಲ್ಲಿ ಮಕ್ಕಳು ತೊಡಗಿಸಿಕೊಳ್ಳುವಂತೆ ಶಿಕ್ಷಕರು ಪ್ರೇರೇಪಿಸಬೇಕು ಎಂದು ಕೊಪ್ಪಳ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಹೆಚ್. ಹೇಳಿದರು. ತಾಲೂಕಿನ ಹಿರೇಬಗನಾಳ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಪಾಠವನ್ನು ಚೆನ್ನಾಗಿ ಕಲಿಯುವುದಲ್ಲದೆ ಮನನ ಮಾಡಿಕೊಂಡಿದ್ದನ್ನು ಸಹಪಾಠಿಗಳ ಎದುರು ಪ್ರದರ್ಶನ ಮಾಡುವುದು ಅನೇಕ ಗುಣಗಳ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುತ್ತದೆ. ಮಕ್ಕಳ ಪ್ರತಿಭಾನ್ವೇಷಣೆ ನಾಯಕತ್ವ ಗುಣ ಬೆಳವಣಿಗೆ, ಸಂಸ್ಕೃತಿ ಭಾರತೀಯ ಪರಂಪರೆ, ಜತೆಗೆ ಪಠ್ಯದಲ್ಲಿರುವ ವಿಚಾರಗಳನ್ನು ಆಳವಾಗಿ ಅಧ್ಯಯನ ಮಾಡಿ ಕಲಿಯಲು ಪ್ರತಿಭಾ ಕಾರಂಜಿ ಅತ್ಯಂತ ಸಹಕಾರಿಯಾಗಿದೆ ಎಂದರು.

ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಮಾಂತರ ಪ್ರದೇಶದ ಮಕ್ಕಳ ಎಲ್ಲಾರೀತಿಯ ಬೆಳವಣಿಗೆಗೆ ಕಾರ್ಯಕ್ರಮ ಸಹಕಾರಿಯಾಗಿದೆ. ಇದು ಮಕ್ಕಳನ್ನು ಗ್ರಾಮಮಟ್ಟದಿಂದ ರಾಜ್ಯಮಟ್ಟಕ್ಕೆ ಕೊಂಡೊಯ್ಯುವುದಲ್ಲದೆ ಬೌದ್ಧಿಕ ಬೆಳವಣಿಗೆಗೆ ಕಾರಣವಾಗಿದೆ, ಎಂದರು.

ರಾಜ್ಯ ಸರಕಾರ ಮೊದಲ ಬಾರಿಗೆ 2004ರಲ್ಲಿ ಜಾರಿಗೆ ತಂದಿದ್ದು, ಅಂದಿನಿಂದ ಕಾರ್ಯಕ್ರಮ ನಿರಂತವಾಗಿ ನಡೆದುಕೊಂಡುಬಂದಿದೆ. ಮಕ್ಕಳನ್ನು ಶಾಲೆಗೆ ಆಕರ್ಷಿಸಲು ಇರುವ ಪ್ರಮುಖ ಎರಡು ವಿಶಿಷ್ಟ ಕಾರ್ಯಕ್ರಮಗಳಲ್ಲಿ ಕ್ರಿಡೆ ಮತ್ತು ಪ್ರತಿಭಾ ಕಾರಂಜಿ ಪ್ರಮುಖವಾಗಿವೆ ಎಂದು ಕೊಪ್ಪಳ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಹೆಚ್. ತಿಳಿಸಿದರು.



ಕಾರ್ಯಕ್ರಮದಲ್ಲಿ ಕ್ಷೇತ್ರಸಮನ್ವಯಾಧಿಕಾರಿ ಮೆಹಬೂಬ ಹುಸೇನ್, ಅಕ್ಷರದಾಸೋಹ ಬಿಸಿಯೂಟ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಗುಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಶರಣಬಸನಗೌಡ ಪಾಟೀಲ್, ತಾಲ್ಲೂಕು ಅಧ್ಯಕ್ಷ ಹೊಳಬಸಯ್ಯ ಕೆ., ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಕೋಮಲಾಪುರ, ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಾರುತಿ ಮ್ಯಾಗಳಮನಿ ಮೊದಲಾದವರು ಮಾತನಾಡಿದರು.

ವೇದಿಕೆಯಲ್ಲಿ ಶಿಕ್ಷಣ ಸಂಯೋಜಕರಾದ ವೀರೇಶ ಅರಳಿಕಟ್ಟಿ, ಮಹಾದೇವಪ್ಪ ಗುಳೇದ್, ಕುಣಿಕೇರಿ ಕ್ಲಸ್ಟರ್ ಮಟ್ಟದ ಸಿಆರ್ ಪಿ ಹನುಮಂತಪ್ಪಕೆ.ಆರ್., ಎಸ್ ಡಿಎಂಸಿ ಅಧ್ಯಕ್ಷ ಮಾರುತಿ ಪುಟಗಿ, ಉಪಾಧ್ಯಕ್ಷೆ ವಿಜಯಲಕ್ಷ್ಮಿ ಜಿ.ಹಳ್ಳಿಕೇರಿ, ಗ್ರಾ.ಪಂ.ಸದಸ್ಯರಾದ ಗವಿಸಿದ್ದಪ್ಪ ಸರದಾರ, ಯಲ್ಲಮ್ಮ ದೇವರಗುಡಿ, ಧರ್ಮಣ್ಣ ದೇವರಮನಿ, ಲಕ್ಷ್ಮೀದೇವಿ ಹೆಚ್.ಉಪ್ಪಾರ, ಬದ್ದೆಪ್ಪ ಎಸ್.ಲಮಾಣಿ, ನೀಲಮ್ಮ ಫಕೀರಪ್ಪ ಕೊರಗಲ್, ಮುಖಂಡರಾದ ದೊಡ್ಡ ಅಮರಪ್ಪ ಡಾಣಿ, ಮರಿತಿಮ್ಮಪ್ಪ ಪಲ್ಲೇದ್, ರವಿಚಂದ್ರ ದೇವರಮನಿ, ಕರಿಯಪ್ಪ ಗೂಗಿನಮರಿ, ಮಂಜುನಾಥ ಪೂಜಾರ, ಯುವರಾಜ ಹೊಸಮನಿ, ಗವಿಸಿದ್ದಪ್ಪ ಬೋರಿನ್, ಹನುಮಂತಪ್ಪ ಮೇಟಿ, ದೇವಪ್ಪ ಊರಾಳ, ಅಂದಪ್ಪ ಗಡ್ಡಿ, ಫಕೀರಪ್ಪ, ನಾಗರಾಜ ಪೂಜಾರ, ನಾಗಪ್ಪ ಗೂಗಿನಮರಿ, ದೇವಪ್ಪ ಮೇಟಿ, ಮುದಿಯಪ್ಪ ದೇವರಮನಿ, ಬಸವರಾಜ ಪೂಜಾರ, ಫಕೀರಪ್ಪ ಗಡ್ಡಿ, ಹಳ್ಳಿ ಹನುಮಪ್ಪ ಕಡ್ಲಿ, ರಾಮನಲಿಂಗನಗೌಡ್ರು ಹೊಸಮನಿ, ಬಸವರಾಜ ಪೂಜಾರ, ಮಂಜುನಾಥ ದೇವರಮನಿ, ಹನುಮಪ್ಪ ಮೇಟಿ ಇದ್ದರು.

ಕ್ಲಸ್ಟರ್ ವ್ಯಾಪ್ತಿಯ ಮುಖ್ಯಶಿಕ್ಷಕರು, ಸಹಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು. ವಿವಿಧ ಶಾಲಾ ವಿದ್ಯಾರ್ಥಿಗಳು ಕಂಠಪಾಠ, ಧಾರ್ಮಿಕಪಠಣ, ದೇಶಭಕ್ತಿಗೀತೆ, ಛದ್ಮವೇಷ, ಅಭಿನಯಗೀತೆ, ಚಿತ್ರಕಲೆ, ಕ್ಲೇಮಾಡೆಲ್ , ಪ್ರಬಂಧ ಸ್ಪರ್ಧೆ, ಕಥೆ ಹೇಳುವುದು, ಜಾನಪದ ನೃತ್ಯ, ರಸಪ್ರಶ್ನೆ, ಕವನ ವಾಚನ, ಕವ್ವಾಲಿ, ಗಜಲ್ , ಭಾಷಣ, ಆಶುಭಾಷಣ ಸೇರಿದಂತೆ ಇನ್ನಿತರ ಸ್ಪರ್ಧೆಗಳಲ್ಲಿ ಪಾಲ್ಗೊಂಡು ತಮ್ಮ ಪ್ರದರ್ಶನ ನೀಡಿ ವಿಜೇತರಾಗಿ ಬಹುಮಾನ ಪಡೆದರು.

# ವೃತ್ತಿರಂಗಭೂಮಿ ಉನ್ನತ ಸ್ಥಿತಿಗೆ ಬರಬೇಕು: ರಾಜಣ್ಣ ಜೇವರ್ಗಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯ ಕುಕುನೂರು ಪಟ್ಟಣದ ಪೊಲೀಸ್ ಠಾಣೆ ರಸ್ತೆಯಲ್ಲಿ ಆಯೋಜಿಸಿರುವ ಬಿಎರ್ ನಾಟಕ ಸಂಘ ಗುಬ್ಬಿ ಅವರ ರಂಗಭೂಮಿ ವೇದಿಕೆಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ನಾಟಕ ರಚನೆಕಾರ, ನಿರ್ದೇಶಕ, ಕಲಾವಿದ ರಾಜಣ್ಣ ಜೇವರ್ಗಿ ಮಾತನಾಡುತ್ತಾ ಪ್ರತಿವರ್ಷದಂತೆ ಇವತ್ತು ಸಹ ಶ್ರೀ ಗುದ್ನೇಪ್ಪ ನ ಜಾತ್ರೆಯ ಅಂಗವಾಗಿ ನಾಟಕ ಪ್ರದರ್ಶನ ಆಯೋಜಿಸಲಾಗಿದ್ದು ಪೃಥ್ವಿರಂಗಭೂಮಿ ಏಳಿಗೆಗೆ ವರ್ಷಗಳ ಸೇವೆ ಸಲ್ಲಿಸಿರುವ ನಾಟಕ ಕಂಪನಿಗಳಿಗೆ 10 ಲಕ್ಷ, ಹತ್ತರಿಂದ ಹದಿನೈದು ವರ್ಷಗಳವರೆಗೆ ಸೇವೆ ಸಲ್ಲಿಸಿರುವ ಕಂಪನಿಗೆ 7 ರಿಂದ 8 ಲಕ್ಷ ಹಾಗೂ ನೂತನ ನಾಟಕ ಕಂಪನಿಗಳಿಗೆ ಮೂರರಿಂದ ನಾಲ್ಕು ಲಕ್ಷರೂಪಾಯಿಗಳನ್ನು ಪ್ರೋತ್ಸಾಹಕ್ಕಾಗಿ ನೀಡುತ್ತಿದ್ದು ಸರ್ಕಾರದಿಂದ ವೃತ್ತಿ ರಂಗಭೂಮಿ ಅಭಿವೃದ್ಧಿಗಾಗಿ ಎರಡು ಕೋಟಿ ರೂಪಾಯಿಗಳನ್ನು ಮೀಸಲಿರಿಸಿದೆ ಎಂದ ಹೇಳಿದರು

ಬಿಎರ್ ನಾಟಕ ಸಂಘ ಗುಬ್ಬಿ ಅವರಿಂದ ಕುಕನೂರು ಪಟ್ಟಣದಲ್ಲಿ ಸಮೃದ್ಧಿಯಾಗಿಯೇ ಸಾಗುತ್ತಿದೆ

ಕಲಾವಿದ ಪ್ರಕಾಶ್ ಮೂಡಿಗೆರೆ ಮಾತನಾಡುತ್ತಾ ಮೊಬೈಲ್ ಹಾಗೂ ಯೌಟ್ಯೂಬ್ ಹಾವಳಿಯಿಂದ ಬಹುತೇಕ ಅಡೆತಡೆ ಉಂಟಾಗುತ್ತಿದೆ ಎಂದು ಹಲವರು ಹೇಳುತ್ತಿದ್ದು ಅದೆಲ್ಲ ಸುಳ್ಳು ಎಂಬಂತೆ ನಮ್ಮ ನಾಟಕ ಪ್ರದರ್ಶನವಾಗುತ್ತಿದ್ದು ಉದಾಹರಣೆಗೆ ವಿದೇಶದಲ್ಲೂ ಸಹ ನಾಟಕಗಳಿಗೆ ಮುಂಗಡ ಬುಕಿಂಗ್ ಆಯೋಜಿಸಲಾಗುತ್ತಿದ್ದು ಮುಂದುವರಿದ ದೇಶಗಳು ಸಹ ನಾಟಕಗಳಿಗೆ ಫಿದಾ ಆಗುತ್ತಿದ್ದಾರೆ



ಹೃತಿಕ್ ರಂಗಭೂಮಿ, ಆಧುನಿಕ ರಂಗಭೂಮಿ ಸೇರಿದಂತೆ ಹಲವಾರು ಪ್ರಭೇದದ ರಂಗಭೂಮಿ ಕಲಾವಿದರು ಸಹಕರಿಸಬೇಕು ಎಂದರು.

ವಿಶೇಷವಾಗಿ ಉತ್ತರ ಕರ್ನಾಟಕವು ವೃತ್ತಿ ರಂಗಾಭೂಮಿಗೆ ವಿಶೇಷ ನೆಲೆಯನ್ನು ನೀಡಿದ್ದು ಇಲ್ಲಿ 27ಕ್ಕೂ ಹೆಚ್ಚು ಕಂಪನಿಗಳು ಆಶ್ರಯವನ್ನು ಪಡೆದಿವೆ. ಹಣಕೊಟ್ಟು ನೋಡುವ ಪ್ರೇಕ್ಷಕನಿಗೆ ಮನತಣಿಸುವ, ಉತ್ತಮ ಸಂದೇಶವನ್ನು ಹೊಂದಿರುವ, ಕುಟುಂಬ ಸಹಿತ ವೀಕ್ಷಿಸುವಂತಹ ನಾಟಕಗಳ ಪ್ರದರ್ಶನವಾದಲ್ಲಿ ಖಂಡಿತವಾಗಿ ಪ್ರೇಕ್ಷಕರಿಂದ ಪ್ರೋತ್ಸಾಹ ದೊ–ರೆಯುತ್ತದೆ. ಸರ್ಕಾರವು ಸಹ ರಂಗಭೂಮಿ ಉಳಿವಿಗಾಗಿ ಸಾಕಷ್ಟು ಯೋಜನೆಗಳನ್ನು ತಂದಿದ್ದು 25 ಆಯೋಜಿಸಿರುವ ಪಟ್ಟಿ ಅಂಗಡಿ ಪಾರು ಎಂಬ ನಾಟಕ ಯಶಸ್ವಿಯಾಗಿ ಪ್ರದರ್ಶನವಾಗುತ್ತಿದ್ದು ಈ ನಾಟಕದಲ್ಲಿ ಅಶ್ಲೀಲ ಸಂಭಾಷಣೆ ಹಾಗೂ ಅಶ್ಲೀಲ ದೃಶ್ಯಗಳಿಗೆ ಆಸ್ಪದವಿಲ್ಲ ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುತ್ತಾ ಕೇವಲ ಪಡ್ಡೆ ಹುಡುಗರನ್ನು ಕೇಂದ್ರೀಕರಿಸುವ ಬದಲು ಕುಟುಂಬದ ಎಲ್ಲಾ ಸದಸ್ಯರು ಕುಳಿತುಕೊಂಡು ನೋಡುವಂತಹ ನಾಟಕ ಪ್ರದರ್ಶನವಾಗುತ್ತಿದ್ದು ವಿಶೇಷವಾಗಿ ಮಹಿಳಾ ಪ್ರೇಕ್ಷಕ–ರಿಂದ ಉತ್ತಮ ಪ್ರತಿಕ್ರಿಯೆ ದೊರೆ–ಯುತ್ತಿದೆ. ರಂಗಭೂಮಿ ಕಲಾವಿದರ ಮೇಲೆ ಹಲವಾರು ಆರೋಪಗಳು ಬರುತ್ತಿದ್ದು ಪವಿತ್ರತ ಹೊಂದಿದ ಕಲಾವಿದನ ಜೀವನ ಯಾವಾಗಲೂ ಎಂಬುದನ್ನು ಕಾಣಬಹುದಾಗಿದೆ. ರೀಲ್ ಹಾಗೂ ರಿಯಲ್ಲೂ ತುಂಬಾ ವ್ಯತ್ಯಾಸವಿದ್ದು ರಂಗಭೂಮಿಯಲ್ಲಿ ಆಸ್ವಾದಿಸಬಹುದಾಗಿದೆ ಎಂದು ಹೇಳಿದರು.

ಈ ವೇಳೆಯಲ್ಲಿ ಪ್ರಮುಖರಾದ ವಿನಾಯಕ ಬೆನ್ನಳ್ಳಿ, ಬಿಎರ್ ನಾಟಕ ಸಂಘದ ಮಾಲೀಕರಾದ ಸುಜಾತ ಗುಬ್ಬಿ, ಕಲಾವಿದರಾದ ಮರಿಬಸಪ್ಪ, ಧನರಾಜ್ ಬುಗುಡಿ ಕರ್, ಮಾರುತಿ ಶೆಟ್ಟಿ, ಅನ್ನಪೂರ್ಣ ಧಾರವಾಡ, ನೀಲ ಜೇವರ್ಗಿ, ಕವಿತಾ ವಿಜಯಪುರ, ಶರಣು ಶೆಟ್ಟಿ, ಬಸವರಾಜ, ಅವಿನಾಶ್ ಅಕ್ಕಲಕೋಟೆ, ಪೃಥ್ವಿರಾಜ್ ಬದಾಮಿ, ಸುಭಾಷ್ ಬೆಟಿಗೇರಿ, ಸಿದ್ದರಾಮ ತತ್ರಾಣಿ, ರಘು ಮುಧೋಳ ಹಾಗೂ ಮತ್ತು ಕಡಕೋಳ ಪಾಲ್ಗೊಂಡಿದ್ದರು

## ವಿಕಲಚೇತನರ ದಿನಾಚರಣೆ– ಸಾಧಕರಿಗೆ ಸನ್ಮಾನ



**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**
ಅಂಗವೈಕಲ್ಯ ಶಾಪವೂ ಅಲ್ಲ, ಪಾಪದ ಫಲವೂ ಅಲ್ಲ. ದೈಹಿಕ ನ್ಯೂನತೆಗಿಂತ, ಮನುಷ್ಯನಲ್ಲಿರುವ ಅಮಾನವೀಯ ಹಾಗೂ ಸಂಕುಚಿತ ಮನೋಭಾವವೇ ನಿಜವಾದ ವೈಚಾರಿಕ ಅಂಗವೈಕಲ್ಯವಾಗಿದೆ ಎಂದು ವಿಧಾನಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು.

ನವನಗರದ ಕಲಾಭವನದಲ್ಲಿ ಬುಧವಾರ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಕಾರ್ಯಕ್ರಮದ ಪೂರ್ವದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಪುಟ್ಟರಾಜ ಗವಾಯಿಗಳ ಭಾವಚಿತ್ರದ ಅದ್ದೂರಿ ಮೆರವಣಿಗೆಗೆ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಶಶಿಧರ ಕುರೇರ ಜಂಟಿಯಾಗಿ ಚಾಲನೆ ನೀಡಿದರು. ಮೆರವಣಿಗೆ ಜಿಲ್ಲಾಡಳಿತದಿಂದ ಪ್ರಾರಂಭವಾಗಿ ನಗರದ ನಾನಾ ಕಡೆ ಸಂಚರಿಸಿ ವೇದಿಕೆ ಕಾರ್ಯಕ್ರಮದ ಸ್ಥಳವಾದ ನವನಗರದ ಕಲಾಭವನಕ್ಕೆ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು.**

ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಜಿಲ್ಲೆಯ ವಿಕಲಚೇತನರ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಕ್ಷೇಮಾಭಿವೃದ್ಧಿ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ವಿಕಲಚೇತನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಗವೈಕಲ್ಯ ಹುಟ್ಟಿನಿಂದ, ವೈಜ್ಞಾನಿಕ ಕಾರಣಗಳಿಂದ ಅಥವಾ ಬದುಕಿನಲ್ಲಿ ನಡೆಯುವ ಆಕಸ್ಮಿಕ ಘಟನೆಗಳಿಂದ ಸಂಭವಿಸಿರುತ್ತದೆ. ಆದರೆ ಸಮಾಜ ಇದನ್ನು ಶಾಪದ ದೃಷ್ಟಿಯಲ್ಲಿ ನೋಡುವುದು ಅಥವಾ ಕೀಳಾಗಿ ಕಾಣುವುದು ಸರಿಯಲ್ಲ. ಅಂತಹ ಆಲೋಚನೆಯೇ ಒಂದು ಪಾಪದ ಕೆಲಸವಾಗಿದೆ. ಸೃಷ್ಟಿಯಲ್ಲಿ ಪಶು–ಪಕ್ಷಿ ಪ್ರಾಣಿಗಳಂತೆ ಮನುಷ್ಯನೂ ಒಂದು ಜೀವಿಯಾಗಿದ್ದು, ಮನುಷ್ಯನಿಗೆ ಮಾತ್ರ ವಿಶೇಷವಾದ ವಿಚಾರ ಶಕ್ತಿ ಮತ್ತು ವಿವೇಚನೆಯನ್ನು ನೀಡಿದ್ದಾನೆ. ಪ್ರತಿಯೊಬ್ಬ ವ್ಯಕ್ತಿಗೂ ದೇವರು ಮಾತೃ ಹೃದಯವನ್ನು ಕರುಣಿಸಿದ್ದಾನೆ. ನಾವು ಕಟು ಹೃದಯಿಗಳಾಗದೆ, ಅಂಗವಿಕಲರನ್ನು ಅಂತಃಕರಣದ ದೃಷ್ಟಿಯಿಂದ, ಸಮಾನತೆಯಿಂದ ನೋಡಬೇಕು ಎಂದರು. ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ವಿಕಲಚೇತನರಿಗೆ ಕೇವಲ ಅನುಕಂಪ ತೋರಿದರೆ ಸಾಲದು, ಅವರಿಗೆ ಶಿಕ್ಷಣ, ಉದ್ಯೋಗ ಮತ್ತು ಗೌರವಯುತ ಜೀವನ ಒದಗಿಸುವುದು ಸಮಾಜದ ನೈತಿಕ ಹೊಣೆಗಾರಿಕೆಯಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಸಹಾಯಧನ, ಉದ್ಯೋಗ ತರಬೇತಿ, ಪುನರ್ವಸತಿ ಹಾಗೂ ಮನೋವೈದ್ಯಕೀಯ ಬೆಂಬಲವನ್ನು ಬಲಪಡಿಸಲು ಕ್ರಮ ಕೈಗೊಂಡಿದೆ. ಸರ್ಕಾರಿ ಕಚೇರಿಗಳು, ಶಾಲೆಗಳು, ಸಾರ್ವಜನಿಕ ಸ್ಥಳಗಳು ಮತ್ತು ಸಾರಿಗೆ ವ್ಯವಸ್ಥೆಯಲ್ಲಿ ಸುಲಭ ಪ್ರವೇಶ ವಾತಾವರಣ ನಿರ್ಮಿಸುವುದು ನಮ್ಮ ಆದ್ಯತೆಯಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿಕಲಚೇತನ ಹಾಗೂ ವಿಶೇಷ ಚೇತನ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಪ್ರಭಾಕರ ಕೆ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಗಿರಿಜಾ ಪಾಟೀಲ, ವಿಕಲಚೇತನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಾದ ರಾಜು ತೇರದಾಳ, ಪರಶುರಾಮ ತೆಗ್ಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಡಿ.7ರಂದು ಟಿಇಟಿ ಪರೀಕ್ಷೆ: ಸಂಗಪ್ಪ



**ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ:**
7 ರಂದು ಜಿಲ್ಲಾ ಕೇಂದ್ರದ ಹಳೇ ಬಾಗಲಕೋಟ, ವಿದ್ಯಾಗಿರಿ ಮತ್ತು ನವನಗರ ಸೇರಿ ಒಟ್ಟು 33 ಪರೀಕ್ಷಾ ಕೇಂದ್ರಗಳಲ್ಲಿ ಟಿಇಟಿ ಪರೀಕ್ಷೆಯನ್ನು ಪಾರದರ್ಶಕ ಮತ್ತು ಕಟ್ಟುನಿಟ್ಟಾಗಿ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿ ಕಛೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಟಿಇಟಿ ಪರೀಕ್ಷೆ 2025 ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಟಿಇಟಿ ಪರೀಕ್ಷೆಯ ಪತ್ರಿಕೆ–1 ನ್ನು ಬೆಳಿಗ್ಗೆ 9.30 ರಿಂದ 12 ಗಂಟೆಯವರೆಗೆ ಹಳೇ ಬಾಗಲಕೋಟದ 12 ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಪತ್ರಿಕೆ–2 ಮಧ್ಯಾಹ್ನ 2 ರಿಂದ ಸಂಜೆ 4.30 ರವರೆಗೆ ನಡೆಸಲಾಗುತ್ತಿದ್ದು ಒಟ್ಟು 9075 ಪರೀಕ್ಷಾರ್ಥಿಗಳು ಹಾಜರಾಗಲಿದ್ದಾರೆ ಎಂದರು.

ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ಎ ಅಥವಾ ಬಿ ವೃಂದದ ಅಧಿಕಾರಿಯನ್ನು ಸ್ಥಾನಿಕ ಜಾಗೃತ ಅಧಿಕಾರಿಯಾಗಿ ಹಾಗೂ ತಲಾ 5–6 ಕೇಂದ್ರಕ್ಕೆ ಓರ್ವ ಎ ವೃಂದದ ಜಿಲ್ಲಾ ಮಟ್ಟದ ಅಧಿಕಾರಿಯನ್ನು ವೀಕ್ಷಕರನ್ನಾಗಿ ನೇಮಕ ಮಾಡಿ ನಿಯೋಜಿಸಲಾಗುತ್ತಿದ್ದು, ಎಲ್ಲೂ ಲೋಪದೋಷಗಳು ಉಂಟಾಗದಂತೆ, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮೇಲ್ವಿಚಾರಣೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ಹಂತದ ಅಧಿಕಾರಿಗಳಿಗೆ ಅವರು ಸೂಚಿಸಿದರು. ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರದ ಆವರಣದೊಳಗೆ ಪ್ರವೇಶಿಸುವ ಮೊದಲು ಪ್ರವೇಶ ಪತ್ರದಲ್ಲಿನ ಭಾವಚಿತ್ರದೊಂದಿಗೆ ಮುಖಚಹರೆಯನ್ನು ತಾಳೆ ನೋಡುವುದು ಹಾಗೂ ಫ್ರಿಸ್ಕಿಂಗ್ ಕಾರ್ಯದ ನಂತರವೇ ಪರೀಕ್ಷಾ ಕೇಂದ್ರ ಹಾಗೂ ಕೊಠಡಿಯೊಳಗೆ ಪ್ರವೇಶ ನೀಡತಕ್ಕದ್ದು,


ವಿಶೇಷ ಅಗತ್ಯಯುಳ್ಳ ಅಭ್ಯರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆ ಹಾಗೂ ಅಂಗವಿಕಲತೆಯ ಪ್ರಮಾಣವನ್ನಾಧರಿಸಿ ಪರೀಕ್ಷೆ ಬರೆಯಲು ನಿಯಮಾನುಸಾರ ಹೆಚ್ಚಿನ ಕಾಲಾವಕಾಶವನ್ನು ನೀಡಲು ಮುಖ್ಯ ಅಧೀಕ್ಷಕರು ಕ್ರಮ ಕೈಗೊಳ್ಳಬೇಕು ಸಿ ಸಿ ಕ್ಯಾಮರಾ, ಫ್ರಿಸ್ಕಿಂಗ್ ಹಾಗೂ ಬಾಡಿ ಕ್ಯಾಮರಾ ವ್ಯವಸ್ಥೆಯನ್ನು ಪರೀಕ್ಷಾ ಪ್ರಾಧಿಕಾರ ಮಾಡುತ್ತಿದ್ದು ಸಿಸಿ ಕ್ಯಾಮರಾಗಳಿಗೆ ವೆಬ್‌ಕಾಸ್ಟಿಂಗ್ ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ ಡಿಡಿಪಿಐ ನಿರ್ವಹಿಸಬೇಕು, ಒಟ್ಟಾ–ರೆಯಾಗಿ ಪರೀಕ್ಷಾ ಪೂರ್ವ, ಪರೀಕ್ಷಾ ಅವಧಿ ಹಾಗೂ ಪರೀಕ್ಷಾ ನಂತರದ ಕಾರ್ಯಗಳನ್ನು ಅಚ್ಚುಕಟ್ಟಾಗಿ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಡಿಡಿಪಿಐ ಅಜೀತ್ ಮನ್ನಿಕೇರಿ ಸೇರಿದಂತೆ ಇತರರು ಹಾಜರಿದ್ದರು.

## ಡಿ.6 ಲಿಂ.ಸಿದ್ಧಲಿಂಗ ಸ್ವಾಮೀಜಿ ಪಲ್ಲಕ್ಕಿ ಉತ್ಸವ
# ಶಿರೂರಿನಲ್ಲಿ ಇಂದು ಸಿದ್ದೇಶ್ವರ ಜಾತ್ರೆ

ಮಲ್ಲಮ್ಮನುಡಿವಾರ್ತೆಬಾಗಲಕೋಟೆ: ಶಿರೂರ ಪಟ್ಟಣದ ಆರಾಧ್ಯದೈವ ಶ್ರೀ ಸಿದ್ದೇಶ್ವರ ದೇವರ ಜಾತ್ರೆ ಡಿ.4 ಗುರುವಾರ ನಡೆಯಲಿದ್ದು, ಡಿ.6 ರಂದು ಲಿಂ.ಸಿದ್ಧಲಿಂಗ ಸ್ವಾಮೀಜಿಗಳ 55 ನೇಯ ಪುಣ್ಯಸ್ಮರಣೆ, ಪಲ್ಲಕ್ಕಿ ಉತ್ಸವ ಜರುಗಲಿವೆ.

ಸ್ಥಳೀಯ ಶಿವಯೋಗಾಶ್ರಮದ ಸಿದ್ಧಲಿಂಗ ಸ್ವಾಮೀಜಿ ಹಾಗೂ ಮರಿಮಹಾಂತ ಶ್ರೀಗಳ ನೇತೃತ್ವದಲ್ಲಿ ಡಿ.4 ರಿಂದ 8 ರವರೆಗೆ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಹಾಗೂ ಧಾರ್ಮಿಕ, ಸಾಂಸ್ಕೃತಿಕ, ನಾನಾ ಸ್ಪರ್ಧಾ ಕಾರ್ಯಕ್ರಮಗಳು, ಡಿ.5 ರಂದು ಸರ್ವಧರ್ಮಗಳ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದೆ.

ಡಿ.4 ಗುರುವಾರ ಹೊಸ್ತಲ ಹುಣ್ಣಿಮೆಯ ದಿನ ಬೆಳಗ್ಗೆ 6ಗಂಟೆಗೆ



ಸಿದ್ದೇಶ್ವರ ದೇವರಿಗೆ ರುದ್ರಾಭಿಷೇಕ, ಮಹಾಮಂಗಳಾರತಿ, ನಾನಾ ಪೂಜಾ ಕೈಂಕರ್ಯ ನಡೆಯಲಿದ್ದು, 9 ಗಂಟೆಯಿಂದ ನಂದಿ ಧ್ವಜ ಹಾಗೂ ಜೋಡಿ ಕಳಸದ ಮೆರವಣಿಗೆ ಸಕಲ ವಾದ್ಯ ವೈಭವ ಹಾಗೂ ಸುಮಂಗಲಿಯರ ಕಳಸಾರತಿಯೊಂದಿಗೆ ಪಟ್ಟಣದ ಬೀದಿಗಳಲ್ಲಿ ನಡೆಯುವುದು.

ಸಾಯಂಕಾಲ 5 ಗಂಟೆಗೆ ಅನೇಕ ಹರ–ಗುರು ಚರಮೂರ್ತಿಗಳ ಸಾನ್ನಿಧ್ಯದಲ್ಲಿ ರಥೋತ್ಸವ ಜರುಗುವುದು.

ಸಂಜೆ 7 ಗಂಟೆಗೆ ನಡೆಯುವ ಧರ್ಮಸಭೆಯ ಸಾನ್ನಿಧ್ಯವನ್ನು ಶಿವಯೋಗಾಶ್ರಮದ ಸಿದ್ಧಲಿಂಗ ಸ್ವಾಮೀಜಿ ವಹಿಸುವರು. ಹುಬ್ಬಳ್ಳಿಯ ಎರಡೆತ್ತಿನ ಮಠದ ಸಿದ್ಧಲಿಂಗ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಕುಕನೂರಿನ ಮಹಾದೇವ ಶ್ರೀಗಳು, ಯಲಬುರ್ಗದ ಬಸವಲಿಂಗ ಶಿವಾಚಾರ್ಯರು, ಹಿಡಕಲ್ಲದ ಪ್ರಭು ಅಡವಿಸಿದ್ಧೇಶ್ವರ ಶ್ರೀಗಳು, ಅನಾವಾಲದ ಕೈಲಾಸಪತಿ ಶ್ರೀಗಳು, ಶಿಗಿಹಳ್ಳಿಯ ವೀರೇಶ ಶ್ರೀಗಳು, ಗರಗದ ಕುಮಾರದೇವರು ಹಾಗೂ ಗುಳೇದಗುಡ್ಡದ ಒಪ್ಪತ್ತೇಶ್ವರ ಶ್ರೀಗಳು ನೇತೃತ್ವ ವಹಿಸುವರು.

ಸಂಸದ ಪಿ.ಸಿ. ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸೇರಿ ಹಲವಾರು ಗಣ್ಯರು ಅತಿಥಿಗಳಾಗಿ ಆಗಮಿಸುವರು. ಡಿ.5 ರಂದು ಸಾಮೂಹಿಕ ವಿವಾಹ ಹಾಗೂ ಪುರಾಣ ಮಂಗಲ ಕಾರ್ಯಕ್ರಮಗಳು ಜರುಗಲಿವೆ. ಜಾತ್ರಾ ಮಹೋತ್ಸವದ ಅಂಗವಾಗಿ ಪಟ್ಟಣದ ವಿವಿಧ ಸಂಘಟನೆಗಳಿಂದ ಚಕ್ಕಡಿ ಓಟದ ಸ್ಪರ್ಧೆ, ಕುಸ್ತಿ ಪಂದ್ಯಾವಳಿ, ಉಚಿತ ಆರೋಗ್ಯ ತಪಾಸಣಾ ಶಿಬಿರ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಜಾತ್ರಾ ಮಹೋತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

## ಗುರಿ ಸಾಧನೆಗೆ ದೃಢಸಂಕಲ್ಪ, ಆತ್ಮವಿಶ್ವಾಸ ಮುಖ್ಯ : ಕುರೇರ



**ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ:** ದ್ಯಾರ್ಥಿಗಳು ಜೀವನದಲ್ಲಿ ಗುರಿ ಸಾಧಿಸಲು ದೃಢಸಂಕಲ್ಪ ಹಾಗೂ ಆತ್ಮವಿಶ್ವಾಸ ಬಹಳ ಮುಖ್ಯವೆಂದು ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಹೇಳಿದರು.


ನಗರದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಗೆ ಬುಧವಾರ ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಹಾಗೂ ಪ್ರೇರಣಾತ್ಮಕ ಮಾರ್ಗದರ್ಶನ ನೀಡಿ, ವಿಶೇಷವಾಗಿ 2ನೇ ಪಿಯುಸಿ ವರ್ಷವೇ ವಿದ್ಯಾರ್ಥಿಗಳ ಜೀವನದಲ್ಲಿನ ಬುನಾದಿ ಹಂತವಾಗಿದ್ದು, ಈ ಅವಧಿಯನ್ನು ಸದುಪಯೋಗಪಡಿಸಿಕೊಂಡರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ವೃತ್ತಿ ಸಾಧನೆ, ಶಿಸ್ತುಬದ್ದ ಜೀವನ, ಗುರಿ ಹಾಗೂ ಭವಿಷ್ಯದ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ ಎಂದರು. ದಿನನಿತ್ಯದ ಅಧ್ಯಯನ ಕ್ರಮ, ಪರೀಕ್ಷಾ ಸಿದ್ಧತೆ, ಸ್ಪರ್ಧಾತ್ಮಕ ಪರೀಕ್ಷೆಗಳ ಮಹತ್ವ ಹಾಗೂ ಮುಂದಿನ ಉನ್ನತ ಶಿಕ್ಷಣದ ಅವಕಾಶಗಳ ಬಗ್ಗೆ ಮಾಹಿತಿ ನೀಡಿದ ಅವರು, ಮೊಬೈಲ್ ಫೋನ್ ಮತ್ತು ಸಾಮಾಜಿಕ ಜಾಲತಾಣಗಳ ಅನಗತ್ಯ ಬಳಕೆಯನ್ನು ಕಡಿಮೆ ಮಾಡಿ, ಅದೇ ಸಮಯವನ್ನು ಪುಸ್ತಕ ಅಧ್ಯಯನ, ಅಭ್ಯಾಸ ಮತ್ತು ಆತ್ಮವಿಕಾಸಕ್ಕೆ ಬಳಸಿಕೊಳ್ಳುವಂತೆ ಸಲಹೆ ನೀಡಿದರು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಕೀಳರಿಮೆ ಇರಬಾರದು. ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಎಂದು ಕುರೇರ ಹೇಳಿದರು.

ಇಷ್ಟದ ವಿಷಯಕ್ಕಿಂತ ಕಷ್ಟವಾಗುವ ವಿಷಯಗಳಿಗೆ ಹೆಚ್ಚಿನ ಸಮಯ ನೀಡಬೇಕು. ಗುರಿ ಸ್ಪಷ್ಟವಾಗಿ ನಿರ್ಧರಿಸಿ, ದಿನಚರಿ ರೂಪಿಸಿಕೊಂಡು ಪಾಲಿಸಬೇಕು. ಸಮಯ ವ್ಯರ್ಥ ಮಾಡುವ ಅಭ್ಯಾಸಗಳಿಂದ ದೂರವಿದ್ದು, ಉತ್ತಮ ನಾಗರಿಕ ಮತ್ತು ಸಮಾಜಕ್ಕೆ ಉಪಯುಕ್ತ ವ್ಯಕ್ತಿಯಾಗಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಡದಾನಿ ಸೇರಿದಂತೆ ಕಾಲೇಜಿನ ಪ್ರಾಚಾರ್ಯರು ಉಪಸ್ಥಿತರಿದ್ದರು.

## ಡಿ. 7ರಂದು ಶ್ರೀ ಚಿಕ್ಕೇಶ್ವರ ಮಹಾಸ್ವಾಮಿಗಳ ಪುಣ್ಯಾರಾಧನೆ

ಕಲಬುರಗಿ: ಅಫಜಲಪೂರ ತಾಲೂಕಿನ ಶ್ರೀಮದ್ ಮುರುಝಾವದೀಶ್ವರ ಮಠದ ಶ್ರೀಮದ್ ಜಗದ್ಗುರು ಶ್ರೀ ಚಿಕ್ಕೇಶ್ವರ ಮಹಾಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮ, ಹಾಗೂ ಶತಾಯುಷಿಗಳಾದ ಪುಜ್ಯ ಶ್ರೀ ಚಿಕ್ಕೇಂದ್ರ ಮಹಾಸ್ವಾಮಿಗಳವರಿಗೆ ತುಲಭಾರ ಹಾಗೂ ವಿವಿಧ ಕ್ಷೇತ್ರದ 14 ಜನ ಸಾಧಕರಿಗೆ ಪ್ರಶಸ್ತಿ ಪ್ರದಾನ ಹಾಗೂ ಸಾಮೂಹಿಕ ಉಪನಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮೂರುಝಾವದೀಶ್ವರ ಮಠದ ಪೂಜ್ಯರಾದ ಶ್ರೀ ರಾಮಚಂದ್ರ ಮಹಾಸ್ವಾಮಿಗಳು ಹಾಗೂ ಅಫಜಲಪೂರ ಮೂರುಝಾವದೀಶ್ವರ ಮಠದ ಪೂಜ್ಯರಾದ ಬ್ರಹ್ಮಾನಂದ ಮಹಾಸ್ವಾಮಿಗಳು ಜಂಟಿಯಾಗಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಡಿ.7ರಂದು ಅಫಜಲಪೂರದ ನ್ಯಾಷನಲ್ ಫಂಕ್ಷನ್ ಹಾಲ್‌ನಲ್ಲಿ ನಡೆಯಲಿರುವ ಸಮಾರಂಭವನ್ನು ಅಫಜಲಪೂರ ಶಾಸಕರಾದ ಎಂ.ವೈ.



ಪಾಟೀಲ ಅವರು ಉದ್ಘಾಟಿಸುವರು.

ಸಮಾರಂಭವು ಮೂರುಝಾವದೀಶ್ವರ ಮಠದ ಶ್ರೀ ಚಿಕ್ಕೇಂದ್ರ ಮಹಾಸ್ವಾಮಿಗಳು ದಿವ್ಯಸಾನಿಧ್ಯ ವಹಿಸುವರು ಹಾಗೂ ಪೂಜ್ಯ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರ ಘನ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದಲಲಿ ಪಾವನ ಸಾನಿಧ್ಯವನ್ನು ಪೂಜ್ಯ ರಾಮಚಂದ್ರ ಮಹಾಸ್ವಾಮಿಗಳು ಅಜ್ಜೇಂದ್ರ ಮಹಾಸ್ವಾಮಿಗಳು , ಮಹೇಂದ್ರ ಮಹಾಸ್ವಾಮಿಗಳು ದೊಡ್ಡೇಂದ್ರ ಮಹಾಸ್ವಾಮಿಗಳು ಸಿದ್ದೇಶ್ವರಾನಂದ ಮಹಾಸ್ವಾಮಿಗಳು ವಹಿಸುವರು. ಸಮಾರಂಭದಲ್ಲಿ ವಿಶೇಷ ಅಹ್ವಾನಿತರಾಗಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಕೆ.ಪಿ. ನಂಜುಂಡಿ ವಿಶ್ವಕರ್ಮ, ಡಾ. ವಸಂತ ಮುರಳಿ ಆಚಾರ್ಯ, ರಿಷಿ ವಿಶ್ವಕರ್ಮ, ಬಲರಾಮ ವಿಶ್ವಕರ್ಮ ಅವರು ಪಾಲೊಳ್ಳಲಿದ್ದಾರೆ.

ಮಾಜಿ ಸಚಿವರಾದ ಮಾಲೀಕಯ್ಯಾ ಗುತ್ತೇದಾರ, ಕೆಕೆಆರ್‌ಟಿಸಿ ನಿಗಮ ಮಂಡಳಿ ಅಧ್ಯಕ್ಷ ಅರುಣಕುಮಾರ ಎಂ.ವೈ. ಪಾಟೀಲ, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ನೀತೀನ ಗುತ್ತೇದಾರ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಶಿವಕುಮಾರ ನಾಟೀಕಾರ ಅವರು ಕಾರ್ಯಕ್ರಮದ ಜ್ಯೋತಿ ಬೆಳಗಿಸುವರು. ವಿಶ್ವಕರ್ಮ ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಆಯ್.ಸಿ. ಪಂಚಾಳ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮರಂಭದಲ್ಲಿ ಫೋಟೋ ಪೂಜೆಯನ್ನಯ ವಿಶ್ವಕರ್ಮ ಹೋರಾಟ ಸಮಿತಿಯ ಅಧ್ಯಕ್ಷರಾದ ದೇವೇಂದ್ರ ದೇಸಾಯಿ ಕಲ್ಲೂರ ಹಾಗೂ ಶ್ರೀಶೈಲ ಎಸ್. ಸುತಾರ ಅವರು ನೆರವೇರಿಸುವರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖಂಡರುಗಳಾದ ಸಂಗ್ರಾಮಗೌಡ ಪಾಟೀಲ, ಚಂದ್ರಶೇಖರ ಕರಜಗಿ, ಚಂದ್ರಶೇಖರ ಪತ್ತಾರ, ಗಂಗಾಧರ ಪೋದ್ದಾರ ಸೇರಿದಂತೆ ಅನೇಕ ಗಣ್ಯರು ಪಾಲೊಳ್ಳಲಿದ್ದಾರೆಂದು ತಿಳಿಸಿದರು. ಅಂದಿನ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲೊಂಡು ರಾಜ್ಯಮಟ್ಟದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಇದೇ ಸಂದರ್ಭದಲ್ಲಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅಶೋಕ ಪೊದ್ದಾರ, ಕಮಲಾಕರ ಅರಣಕಲ್, ಶಿವಾನಂದ ಕಲ್ಲೂರ, ಶ್ರೀಮಂತ ಪತ್ತಾರ, ಮಹಾಂತೇಶ ಅಳ್ಳಗಿ, ಬೀಮಾಶಂಕರ ಬಡಿಗೇರ್, ರಾಮಚಂದ್ರ ವಿಶ್ವಕರ್ಮ, ಕಾಳಿದಾಸ ಶಹಬಾದ, ನಾಗೇಶ ವಿಶ್ವಕರ್ಮ ಸೇರಿದಂತೆ ಅನೇಕರಿದ್ದರು.

## ಶೋಷಿತ ವರ್ಗಗಳ ಅಭಿವೃದ್ಧಿಯೇ ನಮ್ಮ ಸರ್ಕಾರದ ಧ್ಯೇಯ: ಸಚಿವ ಸಂತೋಷ್ ಎಸ್.ಲಾಡ್

**ಮಲ್ಲಮ್ಮ ನುಡಿ ವಾರ್ತೆಬಳ್ಳಾರಿ:**
ಮುಖ್ಯಮಂತ್ರಿ ಸಿದ್ದರಾಮಯ್ಯನೇತೃತ್ವದ ಸರ್ಕಾರ ರಾಜ್ಯದ ಕಟ್ಟ ಕಡೆಯ ಶೋಷಿತ ವರ್ಗಗಳ ಅಭಿವೃದ್ಧಿಗಾಗಿ ಸೇವೆ ಮಾಡುವುದೇ ಮುಖ್ಯ ಧ್ಯೇಯವಾಗಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಅವರು ಹೇಳಿದರು.ಸಂಡೂರು ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ವಿಠಲಾಪುರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಸಂಡೂರು ಸಂಕಲ್ಪ ಸಮರ್ಪಣಾ ಸಮಾವೇಶ–2025 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ನನ್ನ ರಾಜಕೀಯ ಜೀವನ ಪ್ರಾರಂಭವಾಗಿದ್ದು, ಇದೇ ವಿಠಲಾಪುರ ಗ್ರಾಮದಿಂದ. ನನ್ನನ್ನು ಆಯ್ಕೆ ಮಾಡಿ ವಿಧಾನಸಭೆಗೆ ಕಳುಹಿಸಿದ್ದು ಇದೇ ಸಂಡೂರು ಜನತೆ. 2004 ರಲ್ಲಿ ಈ ಭಾಗದಲ್ಲಿ ವಿದ್ಯುತ್ ಕಂಬದಲ್ಲಿ 40 ವಾಟ್ ಬಲ್ಬ್ ನಿಂದ ಬೆಳಕು ಸಹ ನೆಲಕಚ್ಚುತ್ತಿರಲಿಲ್ಲ, ಅಷ್ಟೊಂದು ವಿದ್ಯುತ್ ಸಮಸ್ಯೆ ಇತ್ತು. ವಿಠಲಾಪುರ ಗ್ರಾಮದಲ್ಲಿಯೇ ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಮೂಲಕ ಗ್ರಾಮಗಳಲ್ಲಿ ಬೆಳಕು ಚೆಲ್ಲುವ ಕೆಲಸ ಮಾಡಲಾಯಿತು ಎಂದು ಸ್ಮರಿಸಿದ ಅವರು, ಹಂತ–ಹಂತವಾಗಿ ಅಭಿವೃದ್ಧಿಪಡಿಸುವ ಮೂಲಕ ಜಿಲ್ಲೆಯಲ್ಲಿ ಮಾದರಿ



ತಾಲ್ಲೂಕನ್ನಾಗಿ ಮಾಡಲಾಗಿದೆ ಎಂದು ತಿಳಿಸಿದರು.ಅಂದಿನ ಸಂದರ್ಭದಲ್ಲಿಯೇ ತುಂಗಾಭದ್ರಾ ಅಣೆಕಟ್ಟಿನಿಂದ ಈ ಭಾಗದ 80 ಗ್ರಾಮಗಳ 80 ಸಾವಿರ ಮನೆಗಳಿಗೆ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಿದ್ದು ನಮ್ಮ ಸರ್ಕಾರ. ಈಗ ಪಂಚ ಗ್ಯಾರಂಟಿ ಯೋಜನೆಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿ ವರ್ಷಕ್ಕೆ 60 ಸಾವಿರ ಕೋಟಿ ರೂ. ಗಳನ್ನು ಶೋಷಿತ ವರ್ಗಗಳ ಅಭಿವೃದ್ಧಿಗಾಗಿ ಖರ್ಚು ಮಾಡಲಾಗುತ್ತಿದೆ ಎಂದರು.ಸ

ಬಳಿಕ ವಿವಿಧ ಇಲಾಖೆಗಳ ಸೌಲಭ್ಯಗಳಡಿ ಸ್ವ–ಸಹಾಯ ಗುಂಪಿನ ಮಹಿಳೆಯರಿಗೆ ಚೆಕ್ ವಿತರಣೆ ಮಾಡಲಾಯಿತು. ಗರ್ಭಿಣಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನೆರವೇರಿಸಲಾಯಿತು.

ಕೃಷಿ ಇಲಾಖೆ ವತಿಯಿಂದ ಸೂಕ್ಷ್ಮ ನೀರಾವರಿ ಯೋಜನೆಯಡಿ ಮತ್ತು ಕೃಷಿಯಾಂತ್ರೀಕರಣ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳಿಗೆ ಆದೇಶ ಪ್ರತಿ ವಿತರಿಸಲಾಯಿತು. ಕಾರ್ಮಿಕ ಇಲಾಖೆ ವತಿಯಿಂದ ಅಸಂಘಟಿತ ವಲಯ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್, ಸಲಕರಣೆ ಕಿಟ್ ವಿತರಣೆ ಮಾಡಲಾಯಿತು. ಡಾ.ಅಂಬೇಡ್ಕರ್ ಅಭಿವೃದ್ಧಿ ನಿಗಮ, ದೇವರಾಜು ಅರಸು ನಿಗಮದಿಂದ ವಿವಿಧ ಸಾಲ–ಸೌಲಭ್ಯಗಳ ಆದೇಶ ಪ್ರತಿ ನೀಡಲಾಯಿತು. ತೋಟಗಾರಿ–ಕೆಯ ಸೌಲಭ್ಯ, ಕಂದಾಯ ಇಲಾಖೆಯ ಪಿಂಚಣಿ ಸೌಲಭ್ಯ ಪ್ರತಿ ವಿತರಿಸಲಾಯಿತು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಸಂವಿಧಾನ ಪ್ರಸ್ತಾವನೆಯನ್ನು ಬೋಧಿಸಲಾಯಿತು.

ಈ ಸಂದರ್ಭದಲ್ಲಿ ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಸಂಡೂರು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ನೂರುದ್ದೀನ್, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಎಸ್.ಎಲ್.ಸ್ವಾಮಿ., ತೋರಣಗಲ್ಲು ವಾಡಾ ಅಧ್ಯಕ್ಷ ಅಕ್ಷಯ್ ಅಶೋಕ್ ಲಾಡ್, ಅಂತಾಪುರ ಗ್ರಾಪಂ ಅಧ್ಯಕ್ಷ ಎನ್.ಹೊನ್ನೂರಸ್ವಾಮಿ, ವಿಠಲಾಪುರ ಗ್ರಾಪಂ ಅಧ್ಯಕ್ಷ ರಮೇಶ್, ಮೆಟ್ರಿಕಿ ಗ್ರಾಪಂ ಅಧ್ಯಕ್ಷ ವರಲಕ್ಷ್ಮಿ ರುದ್ರೇಶ್, ರಾಜಾಪುರ ಗ್ರಾಪಂ ಅಧ್ಯಕ್ಷ ಬಿ.ನಾಗೇಶ್, ಬಳ್ಳಾರಿ ಉಪವಿಭಾಗಾಧಿಕಾರಿ ರಾಜೇಶ್ ಹೆಚ್.ಡಿ ಸೇರಿದಂತೆ ಸಂಡೂರು ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಇಂದು ಸದ್ಧರ್ಮ ಪಾದಯಾತ್ರೆ


**ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**
ಹೊಸ್ತಿಲ ಹುಣ್ಣಿಮೆಯೆಂದು ಸದ್ಧರ್ಮ ಪಾದಯಾತ್ರೆ ಕಲ್ಬುರ್ಗಿ ಜಿಲ್ಲೆಯ ಕಮಲಾಪುರ ತಾಲೂಕಿನ ಶರಣ ಶಂಕರಲಿಂಗ ಆಶ್ರಮದ ಪೀಠಾಧಿಪತಿಗಳಾದ ಶ್ರೀ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರ ಪಾವನ ಸಾನಿಧ್ಯದಲ್ಲಿ ಇಂದು ಬೆಳಿಗ್ಗೆ 8 ಘಂಟೆಗೆ ಮುಲ್ಲಾಮಾರಿ ತೀರ ಕ್ಷೇತ್ರದ ಶರಣ ಶಂಕರಲಿಂಗ ಆಶ್ರಮದಿಂದ ಮನ್ನಾಏಖೇಳ್ಳಿ



ಗ್ರಾಮದ ಆದಿಶಕ್ತಿ ಬಾಲಮ್ಮ ತಾಯಿಯ ದೇವಸ್ಥಾನದ ವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಭಕ್ತಾಧಿಗಳು ಅಪ್ಪಾಜಿ ಅವರ ಜೊತೆಗೆ ಪಾದಯಾತ್ರೆಯಲ್ಲಿ ಪಾಲ್ಗೊಂಡು, ರಾತ್ರಿ 8 ಘಂ–ಟೆಗೆ ಜರುಗುವ ಶ್ರೀ ಬಾಲಮ್ಮ ದೇವಿಯ ಪಲ್ಲಕ್ಕಿ ಉತ್ಸವದಲ್ಲಿ ಭಾಗಿಯಾಗಿ ದರ್ಶನ ಪಡೆದು ಪಾವನರಾಗಬೇಕೆಂದು ಶರಣ ಶಂಕರಲಿಂಗ ಆಶ್ರಮದವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದತ್ತ ಜಯಂತಿ ಉತ್ಸವ ಇಂದು

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**
ಪ್ರತಿವರ್ಷದಂತೆ ಈ ವರ್ಷವೂ ಕೂಡಾ ಆಚರಿಸಲಾಗುವ ದತ್ತ ಜಯಂತಿ ಉತ್ಸವವನ್ನು ಇಂದು ದತ್ತ ನಗರದಲ್ಲಿ ಭಕ್ತಿಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥರಾದ ಮಧುಸೂಧನ್ ಶಾಸ್ತ್ರಿಗಳು ತಿಳಿಸಿದ್ದಾರೆ.



ಉತ್ಸವದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಸಾಂಪ್ರದಾಯಿಕ ವಿಧಿಯಲ್ಲಿ ನಡೆಯಲಿದ್ದು, ಭಕ್ತರ ಹೆಚ್ಚಿನ ಭಾಗವಹಿಸುವಿಕೆಯನ್ನು ನಿರೀಕ್ಷಿಸಲಾಗಿದೆ. ಇದೇ ಸಂದರ್ಭದಲ್ಲಿ ದೇವಾಲಯದ ಸದಸ್ಯರಾದ ವೇಣುಗೋಪಾಲ ಕುಲಕರ್ಣಿ ಅವರು ಕೂಡ ಕಾರ್ಯಕ್ರಮದ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ತಿಳಿಸಿದ್ದಾರೆ.

ದತ್ತನಾಮಸ್ಮರಣ, ಪೂಜೆ–ಪಾಠ, ಭಜನೆ–ಕೀರ್ತನೆ ಹಾಗೂ ಮಹಾಪ್ರಸಾದದಂತಹ ಧಾರ್ಮಿಕ ಕಾರ್ಯಕ್ರಮಗಳು ದಿನವಿಡೀ ಭಕ್ತರ ಸೇವೆಗೆ ಲಭ್ಯವಾಗುವಂತಿವೆ. ಭಕ್ತರಿಗೆ ಅಗತ್ಯವಾದ ಸೌಲಭ್ಯಗಳನ್ನೂ ವಹಿಸಲಾ ಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

## ಕರ್ನಾಟಕ ಪ್ರಾಂತ ರೈತ ಸಂಘ ವತಿಯಿಂದ ಪ್ರತಿಭಟನೆ



**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:** ರೈತರ ಕಬ್ಬು ಸಾಗಾಣಿಕೆ ಮಾಡುತ್ತಿರುವ ವಾಹನಗಳ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಟೋಲ್ ನಾಕಾ ವಸೂಲಿ ಮಾಡುತ್ತಿರುವುದು ಕೈ ಬಿಟ್ಟು ವಿನಾಯ್ತಿ ನಿಡಬೆಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ವತಿಯಿಂದ ಸಣ್ಣೂರು ಟೋಲ್ ನಾಕಾ ಬಂದ ಮಾಡಿ ಪ್ರತಿಭಟನೆ ನಡೆಸಿ ಕಬ್ಬು ಬೆಳೆಗಾರರ ರೈತರ ಮನವಿಯನ್ನು ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪಕರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಚೇರಿ ಪ್ರಧಾನ ವ್ಯವಸ್ಥಾಪಕರು, ಎಲ್ಲಾ ಟೋಲ್ ನಾಕಾ ಮತ್ತು ಮಾಡಬೂಳ ನಾಕಾ ಕಲಬುರಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೊಕೊಪಯೋಗಿ ಇಲಾಖೆ ಕಲಬುರಗಿ ಇವರಿಗೆ ಸಲ್ಲಿಸಲಾಯಿತು.

ಸಿಹಿ ಬೆಳೆದು ಕಹಿ ಉಣ್ಣುವ ಕಬ್ಬು ಬೆಳೆಗಾರರ, ಕಲಬುರ್ಗಿ ಜಿಲ್ಲೆ ತೊಗರಿ ನಾಡು ಎಂಬ ಕೀರ್ತಿಗೆ ಪಾತ್ರವಾದಂತೆ "ಇತ್ತಿಚೆಗೆ ಕಬ್ಬು ಬೆಳೆಗಾರರ ಕಬ್ಬಿನ ಮೇಲೆ ಅವಲಂಭಿತರಾದ ರೈತರ ಅತಿವೃಷ್ಟಿ ಮಳೆಯಿಂದ ರೈತರ ರೊಕ್ಕದ ಮಾಲು ತೋಗರಿ, ಹೆಸರು,ಉದ್ದು, ಸೋಯಾ, ಹತ್ತಿ, ಬೆಳೆಗಳು ಹಾನಿಯಾಗಿವೆ ಉಳಿದ ಒಂದೆ ಕಬ್ಬು, ಸಕ್ಕರೆ ಇಳುವರಿಯಲ್ಲಿ,ಕಬ್ಬಿನ ತೂಕದಲ್ಲಿ, ಮೊಸಾ ಮತ್ತು ಸೂಕ್ತವಾದ ??ಂಬಲ ಬೆಲೆ ಇಲ್ಲದೆ ಕಂಗಾಲಾಗುವಂತೆ ಮಾಡಿದೆ ಹಿಂತಾ ಸಂಕಷ್ಟದ ಸಮಯದಲ್ಲಿ ಕಬ್ಬು ಬೆಳೆಗಾರರಿಗೆ ಒಂದಲ್ಲಾ ಒಂದು ಕಡೆ ಅನ್ಯಾಯ ಮಾಡುತ್ತಲೆ ಬರುತ್ತಿದ್ದಾರೆ ಕಬ್ಬು ಬೆಳೆಗಾರರ ಮೇಲಿನ ಶೋಷಣೆ ತಡೆಗಟ್ಟಲು ಕಬ್ಬು ಬೆಳೆಗಾರರು ಆಗ್ರಹ.

ಸಣ್ಣೂರು ಟೋಲ್ ನಾಕಾ ರೈತರ ಕಬ್ಬಿನ ವಾಹನಗಳ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಾಣಿಕೆ ಮಾಡುತ್ತಿರುವ ರೈತರ ಹತ್ತಿರ ಹಣ ವಸೂಲಿ ಮಾಡಿ ರೈತರಿಗೆ ಅನ್ಯಾಯ ಮಾಡುತ್ತಿರುವ ಟೋಲ್ ನಾಕಾ ಗಳು ರೈತ ವಿರೋಧಿ ಗಳಾಗಿವೆ ನಿಜವಾಗಲೂ ರೈತರ ಕಬ್ಬು ಸಾಗಾಣಿಕೆ ಮಾಡುತ್ತಿರುವ ಲಾರಿಗಳು ಟ್ಯಾಕ್ಟರ್ ಗಳು ರೈತರ ಹತ್ತಿರ ಹಣ ವಸೂಲಿ ಮಾಡುವುದು ಕೈ ಬಿಟ್ಟು ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿ ಟೋಲ್ ಪ್ಲಾಜಾ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಾಣಿಕೆ ಮಾಡುತ್ತಿರುವ ಗಾಡಿಗಳಿಗೆ ವಿನಾಯ್ತಿ ನೀಡಲು ಒತ್ತಾಯ ಕಬ್ಬು ಬೆಳೆಗಾರರು ವಿರೋಧಿ ನೀತಿ ರೈತ ಸಂಘ ಉಗ್ರವಾಗಿ ಖಂಡಿಸುತ್ತದೆ ರಸ್ತೆಗಳು ಹದಗೆಟ್ಟು ಹೋಗಿವೆ ಟೋಲ್ ಫ್ಲಾಜಾ ಇದರ ಅವಧಿ ಎಲ್ಲಿಯವರೆಗೆ ಇದೆ ಯಂಬುದು ಯೋಚಿಸಲಿ ಮತ್ತು ಫಾಸ್ಟ್ ಟ್ಯಾಗ್ 10 ಸೆಕೆಂಡಗಳಲ್ಲಿ ವಾಹನಗಳು ದಾಟಬೆಕು ಇದು ಬಹಳ ಸಮಯ ಹಿಡಿಯುತ್ತದೆ ಇದರ ಮೇಲೆ ಕಾನೂನಿನ ಪ್ರಕಾರ ಕ್ರಮ ಜರುಗಿಸ ಬೆಕು ಹಾಗೂ ಸಣ್ಣೂರು ಬಳಿ ಇರುವ ಟೋಲ್ ಪ್ಲಾಜಾ ಮೇಲೆ ತನಿಖೆ ನಡೆಸಿ ಕಾನೂನಿನ ಪ್ರಕಾರ ಸಿಸ್ತಿನ ಕ್ರಮ ಜರುಗಿಸಬೆಕು ಒಂದು ವೇಳೆ ನಿರ್ಲಕ್ಷ ಧೋರಣೆ ತೋರಿದ್ದಲ್ಲಿ ಮುಂದಿನ ದಿನಗಳಲ್ಲಿ ಟೋಲ್ ಪ್ಲಾಜಾ ಬಂದ ಮಾಡಲು ಉಗ್ರವಾದ ಹೋರಾಟ ನಡೆಸಬೆಕಾಗುತ್ತದೆ ಎಂದು ಎಚ್ಚರಿಕೆ ಘಂಟೆ ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸುತ್ತದೆ. ಒಟ್ಟಾರೆ ಎರಡು ಸರ್ಕಾರಗಳ ಈ ನೀತಿಗಳು ಕಾರ್ಪೊರೇಟ್ ವಲಯದವನ್ನು ತುಷ್ಟಿಕರಣಗೊಳಿಸುವ ಹಂಬಲ ಹೊಂದಿವೆ ಇಂತಹ ನೀತಿಗಳ ವಿರುದ್ಧ ಕರ್ನಾಟಕ ಪ್ರಾಂತ ರೈತ ಸಂಘ ಕಲಬುರಗಿ ಜಿಲ್ಲಾ ಸಮಿತಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದೆ. ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಜಿಲ್ಲಾ ಅಧ್ಯಕ್ಷ ಶರಣಬಸಪ್ಪಾ ಮಮಶೆಟ್ಟಿ, ವೀರಣ್ಣ ಗಂಗಾಣಿ, ದಿಲಿಪ ನಾಗೂರೆ, ಶರಣಪ್ಪ ಪೂಜಾರಿ ವಚ್ಚಾ, ಜಾಫರ್ ಖಾನ್‌ಸಾಬ ಸೇರಿದಂತೆ ಇತರರು ಇದ್ದರು.

# ಆಧುನಿಕತೆಯಿಂದ ರಂಗಭೂಮಿ ಮರೆ: ರೇಣುಕಾಚಾರ್ಯ

• ಮಲ್ಲಮ್ಮ ನುಡಿ ಕೊಪ್ಪಳ

ಸಮಾಜದ ಅಂಕುಡೊಂಕುಗಳನ್ನು ತಿದ್ದುತ್ತಾ ಉತ್ತಮ ಸಮಾಜವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಒಳ್ಳೆಯ ಸಂದೇಶ ನೀಡುತ್ತ ಜನಪ್ರಿಯಗೊಂಡಿದ್ದ ವೃತ್ತಿ ರಂಗಭೂಮಿ ಇತ್ತೀಚಿನ ಟಿವಿ ಮತ್ತು ಮೊಬೈಲ್ ಹಾಗೂ ಅಂತರ್ಜಾಲದ ಆಧುನಿಕತೆಯಿಂದ ರಂಗಭೂಮಿ ಮರೆಯಾಗುತ್ತಿರುವುದು ವಿಷಾದನೀಯ ಸಂಗತಿ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಮೈಂದರ್ಗಿ ನಟ್ಟ ಸಂಘದ ಪ್ರಮುಖರಾದ ಮಲ್ಲಿಕಾರ್ಜುನ ಎಸ್ ಮಡ್ಡೆ ಎಂದು ಹೇಳಿದರು.

ಕುಕನೂರು ಪಟ್ಟಣದ ಎಸ್ ಬಿ ಐ ಬ್ಯಾಂಕ್ ಹಿಂದುಗಡೆ ಹಾಕಿರುವ ರಂಗ ಸಜ್ಜಕೆಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಲ್ಲಿಕಾರ್ಜುನ



ಎಸ್ ಮಡ್ಡೆ ಮಾತನಾಡುತ್ತ ನಮ್ಮ ಸಂಸ್ಥೆಯು ಮಹಾರಾಷ್ಟದ ಗಡಿನಾಡಾದ ಕೊಲ್ಲಾಪುರ ತಾಲೂಕಿನ ಮೈಂದರಗಿ ಗ್ರಾಮದಿಂದ ಕನ್ನಡ ಕಲಾದೇವಿಯ ಸೇವೆಯನ್ನು 1958ನೇ ಇಸ್ವಿಯಿಂದ ಮಾಡುತ್ತಾ ಬಂದಿದ್ದು ಅಂದಿನಿಂದ ಇಂದಿನವರೆಗೆ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡುತ್ತಾ ಕಷ್ಟನಷ್ಟಗಳನ್ನು ಎದುರಿಸುತ್ತಾ ಸಂಸ್ಥೆಯಾಗಿದ್ದು ಕುಕನೂರು ಪಟ್ಟಣದಲ್ಲಿ ಶ್ರೀ ಗುದ್ನೇಶ್ವರ ಜಾತ್ರೆಯ ಅಂಗವಾಗಿ ನಮ್ಮ ಸಂಸ್ಥೆಯಿಂದ *ಮಗ ಹೋದರು ಮಾಂಗಲ್ಯ ಬೇಕು ಎಂಬ ಸಾಮಾಜಿಕ ಸಂದೇಶವುಳ್ಳ ಪ್ರದರ್ಶಿಸುತ್ತಿದ್ದು ಕುಕನೂರು ಕಲಾ ಪ್ರೇಕ್ಷಕರ ತವರೂರು ಎಂದು ಹೆಸರುವಾಸಿಯಾಗಿದ್ದು ನಮ್ಮ ಸಂಸ್ಥೆಯ ನಾಟಕಗಳನ್ನು ವೀಕ್ಷಿಸಿ ಕಲಾವಿದರು ಮತ್ತು ವೃತ್ತಿ ರಂಗಭೂಮಿಯನ್ನು ಹರಸಬೇಕೆಂದು ಮನವಿ ಮಾಡಿಕೊಂಡರು.

ಈ ನಾಟಕದಲ್ಲಿ 500ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಹಾಸ್ಯಕಲಾವಿದನಾಗಿ ಗುರುತಿಸಿಕೊಂಡಿರುವ ಟೆನ್ನಿಸ್ ಕೃಷ್ಣ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುವವರು ಎಂದು ಹೇಳಿದರು.

ಈ ವೇಳೆಯಲ್ಲಿ ಸಂಸ್ಥೆಯ ಕಲಾವಿದರಾದ ಗುರುಲಿಂಗಯ್ಯ ಬರ್ಗಿ, ಪಾಪಣ್ಣ ಕೊಡಲಿ, ಶ್ರೀಕಾಂತ್ ಪಾಟ, ಲಕ್ಷ್ಮಣ ಮೈಂದರಗಿ, ನಿಜಗುಣ ಹಿರಿಯೂರು, ಶಂಕರ್ ಬಾಗೇವಾಡಿ ಪಾಲ್ಗೊಂಡಿದ್ದರು.

# ಮಾಣಿಕಪ್ರಭು ದೇವರ ದರ್ಶನ ಪಡೆದು ಪುನಿತರಾಗುತ್ತಿರುವ ಭಕ್ತರು

• ಮಲ್ಲಮ್ಮ ನುಡಿ ಮಾಣಿಕನಗರ

ಮಾಣಿಕಪ್ರಭು ಜಯಂತೋತ್ಸವದ ಅಂಗವಾಗಿ ಶ್ರೀ ಮಾಣಿಕಪ್ರಭು ದೇವರ ದಿವ್ಯದರ್ಶನ ಪಡೆದು ಭಕ್ತರು ಆತ್ಮಶಾಂತಿ ಮತ್ತು ಪುಣ್ಯವನ್ನು ಅನುಭವಿಸಿದರು. ಈ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ಜಿಲ್ಲಾ ಅಧ್ಯಕ್ಷ ವೆಂಕಟೇಶ ಕುಲಕರ್ಣಿ ಅವರು ಪತ್ರಿಕೆಯ ಜೊತೆ ಮಾತನಾಡಿ, "ಮಾಣಿಕಪ್ರಭು ಮಹಾರಾಜರ ದರ್ಶನ ಪಡೆಯುವುದು ಜೀವಿತದ ಮಹಾ ಭಾಗ್ಯ. ಭಕ್ತರ ಇಚ್ಛೆ–ಕಾಮನೆಗಳು ಪೂರ್ತಿಯಾಗಲಿ, ಪ್ರತಿಯೊಬ್ಬರ ಜೀವನದಲ್ಲಿ ಶಾಂತಿ, ಸಂತೃಪ್ತಿ ಮತ್ತು ಪ್ರಗತಿ ಹೆಚ್ಚಲಿ," ಎಂದು ತಿಳಿಸಿದರು.

ಮಠ ಪ್ರದೇಶದಲ್ಲಿ ಸಾವಿರಾರು ಭಕ್ತರು ಹರಿದುಬಂದು, ಸೇವೆ–ಪೂಜೆಗಳಲ್ಲಿ ಭಾಗವಹಿಸಿ ಭಕ್ತಿ ಭಾವನೆಯನ್ನೆರಪಿಸಿದರು. ಮಠ ಸಮಿತಿ, ಹಾಗೂ ಸ್ವಯಂಸೇವಕರು ಭಕ್ತರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸುತ್ತಿದ್ದಾರೆ. ಭಕ್ತರಿಗೆ ಯಾವುದೆ ತರಹದ ತೊಂದರೆ ಆಗದಂತೆ ದೇವಸ್ಥಾನ ಸಮಿತಿಯವರು ಶ್ರಮಿಸುತ್ತಿದ್ದಾರೆ ಎಂದರು. ಇಂದು ಶ್ರೀ ಮಾಣಿಕಪ್ರಭು ರವರ ಜನ್ಮೋತ್ಸವ ಇರುವುದರಿಂದ ಭಕ್ತರ ಸಂಖ್ಯೆ ಹೆಚ್ಚಾಗುತ್ತಲೇ ಇದೆ ಎಂದು ಪತ್ರಿಕೆಗೆ ಮಾಹಿತಿ ನೀಡಿದರು.

# ಆಸ್ಪತ್ರೆಯ ಮುಖ್ಯಸ್ಥನಿಂದ ಆರೋಗ್ಯ ಮಿತ್ರೆಗೆ ನಿಂದನೆ



• ಮಲ್ಲಮ್ಮ ನುಡಿ ಹುಣಸೂರು

ಸರ್ಕಾರದಿಂದ ಸಿಗುವ ಉಚಿತ ಚಿಕಿತ್ಸೆಗೆ ಸಾವಿರಾರು ರೂ ಹಣ ಪಡೆದಿರುವ ಬಗ್ಗೆ ಮಾಹಿತಿ ಪಡೆದ ಆರೋಗ್ಯ ಮಿತ್ರ ಕಾರ್ಯಕರ್ತೆಗೆ ಖಾಸಗಿ ಆಸ್ಪತ್ರೆ ಮುಖ್ಯಸ್ಥ ಅಸಭ್ಯವಾಗಿ ವರ್ತಿಸಿ, ನಿಂದಿಸಿ ಬೆದರಿಕೆ ಹಾಕಿರುವ ಬಗ್ಗೆ ನಗರದ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಘಟನೆ ನಡೆದಿದೆ.

ಹುಣಸೂರಿನ ಸಾರ್ವಜನಿಕ ಆಸ್ಪತ್ರೆ ಮತ್ತು ಹುಣಸೂರು ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಆರೋಗ್ಯ ಮಿತ್ರಾಗಿ ಸೇವೆ ಸಲ್ಲಿಸುತ್ತಿರುವ ಪೂರ್ಣಿಮಬಾಯಿರವರೇ ನಗರದ ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಡಾ ಲೋಹಿತ್ ರವರಿಂದ ನಿಂದನೆ ಹಾಗೂ ಬೆದರಿಕೆಗೆ ಒಳಗಾಗಿ ಪೋಲಿಸ್ ಠಾಣೆಗೆ ದೂರು ನೀಡಿದ್ದಾರೆ.

**ಘಟನೆ ವಿವರ:** ದಿನಾಂಕ:–27.11.2025 ರಂದು ಹುಣಸೂರಿನ ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಉದ್ದೂರು ಗ್ರಾಮದ ಪುಟ್ಟೇಗೌಡ ಎಂಬ ರೋಗಿಯು ಹೃದಯ ಸಂಬಂಧಿತ ಚಿಕಿತ್ಸೆ ಗಾಗಿ ವಿ.ಬಿ.ವಿ.ಆರ್.ಕೆ ಅಡಿಯಲಿ ದಾಖಲಾಗಿದ್ದು ಇವರನ್ನು ಪೂರ್ಣಿಮಬಾಯಿ ರವರು ಕೌನ್ಸಲಿಂಗ್ ಮಾಡಿ ನಿಮ್ಮ ಹೃದಯ ಸಂಬಂಧಿತ ಖಾಯಿಲೆಗೆ ಸರ್ಕಾರದ ವಿ.ಬಿ.ವಿ.ಆರ್.ಕೆ ಆಡಿಯಲಿ ನಿಮಗೆ ಉಚಿತ ಚಿಕಿತ್ಸೆಯನ್ನು ಪಡೆಯ ಬಹುದಾಗಿರುತ್ತದೆಂದು ತಿಳಿಸಿ ಎ.ಬಿ.ಎ.ಆರ್,ಕೆ ಅಡಿಯಲ್ಲಿ ದಾಖಲಾತಿಗಳಲ್ಲಿ ನೊಂದಾಯಿಸಿದ್ದಾರೆ.

ಸದರಿ ರೋಗಿಯು ದಿನಾಂಕ:–29.11.2025 ರಂದು ಪುಟ್ಟೇಗೌಡ ರವರು ಕಾವೇರಿ ಆಸ್ಪತ್ರೆಯಿಂದ ಬಿಡುಗಡೆಯಾಗುವ ಸಮಯದಲ್ಲಿ ರೋಗಿಯ ಮಗನಾದ ಶಿವರಾಜು ರವರಿಗೆ ನೀವು ಯಾವುದೇ ಹಣವನ್ನು ಕಟ್ಟಿಲ್ಲ ತಾನೇ ಎಂದು ಕೇಳಿದಕ್ಕೆ ಅವರು ಆಸ್ಪತ್ರೆಯವರು ನಮ್ಮಿಂದ 45 ಸಾವಿರ ರೂಪಾಯಿಗಳನ್ನು ಹೃದಯ ಚಿಕಿತ್ಸಾ ವೆಚ್ಚವೆಂದು ನಮ್ಮಿಂದ ಪಾವತಿಸಿಕೊಂಡಿದ್ದಾರೆಂದು ಮಾಹಿತಿ ನೀಡದ್ದು ಆ ಹಣವನ್ನು ಮತ್ತೆ ವಾಪಸ್ ಕೊಡಿಸಲು ನೀವು ಹಣ ಕಟ್ಟಿರುವ ಬಗ್ಗೆ ಪತ್ರದಲ್ಲಿ ಬರೆದು ಕೊಡಿ ಎಂದು ಪುಟ್ಟೇಗೌಡ ರವರ ಮಗ ಶಿವರಾಜು ರವರಿಗೆ ಹೇಳಿದೆ, ಆಗ ಶಿವರಾಜು ರವರು ಕಾವೇರಿ ಆಸ್ಪತ್ರೆಯವರು ತನ್ನ ತಂದೆ ಪುಟ್ಟೇಗೌಡ ರವರ ಹೃದಯ ಸಂಬಂದಿ ಚಿಕಿತ್ಸಾ ವೆಚ್ಚಕೆಂದು 45 ಸಾವಿರ ರೂಪಾಯಿಗಳನ್ನು ಕಟ್ಟಿಸಿಕೊಂಡಿರುವ ಬಗ್ಗೆ ಒಂದು ಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ಮಾಹಿತಿ ತಿಳಿದ ಆಸ್ಪತ್ರೆಯ ಮುಖ್ಯಸ್ಥ ಡಾ ಲೋಹಿತ್ ಹಾಗೂ ಆಸ್ಪತ್ರೆಯ 5–6 ಮಂದಿ ಸಿಬ್ಬಂದಿಗಳು ಏಕಾ ಏಕಿ ಬಂದು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಅಸಭ್ಯವಾಗಿ ವರ್ತಿಸಿ, ನಿಂದಿಸಿ ಬೆದರಿಕೆ ಹಾಕಿದ್ದಾರೆ. ಆದ್ದರಿಂದ ಈ ಬಗ್ಗೆ ಪ್ರಕರಣ ದಾಖಲಿಸಿ ಸದರಿಯವರ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸ ಬೇಕೆಂದು ಪೂರ್ಣಿಮಬಾಯಿ ಹುಣಸೂರು ನಗರ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

# ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯನ್ನು ರಕ್ಷಿಸಿದ ಪತ್ರಕರ್ತ, ವಿದ್ಯಾರ್ಥಿಗಳು

• ಮಲ್ಲಮ್ಮ ನುಡಿ ಬಳ್ಳಾರಿ



ಕುಟುಂಬ ಕಲಹದಿಂದ ಬೇಸತ್ತ ಬೆಸ್ಟ್ ಶಾಲೆಯಲ್ಲಿ ಕೆಲಸ ಮಾಡುವ ಮಹಿಳಾ ಸಿಬ್ಬಂದಿ ಇಂದು ಬುಧವಾರ ಬೆಳ್ಳಂಬೆಳಿಗ್ಗೆ ನಗರದ ಹೊಸಪೇಟೆ ರಸ್ತೆಯ ಎಚ್ಎಲ್ಸಿ ಕಾಲುವೆಯಲ್ಲಿ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ ಸದರಿ ಮಹಿಳೆಯನ್ನು ಪತ್ರಕರ್ತ, ವಿದ್ಯಾರ್ಥಿಗಳು ರಕ್ಷಣೆ ಮಾಡಿದ್ದಾರೆ.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಆವರಣದಲ್ಲಿ ಪತ್ರಕರ್ತ ಜಂಬುನಾಥ ಹಾಗೂ ವಿದ್ಯಾರ್ಥಿಗಳು ವಾಯು ವಿಹಾರದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಎಚ್–ಎಲ್ಸಿ ಕಾಲುವೆಯಲ್ಲಿ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯನ್ನು ರಕ್ಷಣೆ ಮಾಡಿದ್ದಾರೆ.

ನಂತರ ಮಹಿಳೆಯನ್ನು ರಸಿದಾಗ ತಾನು ಬೆಸ್ಟ್ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ವಿಚಾರಣೆ ಮಾಡಿದ ಸದರಿ ಮಹಿಳೆಯ ಕುಟುಂಬ ಬೆಸ್ಟ್ ಶಾಲೆಯ ಅವರಣದಲ್ಲಿರುವ ಆಶ್ರಯ ಒಂದರಲ್ಲಿ ಇದ್ದಾರೆ ಎಂದು ತಿಳಿದು ಬಂದಿದೆ.

ಮಂಗಳವಾರ ರಾತ್ರಿ ಪತಿ–ಪತ್ನಿ ಗಲಾಟೆ ಮಾಡಿಕೊಂಡು ಜೀವನದ ಮೇಲೆ ಬೇಜಾರು ಮಾಡಿಕೊಂಡು ಕಾಲುವೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧ–ರಿಸಿದ್ದೆ ಎಂದು ಆ ಮಹಿಳೆ ತಿಳಿಸಿದ್ದಾರೆ.

ಈ ವಿಷಯವನ್ನು ಪತ್ರಕರ್ತ ಜಂಬುನಾಥ ಫೋನ್ ಮುಖಾಂತರ ಕರೆ ಮಾಡಿ ಬೆಸ್ಟ್ ಶಾಲೆಯ ಸಿಬ್ಬಂದಿಗೆ ತಿಳಿಸಿದ್ದಾರೆ. ಬೆಸ್ಟ್ ಶಾಲೆಯ ಸಿಬ್ಬಂದಿ ಎಚ್ಎಲ್ಸಿ ಕಾಲುವೆ ಹತ್ತಿರ ಬಂದು ಆ ಮಹಿಳೆಯನ್ನು ಶಾಲೆಗೆ ಕರೆದುಕೊಂಡು ಹೋಗಿದ್ದಾರೆ.

# ಆಟೊ ಪಲ್ಟಿ: ಪುರಸಭೆ ನೌಕರ ಸಾವು

• ಮಲ್ಲಮ್ಮ ನುಡಿ ಕೆಂಭಾವಿ



ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಅಟೋ (ಟಂಟಂ) ಪಲ್ಟಿಯಾಗಿ ಪುರಸಭೆ ನೌಕರನೊಬ್ಬ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬುಧವಾರ ನಡೆದಿದೆ.

ಇಲ್ಲಿನ ಪುರಸಭೆಯಲ್ಲಿ ವಾಲ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹಣಮಂತ ( 51) ಸಾವಿಗೀಡಾಗಿದ್ದಾನೆ. ಪರಸನಹಳ್ಳಿ ಯಿಂದ ಕೆಂಭಾವಿಯತ್ತ ಬರುತ್ತಿದ್ದ ಆಟೋ ಬಸ್ ನಿಲ್ದಾಣದ ಹತ್ತಿರ ಬರುತ್ತಿದ್ದಂತೆ ಚಾಲಕನ ನಿಯಂತ್ರಣ ತಪ್ಪಿ ಈ ಘಟನೆ ಜರುಗಿದೆ ಎನ್ನಲಾಗಿದೆ. ಈ ಕುರಿತು ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅತ್ಯಾಚಾರಿಗೆ ಜೀವಾವಧಿ ಸಜೆ

**ಬೆಂಗಳೂರು:** ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಕರ್ನಾಟಕ ಹೈಕೋರ್ಟ್ ಬುಧವಾರ ಮತ್ತೊಂದು ಶಾಕ್ ನೀಡಿದೆ. ಅತ್ಯಾಚಾರ ಪ್ರಕರಣ–ಕ್ಕೆ ಸಂಬಂಧಿಸಿದಂತೆ ತಮಗೆ ವಿಧಿಸಲಾಗಿರುವ ಜೀವಾವಧಿ ಶಿಕ್ಷೆ ಅಮಾನತ್ತಿನಲ್ಲಿಟ್ಟು ಜಾಮೀನು ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಅವರು ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಇಂದು ವಜಾಗೊಳಿಸಿದೆ.ಅಪರಾಧದ ಗಂಭೀರತೆ ಮತ್ತು ಬಾಕಿ ಇರುವ ಇತರ ಪ್ರಕರಣಗಳ ಮೇಲಿನ ಸಂಭಾವ್ಯ ಪರಿಣಾಮದಿಂದಾಗಿ ಈ ಹಂತದಲ್ಲಿ ಜಾಮೀನು ನೀಡುವುದು ಸೂಕ್ತವಲ್ಲ ಎಂದಿದೆ ನ್ಯಾಯಾಲಯ.

# ಕಬ್ಬು ಸಾಗಿಸುತ್ತಿದ್ದ ಟ್ರ್ಯಾಕ್ಟರ್‌ಗೆ ಕಾರು ಡಿಕ್ಕಿ: ನಾಲ್ವರ ದುರ್ಮರಣ

• ಮಲ್ಲಮ್ಮ ನುಡಿ ಬಾಗಲಕೋಟೆ

ಜಿಲ್ಲೆಯ ಜಮಖಂಡಿ ತಾಲೂಕಿನ ಸಿದ್ದಾಪೂರ ಸಕ್ಕರೆ ಕಾರ್ಖಾನೆ ಬಳಿ ಮಂಗಳವಾರ ತಡರಾತ್ರಿ ಸಂಭವಿಸಿದ ಭೀಕರ ಅಪಘಾತದಲ್ಲಿ ನಾಲ್ವರು ಯುವಕರು ಸಾವನ್ನಪ್ಪಿದ್ದಾರೆ.

ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದಾಗ ಈ ದುರ್ಘಟನೆ ನಡೆದಿದ್ದು, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಿದ್ದಾಪೂರ ಗ್ರಾಮದ ವಿಶ್ವನಾಥ ಕಂಬಾರ(17), ಗಣೇಶ ಅರಳಿಮಟ್ಟಿ(20), ಪ್ರವೀಣ ಶೇಡಬಾಳ(22) ಸ್ಥಳದಲ್ಲೇ ಮೃತಪಟ್ಟರೆ, ಪ್ರಜ್ವಲ್ ಶೇಡಬಾಳ(17)ಆಸ್ಪತ್ರೆಯಲ್ಲಿ ಅಸುನೀಗಿದ್ದಾನೆ. ಸ್ನೇಹಿತರು ಸೇರಿ ತಡರಾತ್ರಿ ಶಿರೋಳ ಕಾಡಸಿದ್ದೇಶ್ವರ ದೇವರ ಜಾತ್ರೆಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಮಯದಲ್ಲಿ ಈ ಘಟನೆ ನಡೆದಿದೆ. ಕಬ್ಬು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಟೇಲರ್ ಗೆ ಹಿಂದಿನಿಂದ ರಭಸದಿಂದ ಡಿಕ್ಕಿ ಹೊಡೆದ ಪರಿಣಾಮ ಕಾರು ಟ್ರ್ಯಾಕ್ಟರ್ ಬುಡದಲ್ಲಿ ಸಿಕ್ಕಿ ಹಾಕಿಕೊಂಡಿದೆ. ಮೃತ ದೇಹಗಳನ್ನು ಪೋಲಿಸರು ಹೊರತೆಗೆದಿದ್ದಾರೆ.

ಜಮಖಂಡಿ ಗ್ರಾಮೀಣ ಠಾಣೆಯ ಪೋಲಿಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.





# ರಾಷ್ಟ್ರೀಯ ಪತ್ರಿಕಾ ದಿನಾಚರಣೆ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ



**ಬೆಂಗಳೂರು:** ಕರ್ನಾಟಕ ಮೀಡಿಯಾ & ನ್ಯೂಸ್ ಸೆಂಟರ್, ಪತ್ರಕರ್ತರ ವೇದಿಕೆ ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ವತಿಯಿಂದ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜನವರಿ ತಿಂಗಳಲ್ಲಿ ಹಮ್ಮಿಕೊಂಡಿರುವ ಗೋವಾ ಕನ್ನಡಿಗರ ಸಾಂಸ್ಕೃತಿಕ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ಸಂಗನ ಬಸಪ್ಪ. ಬಿರಾದಾರ ಹಾಗು ಪತ್ನಿ ಶ್ರೀಮತಿ ಮಾದೇವಿ ಹಾಗೂ ಕುಂಭ ಮೇಳ ಮೆರೆವಣಿಗೆಗೆ ಚಾಲನೆ ನೀಡಲಿರುವ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಜಂಟಿ ಕಾರ್ಯದರ್ಶಿ ಎಂಕೆ ನಿಸಾರ್ ಖಾನ್‌ರವನ್ನು ಕರ್ನಾಟಕ ವೇದಿಕೆ ಜಾಗೃತಿ ರಾಜ್ಯಾಧ್ಯಕ್ಷ ಹಾಗೂ ಗೋವಾ ಕನ್ನಡಿಗರ ಸಾಂಸ್ಕತಿಕ ಸಮ್ಮೇಳನದ ರೂವಾರಿ ಮಹೇಶ್ ಬಾಬು ಸುರ್ವೆ ನೇತೃತ್ವದ ತಂಡ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂಧರ್ಭದಲ್ಲಿ 30 ಕಲಾತಂಡಗಳಿಂದ ನೃತ್ಯ ಅಯೋಜಿಸಲಾಗಿತ್ತು.ಈ ವೇಳೆ ಗೋವಾ ಸಮ್ಮೇಳನದ ಸಂಚಾಲಕ ಗಾಣಚಾರಿ, ರಾಜ್ಯ ಕಾರ್ಯದರ್ಶಿ ನಂದೀಶ್ ,ಪತ್ರಕರ್ತ ಲೋಕೇಶ್ ಗೌಡ, ಸುಶೀಲ್, ವಿ.ಸಿ ,ತೇಜಸ್ವಿನಿ, ರೋಹಿಣಿ ಸುರ್ವೆ, ಚೈತ್ರ ಮಂಜುನಾಥ್ ಮತ್ತಿರರು ಇದ್ದರು.

# ವಿಕಲಚೇತನ ಪ್ರತಿಭೆಗಳಿಗೆ ಗೌರವ ಅಗತ್ಯ

## ವಿಶ್ವ ವಿಕಲಚೇತನರ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅಭಿಮತ

**ಕಲಬುರಗಿ:** "ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ. ವಿಶೇಷ ವಿಕಲಚೇತನರಲ್ಲಿರುವ ಕೌಶಲ್ಯಗಳನ್ನು ಗುರುತಿಸಿ ಅವರಿಗೆ ಅವಕಾಶಗಳನ್ನು ಕಲ್ಪಿಸುವುದು ಸಮಾಜದ ಜವಾಬ್ದಾರಿ," ಎಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರು ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಕಲಚೇತನರ ಸೇವಾ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಎಂ.ಆರ್.ಡಬ್ಲ್ಯೂ/ಯು.ಆರ್.ಡಬ್ಲ್ಯೂ/ವಿ.ಆರ್. ಡಬ್ಲ್ಯೂ ಸೇರಿದಂತೆ ಅನೇಕ ಸ್ವಯಂಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ "ಸಾಮಾಜಿಕ ಪ್ರಗತಿಯನ್ನು ಸಾಧಿಸಲು ವಿಕಲಚೇತನರ ಒಳಗೊಂಡ ಸಮಾಜಗಳನ್ನು ನಿರ್ಮಿಸೋಣ" ಎಂಬ 2025ರ ವಿಶ್ವ ಸಂಸ್ಥೆಯ ಘೋಷವಾಕ್ಯದೊಂದಿಗೆ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ 5,300 ಕ್ಕಿಂತ ಹೆಚ್ಚು ವಿಕಲಚೇತನರು ಮಾಸಾಶನ ಪಡೆಯುತ್ತಿದ್ದಾರೆ ಎಂದು ತಿಳಿಸಿ, "ಅಧಿಕಾರಿಗಳು ಮನೆಮನೆಗೆ ತೆರಳಿ ಆಧಾರ್ ಕಾರ್ಡ್ ಸೌಲಭ್ಯ ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಕೆಲವರು ಕೇಂದ್ರಗಳಿಗೆ ಭೇಟಿ ನೀಡಿ ಆಧಾರ್



ಕಾರ್ಡ್ ಮಾಡಿಸಿಕೊಳ್ಳುತ್ತಿದ್ದಾರೆ," ಎಂದರು.

"ಕೃಷಿ, ತೋಟಗಾರಿಕೆ, ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಮಟ್ಟದ ವಿವಿಧ ಸರ್ಕಾರೀ ಇಲಾಖೆಗಳಲ್ಲೂ ವಿಕಲಚೇತನರಿಗೆ 5% ನೇಮಕಾತಿ ಮೀಸಲಾತಿ ನೀಡಲಾಗುತ್ತಿದೆ. ನರೇಗಾದಲ್ಲಿ ವಿಕಲಚೇತನರು ಅರ್ಧ ಕೆಲಸ ಮಾಡಿದರೂ ಅವರಿಗೆ ಪೂರ್ಣ ಸಂಬಳ ನೀಡಲಾಗುತ್ತಿದೆ," ಎಂದು ಜಿಲ್ಲಾಧಿಕಾರಿ ತಿಳಿಸಿದರು.

"ವಿಕಲಚೇತನರು ಎಂದರೆ ಹೀನ ಭಾವನೆ ಬೇಡ. ನನ್ನ ಬ್ಯಾಚ್‌ನ ಹೀರಾಸಿಂಗ್ ಅವರು ಐಎಎಸ್ ಪಾಸಾಗಿ ದೇಶದಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದರು. ವಿಕಲಚೇತನರು ನಮ್ಮಿಗಿಂತ ಹೆಚ್ಚು ಸಾಮರ್ಥ್ಯ ಹೊಂದಿರುವವರು," ಎಂದು ಅವರು ಶ್ಲಾಘಿಸಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹಾಗೂ ವಿಕಲಚೇತನರು ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸಾದಿಕ್ ಹುಸೇನ್ ಖಾನ್ ಮಾತನಾಡಿ, "ವಿಶ್ವ ವಿಕಲಚೇತನರ ದಿನವನ್ನು 1992ರಲ್ಲಿ ವಿಶ್ವಸಂಸ್ಥೆ ಸ್ಥಾಪಿಸಿದ್ದು, ಸಮಾಜದಲ್ಲಿ ಸಮಾನ ಹಕ್ಕುಗಳನ್ನು ವಿಕಲಚೇತನರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶ," ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ ಸ್ವಾಗತಿಸಿದರು. ಮಹಾನಗರ ಪಾಲಿಕೆಯ ಮಹಾಪೌರ್ತಿ ವರ್ಷಾ ರಾಜೀವ ಜಾನೆ ಮಾತನಾಡಿ, "ಅಂಧ ಶಾಲೆಯ ವಿದ್ಯಾರ್ಥಿಗಳ ಕಲೆ–ಪ್ರತಿಭೆ ಶ್ಲಾಘನೀಯ. ಮುಂದೆಯೂ ಸರ್ಕಾರದ ಸೌಲಭ್ಯಗಳನ್ನು ಅವರನ್ನು ತಲುಪಿಸಲಾಗುತ್ತದೆ," ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ ಮಾತನಾಡಿ, "ನನ್ನ ತಂದೆ ಗುಂಡಪ್ಪ ಕೋರವಾರ ಅವರು ಅಂಧ ಮಕ್ಕಳ ಶಾಲೆ ಪ್ರಾರಂಭಿಸಿದಾಗ 7 ವಿದ್ಯಾರ್ಥಿಗಳು ಇದ್ದರು, ಈಗ 150 ಕ್ಕೂ ಹೆಚ್ಚು ಮಕ್ಕಳು ಇಲ್ಲಿದ್ದಾರೆ," ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ (ಪಿ.ಎಂ.ಡಿ.ಸಿ.) ಯೋಜನೆಯಡಿ ವಿಕಲಚೇತನರಿಗೆ ಬ್ಯಾಟರಿ ಚಾಲಿತ ಸೈಕಲ್‌ಗಳನ್ನು ವಿತರಿಸಿದರು.

ವಿಶೇಷ ವಿಕಲಚೇತನರಿಂದ ನೃತ್ಯ–ಗಾಯನ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿವಿಧ ವಿಶೇಷ ಶಾಲೆಗಳ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯೂ ಜರುಗಿತು. ಕಲಬುರಗಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ. ಶಿವರಾಜ ಶಾಸ್ತ್ರಿಯವರು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ಜೇಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸಂಗಮೇಶ್ವರ, ಕಿವುಡ ಮತ್ತು ಮೂಕ ಮಕ್ಕಳ ಸಂಘದ ಅಧ್ಯಕ್ಷ ಧನಂಜಯ, ಹೈದ್ರಾಬಾದ್ ಕರ್ನಾಟಕ ಅಂಗವಿಕಲರ ಕ್ಷೇಮಾಭಿವೃದ್ಧಿ ಸಮಿತಿಯ ದತ್ತು ಅಗರವಾಲ್, ಲಕ್ಷ್ಮೀಕಾಂತ ಕುಲಕರ್ಣಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪ್ರಾಂಶುಪಾಲರು, ಸ್ವಯಂ ಸೇವಾ ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಭಾಗವಹಿಸಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.